ದಶಧರ್ಮದ ಸಾರ

★

: ಲೇಖಕರು :
ವಿದ್ಯಾಲಂಕಾರ, ಧರ್ಮನೇತಾ, ಆಚಾರ್ಯರತ್ನ,
ಸ್ವಸ್ತಿಶ್ರೀ ೧೦೮, ದೇಶಭೂಷಣ ಮುನಿಮಹಾರಾಜರು.

★

: ಪ್ರಕಾಶಕರು :
ಧ. ಶ್ರೀ. ಭುಜಬಲಿ ಅಪ್ಪಾರಾಯ ಯಲಗುದರಿ,
ಧ. ಶ್ರೀ. ಸತ್ಯಪ್ಪ ಲಕ್ಕಪ್ಪ ಶಿರಹಟ್ಟಿ,
ಸಾ॥ ಮಹೇಶವಾಡಿ, ತಾ॥ ಅಥಣಿ, ಜಿ॥ ಬೆಳಗಾವಿ.

ದಶಲಕ್ಷಣ ಉಪದೇಶ ಸಾರಸಂಗ್ರಹ

ಅಥವಾ

ದಶಧರ್ಮದ ಸಾರ

★

: ಲೇಖಕರು :

ವಿದ್ಯಾಲಂಕಾರ, ಧರ್ಮನೇತಾ, ಆಚಾರ್ಯರತ್ನ,

ಸ್ವಸ್ತಿ ಶ್ರೀ ೧೦೮, ದೇಶಭೂಷಣ ಮುನಿಮಹಾರಾಜರು.

★

: ಪ್ರಕಾಶಕರು :

ಧ. ಶ್ರೀ. ಭುಜಬಲಿ ಅಪ್ಪಾರಾಯ ಯಲಗುದರಿ,

ಧ. ಶ್ರೀ. ಸತ್ಯಪ್ಪ ಲಕ್ಕಪ್ಪ ಶಿರಹಟ್ಟಿ,

ಸಾ॥ ಮಹೀಶವಾಡಿ, ತಾ॥ ಅಥಣಿ, ಜಿ॥ ಬೆಳಗಾವಿ.

ಪ್ರಥಮ ಮುದ್ರಣ :-೧೯೬೨.
(ಶ್ರೀ. ಮಹಾವೀರ ನಿರ್ವಾಣಾಬ್ದ ೨೬೨೫)
ಶಾ. ಶ. ೧೮೮೪.
(೧೦೦೦ ಪ್ರತಿಗಳು)

★

★

ಬೆಲೆ : ಸದುಪಯೋಗ.

-: ಮುದ್ರಕರು :-
ಟಿ. ಎ. ಕುಲಕರ್ಣಿ,
ನೂತನ ಪ್ರಿಂಟಿಂಗ ಪ್ರೆಸ್, ಬೆಳಗಾವಿ.

ಪ್ರಸ್ತಾವನೆ


ಸ್ವಸ್ತಿಶ್ರೀ 108, ಆಚಾರ್ಯ ವಿದ್ಯಾಲಂಕಾರ, ಧರ್ಮನೇತಾ ಶ್ರೀ. ದೇಶ ಭೂಷಣ ಮುನಿ ಮಹಾರಾಜರು ದಶಲಕ್ಷಣ ಪರ್ವದಲ್ಲಿ ಶ್ರಾವಕರಿಗೆ ಮಾಡಿದ ಉಪದೇಶ ಸಾರಸಂಗ್ರಹವನ್ನು 'ದಶಧರ್ಮದ ಸಾರ' ಎಂಬ ಹೆಸರಿನಿಂದ ಗ್ರಂಥರೂಪದಲ್ಲಿ ಪ್ರಕಟಿಸಲು ನಮ್ಮ ಮನಸ್ಸಿನಲ್ಲಿ ಪ್ರೇರಣೆಯಾಯಿತು. ಈ ಸದ್‌ಭಾವನೆಯನ್ನು ಆಚಾರ್ಯ ಶ್ರೀಗಳವರ ಮುಂದೆ ವ್ಯಕ್ತಪಡಿಸಿದಾಗ ಅವರು ಸಂತೋಷದಿಂದ ಒಪ್ಪಿಕೊಂಡು ಭವ್ಯ ಜನರಿಗೆ ಇದನ್ನು ಪುಕ್ಕಟೆಯಾಗಿ ಹಂಚಲು ಹೇಳಿದರು. ಮುನಿಮಹಾರಾಜರ ಆಶೀರ್ವಾದದಿಂದ ಇಂದು ಗ್ರಂಥವು ಮೂರ್ತಸ್ವರೂಪ ತಾಳಿದೆ. ಮುಮುಕ್ಷು ಜೀವಿಗಳು ಈ ಗ್ರಂಥವನ್ನು ಸಂಪಾದಿಸಿ ಸದುಪಯೋಗ ಮಾಡಿಕೊಂಡರೆ ನಮ್ಮ ಶ್ರಮ ಸಾರ್ಥಕವಾಯಿತೆಂದು ಭಾವಿಸಿದ್ದೇವೆ.

ಈ ಶಾಸ್ತ್ರದಾನವು ಜೈನಶ್ರಾವಕ ಮಂಡಳಿಗೆ ಪ್ರಚೋದನೆ ಇತ್ತು ಇಂಥ ಹಲವಾರು ಗ್ರಂಥಗಳು ಪ್ರಕಟವಾದರೆ, ಅಹಿಂಸಾ ಪರಮೋ ಧರ್ಮದ ಪ್ರಚಾರ ಕಾರ್ಯದ ಪುಣ್ಯಸಾಗರವೇ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ. ಆ ಸಾಗರವಲ್ಲಿ ನೀವು–ನಾವುಗಳೆಲ್ಲ ಮಿಂದು ಜನ್ಮಸಾರ್ಥಕ ಮಾಡಿಕೊಳ್ಳೋಣ.

ಆಚಾರ್ಯ ಶ್ರೀಗಳವರ ಉಪದೇಶವನ್ನು ಬರೆದಿಟ್ಟುಕೊಂಡು ಅಚ್ಚಿಗೆ ಗ್ರಂಥವನ್ನು ಸಿದ್ಧಗೊಳಿಸಿಕೊಟ್ಟ ಮಹನೀಯರಿಗೂ, ಕರಡು ಪ್ರತಿ ತಿದ್ದಿಕೊಟ್ಟವರಿಗೂ, ಸುಂದರವಾಗಿ ಅಚ್ಚು ಮಾಡಿಕೊಟ್ಟ ನೂತನ ಪ್ರಿಂಟಿಂಗ ಪ್ರೆಸ್ಸಿನ ಒಡೆಯರಿಗೂ ನಾವು ಋಣಿಯಾಗಿದ್ದೇವೆ.

ಮಹೀಶವಾಡಿ;
ಡಿಶೆಂಬರ 1962. } — ಪ್ರಕಾಶಕರು.

ಅನುಕ್ರಮಣಿಕೆ



ವಿದ್ಯಾಲಂಕಾರ, ಧರ್ಮನೇತಾ, ಆಚಾರ್ಯರತ್ನ,
ಸ್ವಸ್ತಿಶ್ರೀ ೧೦೮, ದೇಶಭೂಷಣ ಮುನಿಮಹಾರಾಜರು.



ಧ. ಶ್ರೀ. ಭುಜಬಲಿ ಅಪ್ಪಾರಾಯ ಯಲಗುದರೆ,
ಸಾ|| ಮಹಿಷವಾಡಿ, (ತಾ. ಅಥಣಿ).

ರಾಜನೂ ಕೂಡ ಆ ಕನ್ನೆಯ ಮೇಲೆ ರೂಪವತಿಯಾಗಿದ್ದರಿಂದ ಅತ್ಯಂತ ಪ್ರೇಮ ಮಾಡುತ್ತಿದ್ದನು, ಆ ಚಿಕ್ಕ ಬಾಲೆಯು ರೂಪವತಿ ಬಹಳ ವಿದ್ಯಾವತಿ ಆಗಿದ್ದರೂ ಕೂಡ, ಆಕೆಯಲ್ಲಿ ಕ್ರೋಧವೂ ಕೂಡ ಮೇರೆಯಿಲ್ಲದೆ ಇತ್ತು. ಇದ ಕೋಸ್ಕರ ಯಾವನಾದರೂ ತಪ್ಪಿ ಒಮ್ಮೊಮ್ಮೆ ಅವಳಿಗೆ ತೂ, ಎಂದು ಶಬ್ದ ವನ್ನು ಆಕೆಗೆ ಉದ್ದೇಶಿಸಿ ಮಾತನಾಡಿದರೆ ಆ ಕನ್ನೆಯ ಶರೀರವು ಮತ್ತು ಮುಖಮಂಡಲವು ಅತ್ಯಂತ ಕ್ರೋಧದಿಂದ ಕೆಂಪಾಗುತ್ತಿತ್ತು. ಮತ್ತು ತೂ ಯೆಂದವರ ಮೇಲೆ ಹೊಡೆಯಲಿಕ್ಕೆ ಹೋಗುತ್ತಿದ್ದಳು, ಯಾಕಂದರೆ ಪ್ರಾಣಿ ಗಳ ರುಚಿ ಮತ್ತು ಸ್ವಭಾವವು ವಿಚಿತ್ರವಾಗಿರುತ್ತದೆ, ಜನಗಳ ತೂ ವೆಂಬ ಶಬ್ದದಿಂದ ಆಕೆ ಸಿಟ್ಟಾಗುತ್ತಿದ್ದಳು. ಸಿಟ್ಟಾದಳೆಂದು ತಿಳಿದು ಜನರು ಮತ್ತಿಷ್ಟು ಆಗೆಕೆ ಸಿಟ್ಟು ಬರುವಂತೆ ತೂ ತೂ ಶಬ್ದದ ಉಚ್ಚಾರಣೆಯನ್ನು ಹೆಚ್ಚಾಗಿ ಮಾಡಹತ್ತಿದರು. ಹೀಗೆ ಮಾಡಹತ್ತಿರುವಾಗ ಆ ಕನ್ನೆಯು ತೂ ಎಂಬ ಶಬ್ದ ವನ್ನು ಉಚ್ಚರಿಸಿದವರಿಗೆ ಕಲ್ಲು ಮಣ್ಣು ಹೆಂಡೆಗಳನ್ನು ಕೈಯಲ್ಲಿ ತಕ್ಕೊಂಡು ಅವರಿಗೆ ಬೀಸಾಡಲಿಕ್ಕೆ ಹಿಂಬಾಲಿಸುತಿದ್ದಳು. ಹೀಗೆಯೇ ಆಗುತ್ತ ಹೋಗಲು, ಜನರು ಆಕೆಗೆ ತೂಕಾರಿ ಎಂಬ ಹೆಸರನ್ನಿಟ್ಟು ತೂಕಾರಿ ಎಂದು ಕರೆಯಹತ್ತಿದ್ದ ರಿಂದ ಆಕೆಯ ಹೆಸರು ತೂಕಾರಿ ಎಂದು ರೂಢಿ ಬಿದ್ದುಬಿಟ್ಟಿತು. ತೂಕಾರಿ ಎಂದ ಕೂಡಲೆಯೇ ಎಷ್ಟೋ ಬೈಗಳನ್ನು ಬೈಯುವಳು. ಎಷ್ಟೋ ಜನರಿಗೆ ಕಲ್ಲುಗಳಿಂದ ಹೊಯ್ಯುವಳು. ಆದರೆ ಜನರು ರಾಜನ ಭಯದಿಂದ ಏನೂ ಆ ಕನ್ನೆಗೆ ತಿರಿಗಿ ಮಾತನಾಡುವ ಶಕ್ತಿ ಪಡೆದಿದ್ದಿಲ್ಲ.

ಮುಂದೆ ಆ ಕನ್ನೆಯು ವಯಸ್ಸಿಗೆ ಬಂದನಂತರ ಆ ಕನ್ಯೆಯ ಕ್ರೋಧ ಸ್ವಭಾವ ಹಾಗೇ ಇದ್ದುದರಿಂದ ಯಾರೂ ಆಕೆಯ ಕೂಡ ಮದುವೆ ಮಾಡಿಕೊಳ್ಳ ಲಿಕ್ಕೆ ಒಪ್ಪಲಾರರಾದರು. ಆದ್ದರಿಂದ ಆಕೆಯ ಮದುವೆಯು ಆಗದೇ ನಿಂತು ಹೋಯಿತು. ಮುಂದೆ ಒಬ್ಬ ಯಾವನೋ ಜೂಜು ಆಡುವ ಜುಗಾರಿಯು ಜೂಜಾಟದೊಳಗೆ ಸೋತು ಹೋದದ್ದರಿಂದ ಅವನಲ್ಲಿ ಗೆದ್ದುಕೊಂಡ ಜುಗಾರಿಗೆ ತಿರುಗಿ ಅಷ್ಟು ಹಣ ತುಂಬುವ ಶಕ್ತಿ ಇಲ್ಲದ್ದರಿಂದ ಅವನನ್ನು ಒಂದು ಕಾಡಿ ನಲ್ಲಿ ತಂದು ಜನರು ಹೋಗು ಬರುವ ಬೀದಿಯಲ್ಲಿ ಅವನ ಕೊರಳಲ್ಲಿ ಒಂದು ಕವಡೆಯನ್ನು (ಅಥವಾ ಕಪರ್ದಿ) ಕಟ್ಟಿ ಮತ್ತು ಒಂದು ಗಿಡಕ್ಕೆ ಕಟ್ಟಿ ಬಡಿಗೆಯಿಂದ ಹೊಡಿಯುತ್ತಿದ್ದರು.

ಆಗ ಬ್ರಾಹ್ಮಣನು ಅದೇ ದಾರಿ ಹಿಡಿದು ಯಾವದೋ ಒಂದು ಊರಿಗೆ ಹೋಗುತ್ತಿರಲು ಈ ಜುಗಾರಿಯನ್ನು ಮರಕ್ಕೆ ಕಟ್ಟಿ ಬಡಿಯುವಾಗ ಈ ಕಷ್ಟ ದಶೆಯನ್ನು ನೋಡಿ ಆ ಬ್ರಾಹ್ಮಣನು ಆ ಜುಗಾರಿಯನ್ನು ಉದ್ದೇಶಿಸಿ ಹೇಳಿದ ನೇನಂದರೆ ನಿನಗೆ ನಾನು ಸಾಕಷ್ಟು ಹಣವನ್ನು ಕೊಡುತ್ತೇನೆ. ಮತ್ತು ನಾನು ನಿನ್ನನ್ನು ಈ ಕಷ್ಟದಿಂದ ಬಿಡಿಸಿಕೊಳ್ಳುತ್ತೇನೆ. ಆದರೆ ನನ್ನದೊಂದು ಮಾತು ಕೇಳಿ ಅದಕ್ಕೆ ಒಪ್ಪುತ್ತೇನೆ ಎಂದು ಹೇಳಿದರೆ ನಾನು ನಿನ್ನನ್ನು ಬಿಡಿಸಿಕೊಳ್ಳು ತ್ತೇನೆ. ಅದೇನಂದರೆ ನನಗೆ ಒಬ್ಬಳೆ ಮಗಳಿದ್ದಾಳೆ. ಆಕೆಗೆ ತೂ ಎಂದು ಕೂಗಿದರೆ ಅವರನ್ನು ಹೊಡೆಯಲಿಕ್ಕೆ ಹೋಗುತ್ತಾಳೆ, ಆದ್ದರಿಂದ ಅಕೆಗೆ ತುಕಾರಿ ಎಂದು ಜನರೂಢಿಯಿಂದ ಹೆಸರು ಬಿದ್ದಿದೆ. ಮತ್ತು ಆಕೆಯು ಅತ್ಯಂತ ಕ್ರೋಧಿ ಇದ್ದಾಳೆ. ಆದ್ದರಿಂದ ಆಕೆಯನ್ನು ಯಾರೂ ಲಗ್ನವಾಗಲು ಒಪ್ಪಲಾರರು. ಆದ್ದರಿಂದ ನೀನು ಆಕೆಯ ಗೂಡ ಲಗ್ನವಾಗುವೆನೆಂದು ನಂಬಿ ದರೆ ನಾನು ನಿನ್ನನ್ನು ಬಿಡಿಸಿಕೊಂಡು ಹೋಗುತ್ತೇನೆ. ಎನ್ನುವ ಮಾತಿಗೆ ಆ ಜೂಜುಗಾರನು (ಬ್ರಾಹ್ಮಣನ ಮಾತಿಗೆ) ಒಪ್ಪಿದನು. ಮತ್ತು ಲಗ್ನವಾಗಿ ■ ಜುಗಾರಿಯು ತೂಕಾರಿ ಎಂಬ ಬ್ರಾಹ್ಮಣ ಕನ್ನೆಯ ಜೊತೆ ಸುಖದಿಂದ ಇದ್ದನು.

ಹೇಳುವ ತಾತ್ಪರ್ಯವೇನಂದರೆ ಕ್ರೋಧಿಯಾಗುವದರಿಂದ ಒಬ್ಬ ಕವ ಡೆಯ ಕಿಮ್ಮತ್ತಿನ ಜುಗಾರಿಯ ಗೂಡ ಬ್ರಾಹ್ಮಣ ರೂಪವತಿ ಮತ್ತು ವಿದ್ಯಾ ವಂತ ಕನ್ನೆಯೂ ಲಗ್ನವಾಗಬೇಕಾಯಿತು. ಮುಂದೆ ಕೆಲವು ದಿವಸದ ಮೇಲೆ ಆಕೆಯ ಪತಿಯು ರಾಜಸಭೆಯಿಂದ ಮರಳಿ ಮನೆಗೆ ಬರಬೇಕಾದರೆ ಅವನಿಗೆ ಹೆಚ್ಚು ರಾತ್ರಿಯಾಯಿತು. ಆಗ ತೂಕಾರಿಯು ನಿದ್ರೆಯಲ್ಲಿದ್ದಳು. ಆಗ ಪತಿಯು ಬಂದು ಬಾಗಿಲು ಬಡೆದರೂ ಎಚ್ಚರಾಗಲಿಲ್ಲ. ಆ ಮೇಲೆ ಅವನು ತೂಕಾರಿ ಎಂದು ಕೂಗಿದ ಕೂಡಲೆ ಆಕೆಗೆ ಸಿಟ್ಟು ಬಂದು ಅದೇ ಕ್ಷಣದಲ್ಲಿ ಮನೆಯನ್ನು ಬಿಟ್ಟು ಹೊರಕ್ಕೆಬಿದ್ದು ರಾತ್ರಿಗೆ ಒಂದು ಕಾಡಿನಲ್ಲಿ ಕಳ್ಳರ ಕೈಗೆ ಬಿದ್ದಳು. ಆಗ ಆಕೆಯ ಶೀಲ ಭಂಗಮಾಡುವ ವೇಳೆಯಲ್ಲಿ ಅಲ್ಲಿಯ ವನ ದೇವತೆಗಳು ಬಂದು ಆಕೆಯನ್ನು ರಕ್ಷಿಸಿದರು. ಮರಳಿ ಆ ಕಳ್ಳರ ಕೈಯಿಂದ ಉಳಿದು ಮುಂದಕ್ಕೆ ಹೋಗುವಾಗ ಒಬ್ಬ ವ್ಯಾಪಾರಿಯ ಕೈಗೆ ಸಿಕ್ಕಳು. ಆಗ ವ್ಯಾಪಾರಿಯು ಕೂಡ ಆಕಳ್ಳರಂತೆಯೆ ಕುಭಾವನೆಯ ದೃಷ್ಟಿಯನ್ನಿಟ್ಟು ಉಪಸರ್ಗ ಮಾಡುವಾಗ ವನದೇವತೆಗಳು ಬಂದು ರಕ್ಷಣೆ ಮಾಡಿದರು. ಆಗ

ವಣಿಕರು ಆಕೆಯ ಮೇಲೆ ಮುನಿಸಾಗಿ ಅವರು ಆಕೆಯನ್ನು ಓರ್ವರಕ್ತದಿಂದ ಬಟ್ಟೆಗಳನ್ನು ಚಿತ್ರರೂಪವಾಗಿ ಅಚ್ಚು ಮಾಡುವವನ ಕೈಯಲ್ಲಿ ಮಾರಿಬಿಟ್ಟರು. ಆಗ ಆ ಬಣ್ಣಗಾರನು ಎಂಟೆಂಟುದಿವಸ ಅಥವಾ ಹದಿನೈದು ದಿವಸಗಳಿಗೊಮ್ಮೊಮ್ಮೆ ಆಕೆಯ ಮೈಗೆ ಜಿಗಳೆಗಳನ್ನು ಮೆತ್ತಿಸಿ ರಕ್ತವನ್ನು ಹೀರಿಸಿಕೊಂಡು ಬಟ್ಟೆಗಳನ್ನು ರಂಗಿಸುತ್ತಿದ್ದನು. ಮತ್ತು ಆಕೆಯ ಮಸ್ತಕವನ್ನು ಎಂಟೆಂಟು ದಿವಸಕ್ಕೊಮ್ಮೆ ಕೊಯ್ದು ರಕ್ತವನ್ನು ಹೀರಿಕೊಳ್ಳುತ್ತಿದ್ದನು. ಪುನಃ ಅವನು ಬಂದು ವನಸ್ಪತಿ ಔಷಧವನ್ನು ತಿಕ್ಕಿ ಹಚ್ಚಿ ಘಾಯಗಳನ್ನು ಮಾಯಿಸಿಬಿಡುತ್ತಿದ್ದನು. ಈ ರೀತಿ ಎಷ್ಟೋ ತಿಂಗಳ ಅವಧಿಯವರೆಗೆ ನಡೆದು ಬಿಡುತ್ತಿತ್ತು. ಆಕೆಯ ತಲೆಯನ್ನು ಹರಿದು ರಕ್ತತಕ್ಕೊಳ್ಳುವದರಿಂದ ಆಕೆಗೆ ನೋವಿನ ವೇದನೆಯು ತಾಳಲಾರದಾಯಿತು. ಆಳವಾದ ವೇದನೆಯನ್ನು ಸಹಿಸಬೇಕಾಯಿತು. ಇಂಥ ಆಪತ್ತುಬರುವ ಕಾರಣಗಳೇನಂದರೆ ಕ್ರೋಧಮಾಡಿದ ಫಲವೆಂದು ತಿಳಿಯಬೇಕು. ಕೆಲವುದಿವಸ ಕಳೆದು ಹೋದ ಮೇಲೆ ಆಕೆಯ ಭಾಗ್ಯವಶದಿಂದ ಅವಳ ಕಕ್ಕನು ಅಕಸ್ಮಾತ್ತಾಗಿ ಅಲ್ಲಿಗೆ ಬಿಜಯಂಗಯಿಸಿದನು. ಆಗ ಅಲ್ಲಿರುವ ಈ ತೂಕಾರಿಯನ್ನು ನೋಡಿ ಆಶ್ಚರ್ಯವಾಗಿ ನೀನು ಇಲ್ಲಿ ಇರುವ ಕಾರಣವೇನೆಂದು ಕೇಳಲಾಗಿ ಆಕೆಯು ತನ್ನ ಹಿಂದಿನ ಆಗಿ ಹೋಗಿರ್ದ ವೃತ್ತಾಂತವನ್ನು ಹೇಳಲಾಗಿ ಆಕೆಯ ಕಕ್ಕನು ಆ ರಂಗಾರಿಗೆ ಕೆಲವು ಹಣ ಕೊಟ್ಟು ಆಕೆಯನ್ನು ಬಿಡಿಸಿಕೊಂಡು ಮನೆಗೆ ಕರೆದುಕೊಂಡು ಹೋಗಲು ಆಕೆಗೆ ಪಶ್ಚಾತ್ತಾಪವಾದದ್ದೇನಂದರೆ ಈ ವರೆಗೆ ನನಗೆ ಆಗುವ ತೊಂದರೆ ಯಾವ ಕಾರಣದಿಂದ ಆದವು ಅಂದರೆ ನಾನು ಮೂರ್ಖತನದಿಂದ ಕ್ರೋಧ ಮಾಡಿದ ಫಲದಿಂದಲೇ ಈ ಕಷ್ಟವನ್ನು ನನಗೆ ಅನುಭವಿಸಬೇಕಾಯಿತು. ಎಂದು ಮನದೊಳಗೆ ಪಶ್ಚಾತ್ತಾಪ ಮಾಡಿಕೊಂಡು ನಾನು ಇಲ್ಲಿಂದ ಮೊದಲಾಗಿ ಮುಂದೆ ನಾನು ಇನ್ನು ಕ್ರೋಧ ಮಾಢಲಿಕ್ಕಿಲ್ಲೆಂದು ಪ್ರತಿಜ್ಞೆ ಮಾಡಿಕೊಂಡು ಸುಖದಿಂದ ಕಾಲ ಕಳೆಯ ಹತ್ತಿದಳು. ತಾತ್ಪರ್ಯವೇನಂದರೆ ಕ್ರೋಧವು ಮಹಾ ಅನರ್ಥ ಮಾಡುವದಾಗಿದೆ ಎಂದು ಜ್ಞಾನಿ ಜನರು ಕ್ರೋಧವನ್ನು ತೊರೆಯುವದೇ ಮೋಕ್ಷಮಾರ್ಗದ ಬೀದಿ ಯೆಂದು ತಿಳಿಯಬೇಕು.

ಕ್ರೋಧದಂತಹ ಶತ್ರುಗಳು ಈ ಜಗತ್ತಿನಲ್ಲಿ ಇನ್ನಾರಿಲ್ಲ
ಕ್ಷಮಾಹನೆ ಔರಕೋ ಅರು ಕ್ರೋಧ ಹನೆ ಆಪಕೊ ।

ನೋಡಿ, ಯಾವ ದೊಡ್ಡ ದೊಡ್ಡ ಶಸ್ತ್ರಧಾರಿಗಳಾದ ಕ್ಷತ್ರಿಯರು ಅನೇಕ ಚೇಷ್ಟೆಗಳನ್ನು ಮಾಡಿದರೂ ಕೂಡ ಅವು ವಶವಾಗುವದಿಲ್ಲ. ಆ ಸಿಂಹ ವ್ಯಾಘ್ರಾದಿ ಮೊದಲಾದ ಘಾತಕ ಜೀವಿಗಳು ಸಂಸಾರದಲ್ಲಿರುವ ಎಲ್ಲ ಪ್ರಾಣಿಗಳನ್ನು ಭಯಭೀತಮಾಡಿಬಿಡುತ್ತವೆ. ಅವು ಇಷ್ಟು ಕ್ರೂರಪ್ರಾಣಿಗಳಿದ್ದರೂ ಕೂಡ ಕ್ಷಮಾವಂತರಾದ ಮಹಾನುಭಾವರನ್ನು ಕಂಡಕೂಡಲೇ ಶಾಂತಭಾವವನ್ನು ತಾಳುತ್ತವೆ. ಕ್ಷಮಾವಂತ ಪುರುಷನಿಗೆ ಯಾವಾಗ್ಯೂ ಶತ್ರುಗಳು ಇರುವದಿಲ್ಲ. ನೋಡಿ, ಯಾವಾಗ ಯಾವನೊ ಪುರುಷನು ಯಾವನೊಬ್ಬ ಅನ್ಯ ಪುರುಷನ ಮೇಲೆ ಸ್ವಲ್ಪ ಕ್ರೋಧ ಮಾಡುತ್ತಾನೆ. ಮತ್ತು ಆ ಕ್ರೋಧಮಾಡುವ ಮನುಷ್ಯನ ಕಡೆಗೆ ಗಮನಿಸದೆ ಸುಮ್ಮನಿದ್ದರೆ ಆವಾಗ ಕ್ರೋಧಿಯು ಸುಮ್ಮನಿದ್ದ ಮನುಷ್ಯನನ್ನು ನೋಡಿ ಲಜ್ಜಿತನಾಗಿ ಪಶ್ಚಾತಾಪ ಮಾಡಿಕೊಳ್ಳುತ್ತಾನೆ. (ಹೀಗೆ ಕ್ಷಮೆಯ ಪ್ರಭಾವವನ್ನು ಹೇಳುತ್ತಾರೆ.)

ಪುಷ್ಪಕೋಟಿ ಸಮಮ್ ಸ್ತೋತ್ರಂ ಸ್ತೋತ್ರಕೋಟಿ ಸಮಮ್ ಜಪಃ॥
ಜಪಕೋಟಿ ಸಮಂ ಧ್ಯಾನಂ ಧ್ಯಾನಕೋಟಿ ಸಮಂ ಕ್ಷಮಾ ॥

ಒಂದು ಕೋಟಿ ಪುಷ್ಪಗಳನ್ನು ಅರ್ಚಿಸುವದರಿಂದುಂಟಾಗುಷ್ಟು ಪುಣ್ಯಫಲವು ದೇವರ ಒಂದು ಸ್ತೋತ್ರದಿಂದ ಉಂಟಾಗುವದು. ಒಂದು ಕೋಟಿ ಸ್ತೋತ್ರದಿಂದ ಉಂಟಾಗುವಷ್ಟು ಫಲವು ಸ್ಪಷ್ಟವಾಗಿ ಭಗವಂತನ ಒಂದು ನಾಮೋಚ್ಚರಣೆಯ ಜಪವನ್ನು ಮಾಡುವದರಿಂದ ಉಂಟಾಗುವದು. ಒಂದು ಕೋಟಿ ಜಪಗಳಿಂದುಂಟಾಗುವಷ್ಟು ಫಲವು ಧ್ಯಾನದಿಂದುಂಟಾಗುವದು. ಒಂದು ಕೋಟಿ ಧ್ಯಾನದಿಂದ ಆಗುವಷ್ಟು ಫಲವು ಒಂದು ಕ್ಷಮೆಯಿಂದ ಉಂಟಾಗುವದು.

ಕ್ಷಮೆಯು ಇಲ್ಲದಿದ್ದರೆ ಕೋಟಿ ಪುಷ್ಪಗಳಿಂದುಂಟಾದ ಪುಣ್ಯರಾಶಿಯನ್ನು ಕ್ರೋಧವು ನಾಶಮಾಡುವದೆಂದೂ ಅದಕ್ಕೆ ವಿರೋಧಿಯಾದ ಕ್ಷಮೆ ಒಂದು ಇದ್ದರೆ ಆ ಪುಣ್ಯರಾಶಿಯು ನಿರಾಬಾಧವಾಗಿರುವದೆಂದು ತಿಳಿದು ಅವೆಲ್ಲಕ್ಕಿಂತಲೂ ಕ್ಷಮೆಯೇ ಶ್ರೇಷ್ಠವೆಂದು ಮುಖ್ಯಾಭಿಪ್ರಾಯವಾಗಿರುತ್ತದೆ.

ಕೇಳಿರಿಃ–ಕ್ರೋಧದಿಂದ ಆಗುವ ಹಾನಿ:-An angry man opens his mouth and shuts his eyes.

ಕ್ರೋಧಿ ಮನುಷ್ಯನು ಮಣಿಯುಳ್ಳ ಸರ್ಪದಂತೆ ಗುಣಯುಕ್ತವಾಗಿದ್ದರೂ ಪ್ರಶಂಸೆಗೆ ಪಾತ್ರವಾಗುವದಿಲ್ಲ. ಕ್ರೋಧಿ ಪುರುಷನ ವ್ರತ ಜಪ ತಪ ನೇಮ ಉಪವಾಸ ಸಂಯಮ ದಾನ ಪೂಜಾ ಸ್ವಾಧ್ಯಾಯ ವಿದ್ಯಾ ಮೊದಲಾದ ಸಮಸ್ತ ಗುಣಗಳು ಇದ್ದರೂ ಒಂದು ಕ್ಷಣಾಂತರದಲ್ಲಿಯೇ ಭಸ್ಮವಾಗುಗುತ್ತವೆ. ಕ್ರೋಧವಿದ್ದವರ ದೈವವು ನಷ್ಟವಾಗುತ್ತದೆ. ಬುದ್ಧಿ ನಷ್ಟವಾಗುತ್ತದೆ. ಮುಖ ನೇತ್ರಗಳು ಕೆಂಪಗೆ ಆಗುವವು. ಶರೀರದಲ್ಲಿ ನಡಗುಹುಟ್ಟುತ್ತದೆ. ರೋಮಾಂಚಗಳು ಎದ್ದುನಿಲ್ಲುತ್ತವೆ. ವಿಚಾರಶಕ್ತಿ ನಷ್ಟವಾಗುತ್ತದೆ. ದಯೆಯು ಹೊರಟು ಹೋಗುತ್ತದೆ. ಮಿತ್ರತೆ ಬದಲಾಗಿ ಶತೃತ್ವವು ವೃದ್ಧಿಯಾಗುತ್ತದೆ. ಅಪಯಶವು ಹಬ್ಬುತ್ತದೆ. ದರಿದ್ರತೆಯೂ ಬಂದು ಸುತ್ತುತ್ತದೆ. ಇವುಗಳ ಹೊರ್ತಾಗಿ ಅನೇಕ ತೊಂದರೆಗಳು ಬಂದು ಸೇರುತ್ತವೆ. ಇದಕ್ಕೋಸ್ಕರ ಸುಖಾಭಿಲಾಷಿಗಳಾದ ಸತ್ಪುರುಷರು ಯಾವಾಗಲೂ ಕ್ಷಮೆಯನ್ನು ಧರಿಸಬೇಕು. ಒಂದು ವೇಳೆ ಯಾವನಾದರೂ ಬಂದು ದುರ್ವಚನವನ್ನಾಡುತ್ತಿದ್ದರೆ ಆ ವೇಳೆಯಲ್ಲಿ ತನ್ನಲ್ಲಿ ವಿಚಾರಿಸುವದೇನಂದರೆ ಅವನು ಕ್ರೋಧ ಮಾಡುವ ಕಾರಣವೇನು? ನಾನು ಅವನಲ್ಲಿ ಎಳ್ಳಷ್ಟು ಅಪರಾಧ ಮಾಡಿದ್ದರೆ ಆಗ ಅವನು ನನ್ನ ಮೇಲೆ ಕ್ರೋಧ ಮಾಡಿ ದುರ್ವಚನ ಆಡುವದು ಯೋಗ್ಯವಾಗಿದೆ. ನಾನು ಹೀಗೆ ಅವನ ಮೇಲೆ ಏನು ಅನರ್ಥ ಮಾಡಿದ್ದುಂಟು? ಇವನ ಪರಿಣಾಮದಲ್ಲಿ ಕ್ರೋಧಭಾವವು ಯಾಕೆ ಉತ್ಪನ್ನವಾಯಿತು?

ಇದಕ್ಕೆ ನಾನು ಪೂರ್ವಜನ್ಮದಲ್ಲಿ ಇವನಿಗೆ ದುಃಖ ಕೊಟ್ಟಿರಬಹುದು. ಇನ್ನು ನಾನು ಇವನಲ್ಲಿ ಕ್ಷಮೆಯನ್ನು ಬೇಡುವದೇ ಉಚಿತಮಾರ್ಗವು. ಮತ್ತು ಇದರ ಸಲುವಾಗಿ ಅವನು ತನ್ನ ಪೂರ್ವ ಕರ್ಮದ ಆಲೋಚನೆಯನ್ನು ಮಾಡಿ ಸ್ವನಿಂದೆಯನ್ನು ಮಾಡಿಕೊಳ್ಳುತ್ತ ಆ ಪುರುಷನಿಂದ ನಮ್ರವಾದ ಶಬ್ದಗಳಲ್ಲಿ ಕ್ಷಮೆಯನ್ನು ಬೇಡಿ ಅವನ ಕ್ರೋಧವನ್ನು ಶಾಂತಗೊಳಿಸುತ್ತಾನೆ. ಮತ್ತು ತನ್ನಲ್ಲಿ ತಾನೆ ಅಣುಮಾತ್ರ ಕ್ರೋಧವು ಬಾರದಂತೆ ಇರುತ್ತಾನೆ, ಒಂದು ವೇಳೆ ಯಾರಾದರೂ ನಿಷ್ಕಾರಣ ಕ್ರೋಧಮಾಡಿ ದುರ್ವಚನಗಳನ್ನಾಡುತ್ತಿದ್ದರೆ, ಅವನು ತನ್ನಲ್ಲಿ ವಿಚಾರಿಸುವದೇನಂದರೆ ಇಲ್ಲಿ ನನ್ನಲ್ಲಿ ಎಳ್ಳಷ್ಟು ದೋಷವಿಲ್ಲ. ಕಾರಣ ಪೂರ್ವದಲ್ಲಿ ನಾನು ಏನಾದರೂ ಕ್ರೋಧವಾಗುವಂತೆ ಮಾಡಿರಬೇಕು. ಆದ್ದರಿಂದ ಇದನ್ನು ಮನಸ್ಸಿನಲ್ಲಿ ವಿಚಾರಿಸಿ ಬಂದಂಥ ಉಪ

ಸರ್ಗವನ್ನೂ ಸಹಿಸಿಕೊಂಡು ಸಮಾಧಿ ಮರಣಸಹಿತವಾಗಿ ಪ್ರಾಣವನ್ನು ಬಿಟ್ಟರೆ ನನ್ನ ಕಲ್ಯಾಣವಾಗುವದು—ಎಂದು ಯೋಚಿಸಿ ವಿಚಾರಿಸುವ ದೇನಂದರೆ-

ಖಮ್ಮಾಮಿ ಸವ್ವಜೀವಾನಂ । ಸವ್ವೇ ಜೀವಾ ಖಮಂತುಮೆ ॥
ಮಿತ್ತಿಮ ಸವ್ವಭೂತೇಷು । ವೈರಂ ಮಜ್ಝಮಂ ನ ಕೇನವಿ ॥

ನಾನು ಈ ಎಲ್ಲ ಜೀವಗಳಲ್ಲಿ ಕ್ಷಮೆಯಯಾಚೆಯನ್ನು ಮಾಡುವೆನು. ಎಲ್ಲ ಜೀವಿಗಳು ನನ್ನ ಮೇಲೆ ಕ್ಷಮೆ ಮಾಡಲಿ. ನನ್ನಲ್ಲಿ ಎಲ್ಲ ಜೀವಗಳಲ್ಲಿ ಮೈತ್ರಿ ಭಾವವಿದೆ ನನ್ನಲ್ಲಿ ಯಾವ ಜೀವಗಳಲ್ಲಿಯೂ ವೈರಭಾವವಿಲ್ಲ. ಆದ್ದರಿಂದ ಕ್ಷಮೆ ಭಾವವನ್ನೇ ವಹಿಸುವದು ಉತ್ತಮ.

ಇತಿ ಉತ್ತಮ ಕ್ಷಮಾಧರ್ಮಾಂಗಾಯನಮಃ

॥ ಸಮಾಪ್ತ ॥

೨ ಉತ್ತಮ ಮಾರ್ದವ ಧರ್ಮಃ

ನಯಿನಂ ಛಿಂದಂತಿ ಶಸ್ತ್ರಾಣಿ ನಯಿನಂ ದಹತಿ ಪಾವಕಃ ||
ನಯಿನಂ ಕ್ಲೇಶಯಂತ್ಯಾದೊ ನಶೋಷಯತಿ ಮಾರುತಃ

ಯಾವ ಜೀವನು ಧರ್ಮವನ್ನು ತಿಳಿಯುತ್ತಾನೆಯೋ, ಅಂಥ ಜೀವನಿಗೆ ಖಚಿತವಾಗಿರುವದೇನಂದರೆ ಎಲ್ಲ ಜೀವಗಳಲ್ಲಿ ಯಾವತ್ತು ಮೃದುತ್ವ ಭಾವವನ್ನು ಇಟ್ಟು ತನ್ನ ಪರಿಣಾಮುವನ್ನು ಕೋಮಲವಾಗಿನಿಸಿಕೊಂಡು ತನ್ನ ಕಠೋರ ಪರಿಣಾಮನ್ನು ಸರ್ವಥಾ ತೊರೆದು ಬಿಡುವದೇ ಮಾರ್ದವ ಗುಣವಾಗಿದೆ. ಯಾವನ ಹೃದಯದಲ್ಲಿ ಕೋಮಲತೆಯು ಇರುವದೋ ಅವನಿಗೆ ಯಾವ ರೀತಿಯಿಂದಲೂ ಕಷ್ಟವಿಲ್ಲವೆಂದು ತಿಳಿಯಬೇಕು. ಈ ಮೃದುಭಾವವು ಸ್ವರ್ಗ ಮೋಕ್ಷವನ್ನು ಕೊಡುವದಾಗಿದೆ ಮತ್ತು ಸಂಸಾರವನ್ನು ನಾಶಮಾಡುವದಾಗಿದೆ. ಮಾನ ಕಷಾಯವು ಅನೇಕ ರೀತ್ರಿಯಿಂದ ಮಾನ ಹಾನಿಯನ್ನು ಮಾಡುವಂಥದಾಗಿದೆ.

ಬಿಡದೆ ಕಷಾಯಮಂ ಸುಡದೆ ಇಂದ್ರಿಯತೃಷ್ಣೆಗಳಂ ಪರೀಷಹ |
ಕ್ಕೊಡನಿದಿರಾಗಿ ಗೆಲ್ಲದೆ ಸುಗುಪ್ತಿಗಳಂ ಪುಗದಾತ್ಮನಂ ಮಲಂ |
ಬಿಡಿದೊಡಲಿಂದೆ ಬೇರ್ಪಡಿಸಿ ನೋಡದೆ ಸುಮ್ಮನೆ ಕರ್ಮಶತ್ರುವೆ |
ಬಿಡು ಬಿಡು ಪೋಗೆನಲ್ಕುಡಿಗೆ ಪೋದಪುದೇ ಅಪರಾಜಿತೇಶ್ವರಾ |

ಕಷಾಯವನ್ನು ಬಿಡದೆ, ಇಂದ್ರಿಯ ಹಸಿವೆಯನ್ನು ಸುಡದೆ, ಕರ್ಮಗಳಿಗೆದುರಾಗಿ ನಿಲ್ಲದೆ, ಸುಗುಪ್ತಿಗಳನ್ನು ಪ್ರವೇಶಿಸದೆ, ಮಲದಿಂದ ತುಂಬಿದ ಶರೀರವನ್ನು ಆತ್ಮನಿಂದ ಬೇರೆ ಮಾಡಿ ನೋಡದೆ, ಸುಮ್ಮನೆ ಕರ್ಮಶತ್ರುವೆ, ಬಿಡುಬಿಡು ಹೋಗೆಂದರೆ ಹೋಗುವುದೆ ?

ಮಾನೀ ಪುರುಷನು ಸತತವಾಗಿ ಚಿಂತನೆಯುಳ್ಳವನಾಗಿರುತ್ತಾನೆ. ಅಂದರೆ ಯಾವ ರೀತಿಯಿಂದಲೂ ನನ್ನ ಮಾನಕ್ಕೆ ಹಾನಿಯಾಗಬಾರದು ಎಂದು ಮಾನಕಷಾಯದ ಚಿಂತನೆ ತನ್ನೊಳಗಿರುವದರಿಂದ ಆ ಜೀವನ ಕಲ್ಯಾಣವಾಗುವದಿಲ್ಲ ಮಾನೀಪುರುಷನ ಬಳಿಯಲ್ಲಿ ಇನ್ನೊಬ್ಬನ ಸ್ತುತಿಯನ್ನು ಮಾಡಿದಲ್ಲಿ ಅವನಿಗೆ ಅದು ಸಹಿಸುವದಿಲ್ಲಾ. ಅವನಿಗೆ ಅದು ಯಾವಾಗಲೂ ಅಪಮಾನ ಕಾರಕ ರೀತಿಯಲ್ಲಿ ಅಂಜಿಕೆಯನ್ನು ಹುಟ್ಟಿಸುತ್ತದೆ.ಮತ್ತು ಅವನು

ಯಾರ ಜೊತೆಯಲ್ಲಿಯೂ ಸಭ್ಯತನದಿಂದ ಮಾತನಾಡುವದಿಲ್ಲ. ಈ ಮಾನ ಕಷಾಯವು ಸ್ವರ್ಗ ಮೋಕ್ಷದಿಂದ ದೂರವೇ ಇರುತ್ತದೆಂದು ತಿಳಿಯಬೇಕು. ಯಾವನಲ್ಲಿ ಮಾನಕಷಾಯವು ಇರುವದೋ ಅವನಲ್ಲಿ ಒಂದೂ ಗುಣವು ಕಂಡು ಬರುವದಿಲ್ಲ. ಯಾವನಲ್ಲಿ ಮೃದು ಧರ್ಮವಿದೆಯೋ ಅವನ ಎಲ್ಲ ವೃತ ಗಳೂ ಅವನ ಜನ್ಮವೂ ಸಫಲವೆಂದು ತಿಳಿಯಬೇಕು. ಮತ್ತು ಯಾವನಲ್ಲಿ ಮೃದುಭಾವವು ಇರುವದಿಲ್ಲವೋ ಅವನ ಜಪತಪಾದಿಗಳೆಲ್ಲ ವ್ಯರ್ಥವೆಂದು ತಿಳಿಯಬೇಕು. ಮಾನೀ ಪುರುಷನು ತನ್ನ ಪ್ರಶಂಸೆಯನ್ನು ತಾನೆ ಮಾಡಿ ಕೊಳ್ಳುತ್ತಾನೆ.

ಈ ರೀತಿಯಾಗಿ ತನ್ನ ಪ್ರಶಂಸೆಯನ್ನು ಮಾಡಿಕೊಳ್ಳುವ ಮಾನವನು:-

ಮಾನ ಬಡಾಯಿ ಕಾರಣೆ ಕ್ಯೋಂ ಧನ ಖರ್ಚೆ ಮೂಢ ||
ಮರಕೆ ಹಾತಿ ಹೊಯಿಂಗೆ ಧರಣಿ ಲಟಕೆ ಸೂಂಡ ||

ಮಾನ ಕೀರ್ತಿಗಾಗಿ ಧನ ಖರ್ಚು ಮಾಡುವ ಮಾನವನು ಸತ್ತು ಆನೆ ಯಾಗಿ ಹುಟ್ಟಿ ಮಾನ ಕಷಾಯಗೋಸ್ಕರ ಸೊಂಡೆಯನ್ನು ಭೂಮಿಗೆ ತಿಕ್ಕುತ್ತಿರು ವನು, ಅಂದರೆ ಮಾನಕಷಾಯ ಮಾಡುವ ಮನುಷ್ಯನು ಸತ್ತ ನಂತರಾ ಆನೆ ಯಾಗಿ ಹುಟ್ಟುವನೆಂದು ಭಾವಾರ್ಥವು. ಮತ್ತು ಮೃದು ಭಾವನೆಯುಳ್ಳ ಮನುಷ್ಯನು ತನ್ನ ಪ್ರಶಂಸೆಯನ್ನು ಮಾಡಿಕೊಳ್ಳುವದಿಲ್ಲ. ಇನ್ನೊಬ್ಬರದು ಮಾಡುವದಿಲ್ಲ. ನಾಚಿಕೆ ಯಾದವರಂತೆ ಕೆಳ ಮುಖವಾಗಿ ಅಲ್ಲಿಂದ ಎದ್ದು ಹೋಗುವನು ಅದರ ಬಗ್ಗೆ ಹೀಗೆ ಹೇಳುತ್ತಾರೆ.

ಬಡೇ ಬಡಾಯಿ ನಕರೆ ಬಡೇ ನ ಬೋಲೆ ಬೋಲ ||
ಹಿರಾ ಮುಹಸೆ ಸ ಕಹೆ ಬಡಾ ಹಮಾರಾ ಮೋಲ ||

ದೊಡ್ಡ ಮನುಷ್ಯನು ತನ್ನ ಮುಖದಿಂದ ಪ್ರಶಂಸೆಯನ್ನು ಮಾಡಿಕೊಳ್ಳ ಲಾರನು ಅಥವಾ ತನ್ನ ಪ್ರಶಂಸೆಯನ್ನು ಮಾಡಿರಿಯೆಂದು ಹೇಳುವದೂ ಇಲ್ಲ. ಯಾವ ರೀತಿ ಹಿರಾ ರತ್ನವು ತನ್ನ ಮೌಲ್ಯವು ಅಧಿಕವಾಗಿದೆ, ತನ್ನ ಮೌಲ್ಯ ಮಾಡಿರಿಯೆಂದು ಹೇಳುವದಿಲ್ಲವೋ ಹಾಗೆ.

ಅಭಿಮಾನಿಯಾದ ಮನುಷ್ಯನು ಯಾರಿಗೂ ನಮ್ರವಾಗುವದಿಲ್ಲ:—

ಆ ಅಭಿಮಾನಿಯಾದ ಮನುಷ್ಯನು ತನ್ನ ಪ್ರಶಂಸೆಯನ್ನು ತನ್ನ ಮುಖ ದಿಂದ ತಾನೆ ಮಾಡಿಕೊಳ್ಳುತ್ತಾನೆ. ಹೇಳುವದೇನಂದರೆ—ನಾನು ಹೀಗೆ ಮಾಡಿ

ದ್ದೇನೆ. ಹಾಗೆ ಮಾಡಿದ್ದೇನೆ ಅವನೇನು ನನ್ನಕಿಂತ ದೊಡ್ಡವನೇ? ಅವನೇನು ಮಾಡಿದ್ದಾನೆ? ಮಾಡಿದ್ದೆಲ್ಲ ನಾನೆಯೇ! ನನ್ನ ಸಮಾನ ಸದ್ಯಕ್ಕೆ ಯಾರೂ ಇಲ್ಲಿ ಇಲ್ಲ. ಈ ರೀತಿಯಾಗಿ ಹೆಮ್ಮೆಯಿಂದ ಹೇಳುತ್ತ ಒಣಗಿ ಶುಷ್ಕವಾದ ಬಿದರಿನ ಕಟ್ಟಿಗೆಯಂತೆ ಯಾವತ್ತು ಕಟಿದೇ ನಿಲ್ಲುತ್ತಾನೆ. ಅಂದರೆ ಒಣಗಿದ ಬಿದಿರ ಕಟ್ಟಿಗೆಯಂತೆ ಅತ್ಯಂತ ಮಾನಕಷಾಯದಿಂದ ಕಠಿಣವಾಗಿ ಒಣಗಿರ್ದ ಬಿದಿರನ್ನು ಬಾಗಿಸಲಿಕ್ಕೆ ಹೋದರೆ ತಟ್ಟನೆ ಮುರಿದು ಬೀಳುತ್ತದೆ. ಅದೇ ರೀತಿ ಮಾನಕಷಾಯದಿಂದ ಯುಕ್ತವಾದ ಮನುಷ್ಯನು ತನ್ನ ವಿಪರೀತ ಜನರಿಂದ ಒಂದಾನೊಂದು ದಿವಸ ಮಾನ ಹರಣವಾಗಿ ಅಪಮಾನಿತನಾಗಿ ಇಹ ಪರ ಲೋಕದಲ್ಲಿ ದುಃಖವನ್ನು ಅನುಭವಿಸುವವನು ಆಗುತ್ತಾನೆ. ಮೃದುಭಾವ ಅಥವಾ ವಿನಯ ಶಾಲಿಯಾದ ಭವ್ಯ ಜೀವನು ಬೆತ್ತಿನ ಕಟ್ಟಿಗೆಯಂತೆ ಬೊಗ್ಗಿಸಿದತ್ತ ಬಗ್ಗುತ್ತಾನೆ. ಆದ್ದರಿಂದ ಅವನು ಸಂಸಾರದಲ್ಲಿ ಎಲ್ಲರಿಂದಲೂ ಮನ್ನಣೆಯನ್ನು ಪಡೆಯುವವನಾಗಿರುತ್ತಾನೆ. ಮತ್ತು ಮೃದುಭಾವ ಉಳ್ಳವನು ಎಲ್ಲರಲ್ಲಿ ವಿನಯವಾನನಾಗಿರುವನು. ಬಿದಿರಂತೆ ಮುರಿಯುವದಿಲ್ಲ. ಮಾನಿ ಜೀವನು ಸತ್ತು ಒಂಟೆಯ ಯೋನಿಯಲ್ಲಿ ಜನ್ಮತಾಳಿ ಒಂಟೆಯಾಗಿ ಸತತ ಮೇಲಕ್ಕೆ ನಡೆದು ಹೋಗುವಾಗ ಮುಂದೆ ದೊಡ್ಡ ಪರ್ವತವು ಬಂದ ಕೂಡಲೆ ಆ ಒಂಟೆಯ ಮುಖವು ಕೆಳಗೆ ಆಗುತ್ತದೆ. ಮತ್ತು ಮನಸ್ಸಿನಲ್ಲಿ ವಿಚಾರಿಸುವದೇನಂದರೆ ನನ್ನಗಿಂತ ಪರ್ವತ ಎತ್ತರವಾಗಿದೆ–ಎಂದು ತಿಳಿದು ತನ್ನ ಮುಖವನ್ನು ಕೆಳಕ್ಕೆ ಮಾಡುತ್ತದೆ. ಆದ್ದರಿಂದ ಜಗತ್ತಿನಲ್ಲಿ ತನಗಿಂತ ಎಷ್ಟೋ ಜನರು ದೊಡ್ಡವರಿದ್ದಾರೆಂದರಿದು ಜ್ಞಾನಿ ವಿವೇಕಿಯಾದ ಜನಗಳು ಮಾನಕಷಾಯವನ್ನು ತೊರೆಯಬೇಕೆಂದು ಭಾವಾರ್ಥವಿದೆ.

ಮಾನ ಕಷಾಯದಿಂದ ರಾವಣನು ಲಕ್ಷ್ಮಣನ ಕೈಯಿಂದ ಮರಣ ಹೊಂದಿದನೆಂಬ ಈ ಕಥೆಯು ರಾಮಾಯಣದಲ್ಲಿ ಪ್ರಸಿದ್ಧವಿದೆ ಇದನ್ನು ತಿಳಿದು ಜ್ಞಾನಿ ಜನರು ಮಾನಕಷಾಯವನ್ನು ಬಿಟ್ಟು ತನ್ನ ನಿಜ ಸ್ವರೂಪವಾದ ಆತ್ಮನ ಸ್ವಭಾವವು ಪರವಸ್ತುಗಳಿಂದ ಭಿನ್ನವಾಗಿದೆ, ಮತ್ತು ಕರ್ಮರೂಪ ಪುದ್ಗಲದ ಸಂಯೋಗದಿಂದ ಜಡ ರೂಪ ನಾನೆಂಬುದನ್ನು ನಾನು ಭಾವಿಸಿಕೊಂಡು ಪರಮತಿ ಪರಭಾವದಿಂದ ಪರಿಪರಿ ರೂಪಗಳನ್ನು ತಾಳಿ ಪರಿಪರಿ ದುಃಖಗಳನ್ನು ನೆಲೆನಿಲ್ಲದ ಭವಭವಗಳಲ್ಲಿ ಭೋಗಿಸುತ್ತಿದ್ದಾನೆ. ಆದರೆ ಯಾವಾಗ ಈ ಆತ್ಮನು ತನ್ನ ರೂಪವನ್ನು ನಿಜ ಸ್ವನಿಜಗುರುಗಳಿಂದ ರುಚಿ ಪೂರ್ವಕವಾಗಿ ತಿಳಿಕೊಳ್ಳ

ತ್ತಾನೆಯೋ ಆ ಸಮಯದಲ್ಲಿ ಅವನಲ್ಲಿರ್ದ ಜಡ ರೂಪದ ಮೇಲಿಂದ ಮೂರ್ಛ ಶ್ರದ್ಧೆಯು ಹೊರಟು ಹೋಗಿ, ನಿಜವಾದ ತನ್ನೊಳಿರುವ ನಿತ್ಯನಿರಂಜನ ಶುದ್ಧ ಪರಮಾತ್ಮನು ನಾನಿದ್ದೇನೆಂದು ಭಾವನೆಯಾಗಲು ಲೋಕವೆಲ್ಲ ಮರುಳಸಂತೆ ಕಾಣಿಸುವದು. ಇದೇ ಆತ್ಮನ ನಿಜವಾದ ಮೃದುಧರ್ಮವದೆ. ಇದೇ ಆತ್ಮನ ಸ್ವಭಾವವಿದೆ, ಇದೇ ಸುಖದ ಬೀಜವಿದೆಯೆಂದು ಭಾವಿಸುವವನು ನಿಜವಾದ ಸುಖವನ್ನು ಪಡೆಯುತ್ತಾನೆಂದು ಭಾವಿಸಿ ಮಾನಕಷಾಯವನ್ನು ಬಿಡ ಬೇಕೆಂಬುದು ಭಾವಾರ್ಥವು.

ಈ ಮಾರ್ದವ ಗುಣದ ಪ್ರಾಪ್ತಿ ಯಾವ ಮನುಷ್ಯನಲ್ಲಿ ಆಗುವದು ?

ವಾಂಛಾ ಸಜ್ಜನ ಸಂಗಮೆ ಪರಗುಣೆ ಪ್ರೀತಿರ್ಗುರೌ ನಮ್ರತಾ ॥
ವಿಧ್ಯಾಯಾಂ ವ್ಯಸನಂ ಸ್ವಯೋಷಿತಿ ರತಿರ್ಲೋಕಾಪವಾದಾದ
ಭಯಮ್ ॥

ಭಕ್ತಿಃ ಶ್ರೀ ಜಿನ ಶಲಿರಾತ್ಮ ದಮತಿ ಸಂಸರ್ಗ ಮುಲಿಖಲೆ ।
ಯೆಷ್ವೇತೆ ನಿವಸನ್ತಿ ನಿರ್ಮಲಗುಣಾಸ್ತೆ ಭ್ಯೋ ನರೆಭ್ಯೋ ನಮಃ ॥

ಸಜ್ಜನರ ಸಮಾಗಮ ಮಾಡುವ ಪ್ರೀತಿ, ಅಥವಾ ಅಭಿಲಾಷೆ, ಇನ್ನೊಬ್ಬ ಗುಣವುಳ್ಳ ಧರ್ಮಾತ್ಮನಾದವನಲ್ಲಿ ಪ್ರೀತಿ, ಗುರು ಜನರಲ್ಲಿ ನಮ್ರತೆ ಅಥವಾ ಗುರುಗಳ ಮುಂದೆ ವಿನಯಭಾವ, ವಿದ್ಯೆಯಲ್ಲಿ ವ್ಯಸನ, ತನ್ನ ಸ್ತ್ರೀ ಯಲ್ಲಿಯೇ ರತಿಯುಳ್ಳವನು ಲೋಕ ಅಪವಾದದಲ್ಲಿ ಭಯವುಳ್ಳವನು ಶ್ರೀ. ಜಿನೇಂದ್ರವೀತರಾಗದೇವರಲ್ಲಿ ಭಕ್ತಿಯುಳ್ಳವನು ಪಂಚೇಂದ್ರಿಯಗಳ ದಮನ ಮಾಡಿಕೊಳ್ಳುವ ಶಕ್ತಿಯುಳ್ಳವನು ಮತ್ತು ದುರ್ಜನರ ಸಂಗತಿ ಯನ್ನು ಪೂರ್ಣರೂಪವಾಗಿ ತೊರೆದವನು ಈ ಪ್ರಕಾರವಾಗಿ ಹೇಳಿದ ಸದ್ಗುಣಗಳು ಯಾವ ಪುರುಷನಲ್ಲಿ ಇರುವವೋ ಆ ಸತ್ಪುರುಷನಲ್ಲಿಯೇ ಈ ಮೊದಲಿನ ಗುಣ ಅಥವಾ ಮೃದುಗುಣ ನೆಲೆಸುವದು. ಇದಲ್ಲದೆ ಬೇರೆಯವ ರಲ್ಲಿ ನೆಲೆಸುವದಿಲ್ಲ.

ವಿವೇಕಿಯಾದ ಜ್ಞಾನಿ ಜನಗಳ ಹುಷಾರೆ:—

ಎಲೇ ಆತ್ಮನೇ ! ನೀನು ಮರ್ಯಾದೆಯಾಗಿರ್ದ ಕ್ಷಣಿಕ ಸುಖ–ಸಂಪ ತ್ತಿಯ ಬಗ್ಗೆ ನೀನು ಎಂಟು ಪ್ರಕಾರವಾದ ಮದಗಳನ್ನು ಮಾಡುವದು ನಿನಗೆ ಶೋಭಿಸುವದೇ ? ನಿನ್ನಲ್ಲಿ ನೀನು ಭಾವಿಸಿ ನೋಡು.

ಜಾತಿಮದ, ಕುಲಮದ, ರೂಪಮದ, ಯೌವನಮದ, ಐಶ್ವರ್ಯಮದ ಪೂಜೆಯಮದ, ಬಲಮದ ಮತ್ತು ತಪಮದ, ಎಂಬೀ ಮೊದಲಾದ ಮದಗಳು ನಿನ್ನಲ್ಲಿ ಜನಿಸಿದಾಗ ನಿನಗೆ ಅತ್ಯಂತವಾದ ಅಹಂಕಾರ ಮಮಕಾರವನ್ನು ಉಂಟುಮಾಡಿ ನಿನ್ನನ್ನು ಇವು ಸಂಸಾರದಲ್ಲಿ ಅನಾದಿಕಾಲದಿಂದ ಪರಿಭ್ರಮಣ ಮಾಡಲಿಕ್ಕೆ ಕಾರಣಗಳಾಗಿವೆ. ಇವುಗಳನ್ನು ನೀನು ದೂರದಿಂದಲೇ ತ್ಯಜಿಸು.

ಮಾನಕಷಾಯ ಮಾಡುವದರಿಂದ ಹಾನಿ:—

ದೇವಂಗುರುಂ ಧಾರ್ಮಿಕಮರ್ಚನೀಯಂ ಮಾನಾಕುಲಾತ್ಮಾ ಪರಿಭೂಯ ಭೂತಃ ।
ಪಾದೇಯಮಾದಾಯ ಕುಕರ್ಮಜಾಲಂ ನಿಚಾಂ ಗತಿಂ ಗಚ್ಛತಿ ನೀಚಕರ್ಮಾ ॥

ಮಾನಕಷಾಯದಿಂದ ಈ ಜೀವನು ದೇವಗುರು ಮತ್ತು ಶಾಸ್ತ್ರವಿನಯ ಮಾಡದೆ ತಿರಸ್ಕಾರಮಾಡುವವನಾಗಿ ಅಪಮಾನಕಾರಕಗಳಾದ ಅನೇಕ ನೀಚ ಕರ್ಮಗಳನ್ನು ಮಾಡುತ್ತಾನೆ. ಅಥವಾ ಅನೇಕ ಪಾಪ ಕರ್ಮಗಳನ್ನು ನೀಚ ಗತಿಯನ್ನು ಹೊಂದುತ್ತಾನೆ.

ಭಾವಾರ್ಥ:— ಮಾನಿಜೀವನು ಗುರುಗಳ ಅವಿನಯ ಕೂಡ ಮಾಡುತ್ತಾನೆ. ಮತ್ತು ಪಾಪಕರ್ಮಗಳನ್ನು ಕಟ್ಟಿಕೊಂಡು ಅತ್ಯಂತ ನೀಚಗತಿಯನ್ನು ಹೊಂದುತ್ತಾನೆ.

ವಾಮನಃ ಪಾಪನಃ ಕೋಪನೊ ವಂಚನಃ ।
ಕರ್ಕಷೋ ರೋಮಶಃ ಛಿದ್ಮಲಃ ಕಲ್ಮಷಃ ॥
ಕೋಲಿಕೋ ಮಾಲಿಕಃ ಸಾಲಿಕ ಭಿಂಪಿಕಃ ।
ಕಿಂಕಿರೊ ಲುಬ್ಧಕೊ ಮುಗ್ಧಕಃ ಕುಷ್ಮಿಶಃ ॥
ಚಿತ್ರಕಃ ಕೌಶಿಕೊ ಮೂಷಿತೊ ಜಾಹಕೊ ।
ಬಂಜುಹೊ ಮಂಜುಲಃ ಪಿಪ್ಪಲಃ ಪನ್ನಗಃ ॥
ಕುಕ್ಕರಸ್ತಿತ್ತಿರೊ ರಾಸಭೋ ವಾಯಸಃ ।
ಕುಕ್ಕುಟೊ ಮರ್ಕಟೊ ಮಾನತೊ ಜಾಯತೆ ॥

ಮಾನಕಷಾಯದಿಂದ ಈ ಜೀವನು ವಾಮನ, ಮಗರ, ಕ್ರೋಧಿ ಠಕ್ಕನು ಕಠೋರ ಹೃದಯಉಳ್ಳವನು, ದೊಡ್ಡ ಕೂದಲುಳ್ಳ ಪಶುವಾಗುತ್ತಾನೆ. ಬಿಳಿಯ ಶರೀರ ಧಾರಣ ಮಾಡುವವನು, ಪಾಪಿಯು, ತೈಲಿ, ಮಾಲಗಾರ, ಸಿಲಾವಟ, ಅರ್ಧಶಿಲಾವಟ, ಶಿಂಪಿಗ, ಆಳು, ಆಗಿ ಪರಾಧೀನ ಅವಸ್ಥೆಯಲ್ಲಿ ಸತತ ಇರುವನು. ಮೂರ್ಖನು ಕುಷ್ಠರೋಗಿ, ವ್ಯಾಘ್ರ, ಗೂಗೆ, ಇಲಿ, ಹೆಗ್ಗಣ, ಅರಳೆಯಮರ, ಒಂಟೆ ಮೊದಲಾದ ತಿರ್ಯಂಚ ಪಶುಪರ್ಯಾಯ ಗಳಲ್ಲಿಯೂ ಸರ್ಪ ಮತ್ತು ನಾಯಿ, ತಿತರ, ಕತ್ತೆ, ಕಾಗಿ, ಕೋಳಿ, ವಾನರ ಮೊದಲಾದ ಅನೇಕ ನೀಚ ಮನುಷ್ಯತಿರ್ಯಕ್‌ನರಕ ನಿಂದ್ಯಪರ್ಯಾಯದಲ್ಲಿ ಜನ್ಮ ತಾಳುವವನಾಗುತ್ತಾನೆ.

ಲಕ್ಷ್ಮೀ ಕ್ಷಮಾಕೀರ್ತಿ ಕೃಪಾಸಪರ್ಯೋ ।
ನಿಹತ್ಯ ಸತ್ಯ ಜನಪೂಜ್ಯನೀಯೊಃ ॥
ನಿಷೇದ್ಯ ಮಾನೋರಭಿಸೇನ ಮಾನಃ ।
ಶ್ವಭ್ರಾಲಯೆ ನಿಕ್ಷಿಪತೀತಿ ಘೋರೆ ॥

ಮಾನಕಷಾಯ ಮಾಡುವವನ ಸತ್ಯತೆ, ಜಗತ್ತಿನ ಕೀರ್ತಿಯೂ ಲೋಕ ಗಳ ಪೂಜ್ಯಭಾವವೂ, ಲಕ್ಷ್ಮಿಯೂ, ಕ್ಷಮೆಯೂ, ದಯೆಯೂ, ಲೋಕದೊಳ ಗಿನ ಪ್ರತಿಷ್ಠೆಯೂ ಇದು ಎಲ್ಲವೂ ಹಾಳಾಗಿ ಅಂತ್ಯ ಸಮಯದಲ್ಲಿ ಮರಣ ಹೊಂದಿ ನೆಟ್ಟನೆ ನರಕಕ್ಕೆ ಇಳಿಯಬೇಕಾಗುತ್ತದೆಂದು **ಶ್ರೀ. ಜಿನೇಂದ್ರ ವೀತರಾಗಭಗವಂತರು** ಹೇಳುತ್ತಾರೆ.

ಭಾವಾರ್ಥ:— ಅನಾದಿ ಕಾಲದಿಂದ ಈ ಜೀವನು ನೀಚ ಗತಿಯನ್ನು ಹೊಂದುತ್ತ ಇಲ್ಲಿಯವರೆಗೆ ಬಂದಿದ್ದಾನೆ. ಒಮ್ಮೆ ನೀಚ ಜಾತಿಯನ್ನೂ ಒಮ್ಮೊಮ್ಮೆ ಉಚ್ಚ ಜಾತಿಯನ್ನೂ ಒಮ್ಮೆ ಪಶು ಪರ್ಯಾಯವನ್ನೂ, ಒಮ್ಮೆ ಏಕೇಂದ್ರಿಯ ಸ್ಥಾವರ ಪರ್ಯಾಯವನ್ನೂ' ಒಮ್ಮೊಮ್ಮೆ ಎರಡೇಂದ್ರಿಯ ಮೂರೇಂದ್ರಿಯ ನಾಲ್ಕೇಂದ್ರಿಯ ವಿಕಲತ್ರಯ ಮೊದಲಾದ ಪರ್ಯಾಯ ಗಳನ್ನು ಧರಿಸುತ್ತ ನಿಂಧ್ಯಯೊನಿಗಳಲ್ಲಿ ಸೇರಿ ಆ ಆ ಪರ್ಯಾಯಗಳಲ್ಲಿ ಹುಟ್ಟಿ ಪರಾಧೀನ ಹೀನಾವಸ್ಥೆಯಲ್ಲಿ ಕಾಲ ಕಳೆದು ಜೀವಿಸುತ್ತಿರಲು ಆ ಪರ್ಯಾಯದಲ್ಲಿ ಇನ್ನೊಬ್ಬ ಜೀವನಿಂದ ಆಗತಕ್ಕ ಅನೇಕ ರೀತಿಯಾದ ಕಷ್ಟಗಳನ್ನು ಸಹಿಸು ವಾಗ ಎಲೈ ಜೀವನೆ ನಿನ್ನ ಮಾನಕಷಾಯವು ಎಲ್ಲಿ ಅಡಗಿಹೋಗಿತ್ತು ಹೇಳು.

ನೀನು ಅತಿ ನಿಂದ್ಯಶ್ವಾನಯೋನಿಯಲ್ಲಿ ಜನ್ಮತಾಳಿ ಮನೆ ಮನೆಗೆ ಹೊಟ್ಟೆ ಹೊರುವ ಸಲುವಾಗಿ ತಿರಗುವಾಗ ಜನರಿಂದ ನಿನಗೆ ಆಗುವ ಅಪಮಾನಕಾರಕ ವಾದ ಕರ್ಕಶ ಶಬ್ದದ ಮರ್ಮ ಭೇದಿ ಮಾತುಗಳು, ಮತ್ತು ನಿರ್ದಯ ದಿಂದ ಕಲ್ಲು, ಗುಂಡು, ಗುದುಗೆಗಳಿಂದ ನಿನ್ನನ್ನು ಎಸೆಯುವಾಗ ಅಸಹ್ಯ ದುಃಖಗಳನ್ನು ಸಹಿಸುತ್ತ ಆ ಕೀಳು ಜನರ ಅಥವಾ ಒಳ್ಳೇ ಜನರ ಪಾದ ಗಳಲ್ಲಿ ಬಾಲವನ್ನು ಅಲ್ಲಾಡಿಸುತ್ತ ಇದ್ದು ಅಸಹ್ಯವಾದ ಅಪಮಾನ ಗಳನ್ನು ಸಹಿಸಲಿಲ್ಲವೆ? ಆಗ ನೀನು ಹಿಂದಿನ ಜನ್ಮದಲ್ಲಿ ಅಲ್ಪ ಸ್ವಲ್ಪ ಮಾಡಿದ ಪುಣ್ಯದಿಂದ ಅಲ್ಪ ಮಟ್ಟಿಗೆ ಇಂದ್ರಿಯಜನ್ಯ ಮತ್ತು ಅತ್ಯಂತ ಶೀಘ್ರವಾಗಿ ನಾಶ ಹೊಂದುವ ಕ್ಷಣಿಕ ಇಂದ್ರಿಯ ವಿಷಯಭೋಗ ಸಾಮು ಗ್ರಿಯು ಅಲ್ಪಮಟ್ಟಿಗೆ ನಿನಗೆ ಸಿಕ್ಕಿದ ಕಾರಣ ನೀನು ಆ ಹೊಲಸು ಬಿದ್ದು ಹೋಗುವ ಅಥವಾ ಅದರ ಮರ್ಯಾದೆ ಪೂರೈಸಿದ ನಂತರ ನಿನ್ನಿಂದ ದೂರ ವಾಗುವ ಸಂಪತ್ತಿಗೆ ನನ್ನದೆಂದು ಅಭಿಮಾನ ಮಾಡುವೆಯಾ! ನೀನು ಹಿಂದೆ ಎಷ್ಟೋ ಜನ್ಮಜನ್ಮಾಂತರದಿ ಈವರೆಗೂ ಈ ಕ್ಷಣಿಕ ಲಕ್ಷ್ಮಿಗಾಗಿ ಈ ಶರೀರದಿಂದ ಅಪಮಾನವನ್ನು ಹೊಂದುತ್ತ ಬಂದಿರಲಿಲ್ಲವೇ? ನಾನು ಎಂಬ ಹೆಮ್ಮೆಗೊಂಡವರು, ಮಹಾನ ಬಲಶಾಲಿಗಳಾದ ಬಲದೇವರು ಮತ್ತುಮಹಾನ ಮಹಾನ ಚಕ್ರವರ್ತಿಗಳು ತಮ್ಮ ಬಲವಾನ ಶಕ್ತಿಯ ಬಲರೂಪದ ಅಭಿಮಾನ ವನ್ನು ಮಾಡಿದ್ದರೂ ಕೂಡ ಆ ಶರೀರದ ಮರ್ಯಾದೆಯು ಪೂರೈಸುತ್ತ ಬಂದಾಗ್ಗೆ ಯಾವ ಶರೀರ ರೂಪಕೆ ಮತ್ತು ಬಲಕ್ಕೆ ಸಂಪತ್ತಿಗೆ ನನ್ನದೆಂದು ಅಭಿಮಾನ ಮಾಡುತ್ತಿದ್ದರೂ, ಇವೆಲ್ಲ ಹಾಳಾಗುವ ಕಾಲಕ್ಕೆ ಅವರ ಅಭಿ ಮಾನ, ರೂಪ, ಜಾತಿ, ಗೋತ್ರ, ಉತ್ತಮ ವಂಶ ಮೊದಲಾದವುಗಳು ನಾಶ ಹೊಂದುವಾಗ ಅವರ ಅಭಿಮಾನವು ಎಲ್ಲಿ ಹೋಯಿತು? ಏನಯ್ಯಾ ಎಲೆ ಜೀವಾತ್ಮನೇ ನೀನು ನಿನ್ನೊಳಗೆ ಯಾಕೆ ವಿಚಾರಿಸುವದಿಲ್ಲ? ಈ ಮಾನ ಕಷಾಯದಿಂದಲೇ ನೀನು ಅನೇಕ ಭವಭವಗಳಲ್ಲಿ ಭ್ರಮಣಮಾಡಿದ್ದಲ್ಲವೇ ಜೀವನೆ? ಇವನ್ನೆಲ್ಲ ನಿನ್ನೊಳಗೆ ಚನ್ನಾಗಿ ವಿಚಾರಿಸಿ ಅರಿದು ಸ್ವಪರಭೇದ ಜ್ಞಾನದಿಂದ ಭೇದಿಸಿ ನಿನ್ನನ್ನು ತಿಳಿದುಕೊಂಡರೆ ನಿನಗೆ ಇಲ್ಲಿಂದ ಮುಂದೆ ಭಯುಗೊಳಿಸುವ ಭವ ಎಲ್ಲಿಂದ ಬಂದೀತು? ಪರಭಾವ ಪರಗತಿ ನಾನೆಂ ದುವುಗಳ ಎಲ್ಲ ಪರವಸ್ತುಗಳ ಮಮತ್ವಭಾವ ವಿಭಾವಗಳನ್ನು ತೊರೆದು ನಿನ್ನೊಳಿರುವ ನಿಜ ಪರಮಾತ್ಮ ನಿರಂಜನವೀತರಾಗ ನಿರ್ವಿಕಲ್ಪ ಪರಮ

ಸಮಾಧಿರೂಪ ಕೇವಲ ಜ್ಞಾನ, ಕೇವಲ ದರ್ಶನಾದಿ ಮತ್ತು ಅನಂತಚತುಷ್ಟಯಮಯವಾದ ನನ್ನ ಸ್ವರೂಪ ನನ್ನಾತ್ಮನಿರುವನೆಂದು ತನ್ನೊಳು ತಾನಾಗಿ ಭಾವಿಸಿದರೆ ನೀನು ಕರ್ಮಕಳಂಕವನ್ನು ಕಳೆದು ನಿರ್ಮಳ ಆಕಾಶದಂತೆ ನಿನ್ನ ಸ್ವರೂಪವನ್ನುಹೊಂದಿ ಸುಖಿಯಾಗುವದಿಲ್ಲವೇ ?

ಅನಂತ ಕಾಲದಿಂದ ಜೀವನು ನಿಗೋದ ಮೊದಲಾದ ನೀಚಪರ್ಯಾಯಗಳಲ್ಲಿ ಅನಂತ ಕಾಲದ ವರೆಗೆ ವಾಸಮಾಡಿ ಒಂದು ವೇಳೆ ಅಲ್ಲಿಂದ ಹೊರಟು ಉತ್ತಮ ಕ್ಷತ್ರಿಯ ಮೊದಲಾದವರ ಕುಲದಲ್ಲಿ ಅನಂತವೇಳೆ ಉತ್ಪನ್ನವಾದರೂ ಅಲ್ಲಿಯೂ ಕೂಡ ಶುಭಾಶುಭ ಪಾಪಪುಣ್ಯಗಳ ಉದಯವಿದ್ದದರಿಂದ ಅಲ್ಲಿಯೂ ಕೂಡ ಉಚ್ಚನೀಚತ್ವವನ್ನು ತಾಳಬೇಕಾಯಿತು. ಒಂದೇ ಸವನಾಗಿ ಉಚ್ಚತ್ವ ಉಳಿಯಲಿಲ್ಲ. ಆದ್ದರಿಂದ ಅಲ್ಲಿಯೂ ನೀನು ಮಾನಕಷಾಯ ಮಾಡಿದ್ದು ವ್ಯರ್ಥವಾಯಿತು. ಅಯ್ಯಾಭವ್ಯಾತ್ಮನೆ! ನಿನ್ನೊಳು ನೀನು ಪರಮಾರ್ಥ ದೃಷ್ಟಿಯಿಂದ ವಿಚಾರಿಸಿ ನೋಡು ಈ ನಿನ್ನ ಆತ್ಮನಿಗೆ ಉಚ್ಚ ನೀಚತ್ವವೆಂಬ ನೀನು ಮಾಡುವ ಕಲ್ಪನೆಯು ನಿನ್ನ ಆತ್ಮನಲ್ಲಿ ಇಲ್ಲ. ನಿನ್ನಾತ್ಮ ಪಾಪ ಮತ್ತು ಪುಣ್ಯ, ನೀಚಗತಿ ಉಚ್ಚಗತಿ, ಪರಭಾವ ಪರವಸ್ತು ಮೊದಲಾದವುಗಳ ಮಹಾಮಿಥ್ಯಾ ಮತ್ತು ಮೂಢ ಕಲ್ಪನೆಗಳಿಂದ ಭಿನ್ನವಾಗಿದ್ದಾನೆಂದಮೇಲೆ ನೀನು ಪುನಃ ಮಾನಕಷಾಯವೆಂಬ ಪಿಶಾಚಿಯ ವಶಭೂತನಾಗಿ ನಾನು ಉಚ್ಚ, ನಾನು ನೀಚನೆಂಬ ಭಾವನೆಗಳನ್ನು ನೀನು ನಿನ್ನ ಮನದೊಳು ಭಾವಿಸುತ್ತಲಿರುವದು ಇದು ಆಶ್ಚರ್ಯವಲ್ಲವೆ?

ಎಲೆ ಜೀವನೇ! ನೀನು ಮಾನಕಷಾಯಕ್ಕೆ ವಶಭೂತನಾಗಿ ನಾನು ಉಚ್ಚನೆಂದು ಮೇಲಕ್ಕೆ ನೋಡುತ್ತಿದ್ದರೂ ನಿನಗೆ ಅಂತ್ಯ ಸಮಯದಲ್ಲಿ ನೀಚನಾಗಿ ಕೆಳಗೆ ನೋಡಲೇ ಬೇಕಾಗುವದು ಮತ್ತು ನಾನು ನೀಚನೆಂದುರೂ ಕೆಳಕ್ಕೆ ನೋಡಬೇಕಾಗುವದು. ಹೀಗಿರುವಾಗ್ಗೆ ನೀಚ ಉಚ್ಚತ್ವದ ಭಾವನೆ ನೀನು ಮಾಡುವದೂ ಕೂಡ ವ್ಯರ್ಥವಿದೆ. ಉಚ್ಚತ್ವ ನೀಚತ್ವವೆಂದು ನೀನು ಭಾವನೆ ಮಾಡುವದು ಇದು ಕೇವಳ ವಿಕಲ್ಪವಿದೆ. ಇದು ಪರಮಾರ್ಥ ಮಾರ್ಗವಲ್ಲ. ಈ ಮಾರ್ಗ ಸಂಸಾರದಲ್ಲಿ ಮೋಹಿತರಾದ ವ್ಯವಹಾರ ಮಾರ್ಗದಲ್ಲಿ ನಿರತರಾದ ಮೂಢಮೋಹಿ ಜನಗಳ ಕಲ್ಪನೆ ಇದು. ಸ್ವಪರ ವಿಚಾರ ಮಗ್ನರಾದ ಜ್ಞಾನಿ ಜನಗಳ ಕಲ್ಪನೆ ಅಲ್ಲ. ಆತ್ಮನಿಗೆ ಪರಮಾರ್ಥ

ದೃಷ್ಟಿಯಿಂದ ಯಾವೂ ವರ್ಣಗಳು ಅಥವಾ ಜಾತಿ, ಕುಲ, ಲಿಂಗ, ಬ್ರಾಹ್ಮಣ, ಕ್ಷತ್ರಿ, ವೈಶ್ಯ, ಶೂದ್ರ ಮೊದಲಾದ ಕರ್ಮಕೃತ ವಿಕಲ್ಪಗಳಿಲ್ಲ. ಆದರೆ ಆತ್ಮನಲ್ಲಿ ಈ ವಿಕಲ್ಪಗಳು ಇಲ್ಲ. ಆತ್ಮನು ಈ ವಿಕಲ್ಪಗಳಿಂದ ಅಥವಾ ಸರ್ವಪರ ಉಪಾದಿಗಳಿಂದ ರಹಿತನಾಗಿದ್ದಾನೆ. ಅಯ್ಯಾ ಅರಿದು ನಿನ್ನೊಳು ನೀನೋಡಿ ಈ ಮಿಥ್ಯಾವಿಕಲ್ಪಗಳನ್ನು ಬಿಡು, ಹೆಚ್ಚೇನು!

ಎಲೆ ಜೀವನೆ! ನೀನು ನಿಜವಾಗಿ ನಿನ್ನೊಳು ವಿಚಾರಿಸಿ ನೋಡಿದರೆ ಈ ಸಂಸಾರದಲ್ಲಿಯೂ ಯಾವಳೊಬ್ಬ ಸ್ತ್ರೀಯು ಗಂಡನಿಗಿಂತಲೂ ಒಂದು ಮೊಳ ಅಳತೆಯಲ್ಲಿ ಕಿರಿದಾಗಿದ್ದಾಳೆ. ಆದರೆ ಗಂಡನಿಗೆ ನಾನು ನನ್ನ ಹೆಂಡತಿಯಕಿಂತಲೂ ಎತ್ತರವಾಗಿದ್ದೇನೆಂದು ಹೆಮ್ಮೆಯಾಗುತ್ತದೆ. ಮತ್ತು ಹೆಂಡತಿ ನಾನು ಗಂಡನಕಿಂತ ಕಿರಿದಾಗಿದ್ದೇನೆಂದು ಅವಳಿಗೆ ದುಃಖವಾಗುತ್ತದೆ. ಹೆಂಡತಿಯಕಿಂತಲೂ ಗಂಡ ಕಿರಿದಾಗಿದ್ದರೆ ಹೆಂಡತಿ ಹೆಮ್ಮೆ ಪಡುವಳು! ನಾನು ನನ್ನ ಗಂಡನಿಗಿಂತ ದೊಡ್ಡವಳು! ಎಂದು, ಆ ವೇಳೆಯಲ್ಲಿ ನಿನಗೆ ಅಪಮಾನಕಾರಕವೆನಿಸಹತ್ತುತ್ತದೆ ಅದರೆ ಈ ರೀತಿ ಪ್ರತಿಯೊಂದು ವ್ಯಕ್ತಿಯಲ್ಲಿ ತಾನು ಮಾಡಿದ ಪಾಪ ಮತ್ತು ಪುಣ್ಯಗಳಂತೆ ಮಾನ ಅಪಮಾನಗಳು, ಸುಖ ದುಃಖಗಳು ಇವು ಎಲ್ಲ ತಾನು ಮಾಡಿದ ಕರ್ಮಕೃತ ಫಲಗಳಿರುತ್ತವೆ. ಇವು ಆತ್ಮನ ಸ್ವಭಾವಗಳಲ್ಲವೆಂದು ತಿಳಿದು ಈ ಮಾನಕಷಾಯ ತೊರೆದು ತನ್ನೊಳಿರುವ ನಿಜಾತ್ಮನ ಸ್ವಭಾವವು ಯಾವಾಗಲೂ ಕಠಿಣಪರಿಣಾಮ ರಹಿತ ಮತ್ತು ಮಾನ ಅಪಮಾನಾದಿ ಕಷಾಯದಿಂದ ರಹಿತ ಯಾವಾಗಲೂ ಸ್ವಾಭಾವಿಕವಾಗಿ ಮೃದುಭಾವವನ್ನು ಧರಿಸುವವನಿದ್ದಾನೆಂದು ತಿಳಿದು ವಿನಯಭಾವವನ್ನು ತಾಳುವನು. ತನ್ನಗಿಂತ ದೊಡ್ಡವರಲ್ಲಿ, ವಿದ್ವಾಂಸರಲ್ಲಿ, ತನ್ನ ಗುರುಗಳಲ್ಲಿ ವಿನೀತವಾಗಿ ಇರುವ ಮನುಷ್ಯನು ಇಹ ಪರಲೋಕ ಸುಖವನ್ನು ಪ್ರಾಪ್ತಗೊಳ್ಳುವವನಾಗುತ್ತಾನೆ.

ಈ ಮಾರ್ದವಗುಣ ಪಾಲನೆ ಮಾಡಿದ ಫಲವೇನಂದರೆ ಈ ಮಾರ್ದವಗುಣ ಪಾಲನ ಮಾಡುವದರಿಂದ ಸ್ವಾಭಾವಿಕ ಆತ್ಮಸುಖದ ಪ್ರಾಪ್ತಿಯೂ ಲೌಕಿಕ ಸುಖದ ಪ್ರಾಪ್ತಿಯೂ ಆಯಾಸವಿಲ್ಲದೆ ಲಭಿಸುತ್ತವೆ. ಇದಲ್ಲದೆ ವಿನಯವಾನ ಮನುಷ್ಯನಿಗೆ ಈ ಜಗತ್ತಿನಲ್ಲಿ ಯಾವ ಶತ್ರುವೇ ಇಲ್ಲ ಮತ್ತು ಮಾನಿ ಮನುಷ್ಯನಿಗೆ ಜಗತ್ತಿನಲ್ಲಿ ಒಬ್ಬನೂ ಮಿತ್ರನಿಲ್ಲ. ನೋಡು ಜಗತ್ತಿನಲ್ಲಿ ಬಲತ್ತವಾಗಿ ದೊಡ್ಡ ಬಿರುಗಾಳಿ ಬೀಸುವಾಗ ಆ ಗಾಳಿಯು ದೊಡ್ಡ ಏಟಿನಿಂದ

ದೊಡ್ಡ ದೊಡ್ಡ ಮರಗಳು ಬೇರುಸಹಿತವಾಗಿ ಕಿತ್ತು ಮುರಿದು ಕೆಳಕ್ಕೆ ಬೀಳುತ್ತವೆ. ಆದರೆ ಅದೇ ಕಾಡಿನಲ್ಲಿ ಕ್ಷುದ್ರವಾದ ಜೆತ್ತಿನ ಜೆಟ್ಟಗಳು, ಹುಲ್ಲು, ಮೊದಲಾದವುಗಳಲ್ಲಿ ನಮ್ರತೆಯಿರುವದರಿಂದ ಗಾಳಿ ಬೀಸಿದಾಗ ನಮ್ರತೆ ಹೊಂದಿರುವದರಿಂದ ಅವು ಮುರಿದು ಅಥವಾ ಕಿತ್ತುಹೋಗುವದಿಲ್ಲ. ಇದರಂತೆ ಯಾವ ಮನುಷ್ಯನಲ್ಲಿ ನಮ್ರತೆಯಿದೆಯೋ ಅವನಿಗೆ ಈ ಜಗತ್ತಿನಲ್ಲಿ ಯಾರೂ ಶತ್ರುಗಳೇ ಇಲ್ಲ.

ಇದರ ಬಗ್ಗೆ ಓರ್ವ ನೀತಿಕಾರನು ಹೇಳಿದ್ದೇನಂದರೆ–

ಕೋಯಿ ನ ಮೀತ ಕಠೋರಕೆ ।
ಮೃದುಕೊ ಕೋಯಿ ನ ಅರಾತ್ ॥

ವ್ಯವಹಾರದಿಂದಲೂ ತನ್ನಿಂದ ಕುಲ, ವಯಸ್ಸು ವಿದ್ಯಾಗುಣ, ಚಾತುರ್ಯ, ತಪ, ಜ್ಞಾನ, ಚರಿತ್ರೆಯು ಮೊದಲಾದವುಗಳಲ್ಲಿಯೂ ಯಾವನು ದೊಡ್ಡವನಿರುತ್ತಾನೆಯೋ ಅವನಲ್ಲಿ ಯಥಾಯೋಗ್ಯ, ವಿನಯ, ಸೇವೆ, ಸುಶ್ರೂಷೆ ಮೊದಲಾದವುಗಳನ್ನು ಮಾಡುವದು ಮತ್ತು ಚಿಕ್ಕವರಲ್ಲಿ ದಯೆ, ಪ್ರೇಮ ಮತ್ತು ನಮ್ರತೆಉಳ್ಳವನಾಗಿರುವದೂ, ವಿರೋಧಿ ಪುರುಷರಲ್ಲಿ ಮಾಧ್ಯ ಸ್ವಭಾವ ಇಡುವವನಾಗಿಯೂ, ಇರುವನು. ಇದೇ ಸತ್ಪುರುಷರಲ್ಲಿರುವ ಮಾರ್ದವ ಗುಣವಿದೆ. ಈ ಎಲ್ಲ ಗುಣಗಳು ತನ್ನಲ್ಲಿ ಇದ್ದರೂ ಕೂಡ ತನ್ನ ಮುಖದಿಂದ ತನ್ನ ಸ್ವತಃ ಪ್ರಶಂಶೆಯನ್ನು ಮಾಡಿಕೊಳ್ಳದೆ ಇರುವದು, ಮತ್ತು ಪರನಿಂದೆ ಮಾಡದೇ ಇರುವದು ಇವೆಲ್ಲ ವಿನಯಗುಣಲಕ್ಷಣವಿರುತ್ತವೆ. ತನ್ನಿಂದ ದೊಡ್ಡವರಿಗೆ ನಮಸ್ಕಾರ ಮಾಡುವದು, ಉಚ್ಚ ಆಸನಾದಿಗಳನ್ನು ಕೊಡುವದು, ಅವರ ಸುಶ್ರುಷೆ ಮಾಡುವದು, ಎದುರಿಗೆ ನಿಂತು ಅಥವಾ ಅವರ ಸನ್ಮುಖವಾಗಿಯೇ ನಿಂತು ಮಾತನಾಡುವದು, ಅವರ ಅಜ್ಞೆಯನ್ನು ಪಾಲಿಸುವದು, ಮನ–ವಚನ–ಕಾಯಗಳಿಂದ ತನ್ನ ಯಥಾಶಕ್ತಿಯಿಂದ ಪಾಲನ ಮಾಡುವದು, ಅವರು ಹೊರಟರೆ ಅವರ ಹಿಂದಿನಿಂದ ಗಮನ ಮಾಡುವದು, ಅವರ ಉತ್ತಮ ಗುಣಗಳ ಅನುಕರಣೆ ಮಾಡುವದು, ಅವರು ತನ್ನ ಮೇಲೆ ಮಾಡಿದ ಉಪಕಾರಗಳನ್ನು ಮರೆಯದಿರುವದು, ಇವು ಮೊದಲಾದವುಗಳು ವಿನಯಗುಣದ ಲಕ್ಷಣ ಇರುವವು. ಸಾಧರ್ಮಿ ಬ್ರಹ್ಮಚಾರಿ ಅಣುವೃತಿ ಕ್ಷುಲ್ಲಕಕ್ಷುಲ್ಲಿಕೆಯರು ಅರ್ಜಿಕೆ ಐಲಕ ಮುನಿಗಳು ಇವರಿಗೆ ಯಾವ ರೀತಿ ವಿನಯ ಮಾಡಬೇಕೆಂಬುದನ್ನು ಹೇಳುತ್ತಾರೆ.

ನಮೋಸ್ತು ಗುರುವೆ ಕುರ್ಯಾದ್ವಂದನಾಂ ಬ್ರಹ್ಮಚಾರಿಣೆ ।
ಯಿಚ್ಛಾಕಾರಂ ಸಧರ್ಮಿಭ್ಯೋ ವಂದಾಮಿತ್ಯಾರ್ಯಿಕಾದಿಷು ॥
ಶೃದ್ಧಾಃ ಪರಸ್ಪರಂ ಕುರ್ಯುಃ ಇಚ್ಛಾಕಾರಂ ಸ್ವಭಾವತಃ ।
ಜುಹಾರುರಿತಿ ಲೋಕಸ್ಮಿನ್ನಮುಸ್ಕಾರಂ ಸ್ವಸಜ್ಜನಃ ॥
ಯೋಗ್ಯಾಯೋಗ್ಯನ್ನರಂ ದೃಷ್ಟ್ವಾ ಕುರ್ವೀತವಿನಯಾದಿಕಂ ।
ವಿದ್ಯಾತಪೋಗುಣೌಃ ಶ್ರೇಷ್ಟೋಲಘುಶ್ಚಾಪಿ ಗುರರ್ಮತಃ ।
ಸ್ರಾವಕಾನಾಂ ಮುನಿಂದ್ರೋಹಿ ಧರ್ಮವೃಧ್ಧಿಂ ದದತ್ಯಹೊ ।
ಅನ್ಯೇಷಾಂ ಕೃತಾನಾಂಚ ಧರ್ಮಲಾಭ ಮತಃ ಪರಮ್ ॥
ಆರ್ಯಿಕಾ ತದ್ವದೇವಾತ್ರ ಪುಣ್ಯವೃದ್ಧಿಚ ವರ್ಣಿನಃ ।
ದರ್ಶನವಿಶುದ್ಧಿಂ ಪ್ರಾಯಃ ಕ್ವಚಿದೇತನ್ಮತಾಂತರಮ್ ॥

ಮಹಾ ದಿಗಂಬರ ವೀತರಾಗ ಮುನಿಗಳಿಗೆ ಪಂಚಾಂಗ ನಮಸ್ಕಾರ ಪೂರ್ವಕವಾಗಿ ನಮಸ್ತು ಎಂದು ಹೇಳಬೇಕು. ಬ್ರಹ್ಮಚಾರಿಗಳಿಗೆ ಎರಡು ಕೈಗಳನ್ನು ಜೋಡಿಸಿ ವಂದನಾ ಎಂದು ಹೇಳಬೇಕು. ಸ್ವಾಮಿಗಳು ಪರಸ್ಪರ ವಾಗಿ ಇಚ್ಛಾಮಿ ಅಥವಾ ಇಚ್ಛಾಕಾರವೆಂದು ಮಾಡಬೇಕು. ಸ್ರಾವಕ ಗ್ರಹಸ್ಥರು ಪರಸ್ಪರ ಅವಅವರೊಳಗೆ ಜುಹಾರವೆಂದು ಹೇಳಬೇಕು. ಚಿಕ್ಕ ವರು ದೊಡ್ಡವರಿಗೆ ನಮಸ್ಕಾರವೆಂದು ಹೇಳಬೇಕು. ದೊಡ್ಡವರು ಚಿಕ್ಕವ ರಿಗೆ ಆಶೀರ್ವಾದ ವೆಂದು ಹೇಳಬೇಕು. ಈ ರೀತಿ ಪರಸ್ಪರ ಒಬ್ಬರಿಗೊಬ್ಬರು ದೊಡ್ಡವರು ಚಿಕ್ಕವರಿಗೆ ಚಿಕ್ಕವರು ದೊಡ್ಡವರ ಕೂಡ ಮೇಲ್ಕಂಡಂತೆ ಹೇಳಿ ಬಂದ ಪದ್ಧತಿಯ ಅನುಸಾರವಾಗಿ ಪರಸ್ಪರ ವ್ಯವಹಾರವನ್ನು ಮಾಡಬೇಕೆಂದು ಶ್ರೀ ಜಿನೇಂದ್ರಅರಹಂತ ದೇವರ ಆಜ್ಞೆ ಇದೆ.

ಮುನಿಗಳು ಆರ್ಯಿಕೆಯರಿಗೆ ಆ ಕ್ಷುಲ್ಲಕ ಕ್ಷಲಕಾಯಿವರಿಗೆ ಮತ್ತು ಪಾಲಕರಿಗೆ ಸದ್ಧರ್ಮವೃದ್ಧಿರಸ್ತು ಎಂದು ಆಶೀರ್ವಾದವನ್ನು ಕೊಡಬೇಕು. ಸ್ರಾವಕರಿಗೆ ಸದ್ಧರ್ಮವೃದ್ಧಿರಸ್ತು ಎಂದು. ಬ್ರಹ್ಮಚಾರಿ ಸ್ರಾವಕರಿಗೆ ಪುಣ್ಯಾ ವೃದ್ಧಿ ಅಥವಾ ದರ್ಶನ ವಿಶುದ್ಧಿ ಎಂದು ಆಶಿಸಬೇಕು. ಮತ್ತು ಜೈನೇತರ ಪರ ಧರ್ಮಿಗಳಿಗೆ ಪಾಪಕ್ಷಯೋಸ್ತು ಎಂದು ಹರಿಸಬೇಕು. ಈರೀತಿ ಮಾಡುವ ದಿದು ಶಿಷ್ಟಾಚಾರ ವಿನಯವಾನ ಪುರುಷನಲ್ಲಿ ಇರಬೇಕಾದವುಗಳಾಗಿವೆ.

ಆದ್ದರಿಂದ ಎಲ್ಲ ಮದಗಳನ್ನು ಬಿಟ್ಟು ಸ್ವಾಭಾವಿಕವಾಗಿ ಉಭಯ ಇಚ್ಛೆಯುಳ್ಳವರು ಇಂಥ ಉತ್ತಮವಾದ ಮಾರ್ದವ ಧರ್ಮವನ್ನು ಧರಿಸ ಬೇಕೆಂಬುದು ತಾತ್ಪರ್ಯವಿದೆ.

:-- ಓಂ ಹ್ರೀಂ ಮಾರ್ದವ ಭಾವಾಯನಮಃ :—

೩ ಉತ್ತಮ ಆರ್ಜವಧರ್ಮ

ಪಾಪೇರತಿಂ ಮಾಕುರು---ಪಾಪಕರ್ಮದಲ್ಲಿ ಪ್ರೀತಿಯನ್ನು ಮಾಡಬೇಡ, ಆರ್ಜವ ಧರ್ಮವು ಅಥಾತ್ ಉತ್ತಮ ಆರ್ಜವ ಗುಣಧರ್ಮವು ಸಂಪೂರ್ಣ ಮಾನವ ಪ್ರಾಣಿಗಳಿಗೆ ಈ ಲೊಕದಲ್ಲಿ ಪರಲೋಕದಲ್ಲಿ ಸುಖ ಶಾಂತಿ ಯನ್ನು ಉಂಟುಮಾಡಿಕೊಡುವದಾಗಿದೆ.

" ಋಜೋರ್ಭಾವಃ ಇತಿ ಆರ್ಜವಃ " ಆರ್ಜವ–ಅಂದರೆ ಸರಳ ಭಾವ ವನ್ನು ತನ್ನ ಹೃದಯದಲ್ಲಿ ಧರಿಸುವದೇ ಆರ್ಜವ ಧರ್ಮವು; ಅಥವಾ ರುಜು ಭಾವ ಅಥವಾ ಸರಳಭಾವವೆಂದು ಹೇಳಿದ್ದಾರೆ. ಈ ಉತ್ತಮ ಆರ್ಜವ ಧರ್ಮವು ಆತ್ಮನ ಸ್ವಾಭಾವಿಕವಾದ ನಿಜಗುಣವಿದೆ.

ಈ ಆರ್ಜವ ಧರ್ಮವು ಏನುಮಾಡುತ್ತದೆಂದರೆ,

ಆರ್ಜವ ಕಿ ಯತೆ ಸಮ್ಯಗ್ ದುಷ್ಟ ಬುದ್ಧಿಂಚ ತ್ಯಜ್ಯತೆ।
ಪಾಪಚಿಂತಾ ಕರ್ತವ್ಯಂ ಭವ್ಯನಾಽ ಪಿ ಚ ಸರ್ವದಾ॥

ಈ ಆರ್ಜವ ಗುಣವು ಧರಿಸಿರ್ದ ಮಾನವನಲ್ಲಿ ಇದು ಆತ್ಮನಲ್ಲಿ ಅತ್ಯಂತ ಮಲೀನವಾದ ಕರ್ಮಗಳನ್ನು ಹೊರಗೆಡಿಸಿ ಸಮ್ಯಕ್ತ್ವವನ್ನು ಉಂಟು ಮಾಡುತ್ತದೆ. ಮತ್ತು ಅಂತ್ಯದಲ್ಲಿ ಮೋಕ್ಷವನ್ನು ಪ್ರಾಪ್ತಮಾಡಿ ಕೊಡುವದಾಗಿದೆ. ಆದ್ದರಿಂದ ಪ್ರತಿಯೊಬ್ಬ ಮಾನವನು ಈ ಉತ್ತಮ ಆರ್ಜವ ಗುಣವು ತನ್ನ ನಿಜಾತ್ಮನ ಸ್ವಭಾವವೆಂದು ತಿಳಿದು ಪಾಪಚಿಂತ ನೆಗಳನ್ನು ಬಿಟ್ಟು ಬಿಡಬೇಕು. ಎಲ್ಲರೂ ಭಾವಿಸಿ ಆರ್ಜವ ಗುಣವನ್ನು ಧರಿಸಬೇಕು.

ಆರ್ಜವಗುಣವಿಲ್ಲದ ಮನುಷ್ಯನು ಈ ಸಂಸಾರದಲ್ಲಿ ಅನೇಕ ಕಷ್ಟಗ ಳನ್ನು ಭೋಗಿಸಬೇಕಾಗುತ್ತದೆ. ಆರ್ಜವಗುಣವೆಂದರೆ ಮನದೊಳಗಿನ ಮಾಯಾಚಾರವನ್ನು ಬಿಟ್ಟು ಸರಳ ಪರಿಣಾಮವನ್ನು ಧರಿಸುವದು ಇದಕ್ಕೆ ಆರ್ಜವಗುಣ ಅಥವಾ ಸರಳತೆಯೆಂದು ಹೇಳುವರು. ಸರಳತೆಯಿಲ್ಲದವನು ಕಪಟಿ ಅರ್ಥಾತ್ ಮಾಯಾಚಾರಿ ಮನುಷ್ಯನು ಕಪಟದಿಂದ ಮಾಡಿದ ಉದ್ಯೋಗ ಮೊದಲಾದ ವ್ಯವಹಾರ ಕಾರ್ಯಗಳು ನಿರ್ವಿಘ್ನವಾಗಿ ಸಂಸಾರ ದಲ್ಲಿ ನಡೆಯುವದಿಲ್ಲ. ಮತ್ತು ಮಾಯಾಚಾರದಿಂದ ಮರಣಹೊಂದಿದ ಮನುಷ್ಯ ತಿರ್ಯಂಚ ಪಶು ಪಕ್ಷಿ ಅಥವಾ ಬೆಕ್ಕು, ನಾಯಿ, ನಿಂದ್ಯಸ್ತ್ರೀ

ಪರ್ಯಾಯ ಮೊದಲಾದವುಗಳ ಯೋನಿಗಳಲ್ಲಿ ಜನ್ಮ ತಾಳುವನು. ಅಲ್ಲಿ ಅನೇಕ ಪ್ರಕಾರದ ದುಃಖಗಳನ್ನು ಅನುಭವಿಸಿ ಮುಂದೆ ತನ್ನ ಅಯುಷ್ಯ ವನ್ನು ಪೂರೈಸಿ ಅತ್ಯಂತ ಪರಂಪರಾ ನಿಂದ್ಯವಾದ ಕಾಪಕ ಮಹಾದುರ್ಗ ತಿಗಳಲ್ಲಿ ಬಿದ್ದು ದೀರ್ಘಸಂಸಾರಿಯಾಗುತ್ತಾನೆ.

ಕಪಟೀ ಮನುಷ್ಯನ ನಂಬುಗೆಯನ್ನು ಜಗತ್ತಿನಲ್ಲಿ ಯಾರೂ ಮಾಡು ವದಿಲ್ಲ ಮತ್ತು ನಂಬುವದಿಲ್ಲ. ಕಪಟೀ ಮನುಷ್ಯನ ವ್ಯವಹಾರ ಉದ್ಯೋಗ ಮೊದಲಾದ ಕಾರ್ಯಗಳು ಸ್ಥಿರವಾಗಿ ನಡೆಯುವದಿಲ್ಲ. ಅವನು ಹೃದಯ ದಲ್ಲಿ ಚಿಂತೆ ಮತ್ತು ವ್ಯಾಕುಲತೆಯಿಂದ ಭಯಗ್ರಸ್ಥನಾಗಿರುತ್ತಾನೆ. ಕಪಟ ತನದಿಂದ ಈ ಮನುಷ್ಯನು ದೇಶ ವಿದೇಶಗಳಲ್ಲಿ ತಿರುಗತ್ತಲೇ ಇರುತ್ತಾನೆ. ದೇವ, ಶಾಸ್ತ್ರ, ಗುರುಗಳಲ್ಲಿ ಕೂಡ ಕಪಟ ವ್ಯವಹಾರವುಳ್ಳವನಾಗುತ್ತಾನೆ. ಮಾಯಾಚಾರೀ ಮನುಷ್ಯನು ದೇವರನ್ನು ಅನೇಕ ಕಪಟ ವೃತ್ತಿಯಿಂದ ಮೋಸಗೊಳಿಸುತ್ತಾನೆ. ಅಸಲೀ ವಸ್ತುಗಳಲ್ಲಿ ನಕಲೀ ವಸ್ತುಗಳನ್ನು ಮಿಶ್ರಿತ ಮಾಡಿ ಮಾರಾಟ ಮಾಡುತ್ತಾನೆ ತುಪ್ಪಿನಲ್ಲಿ ಎಣ್ಣೆ ದನಗಳ ಚರ್ಬಿ (ನೆಣ) ಮೊದಲಾದವುಗಳನ್ನು ಕೂಡಿಸುವವನು. ಇಂಥ ಮಾಯಾಚಾರಿ ಮನುಷ್ಯನು ಸತ್ತು ತಿರ್ಯಂಚಗತಿಯಲ್ಲಿ ಜನಿಸುತ್ತಾನೆ. ತತ್ವಾರ್ಥ ಸೂತ್ರದಲ್ಲಿ ಉಮಾ ಸ್ವಾಮಿಗಳು ಕೂಡ ಈ ರೀತಿ ಹೇಳಿರುತ್ತಾರೆ.

" ಮಾಯಾ ತೈರಗ್ಯೋನಸ್ಯ " ಯಾಯಾಚಾರಿ ಮನುಷ್ಯನು ಸತ್ತು ನೀಯಮದಿಂದ ತಿರ್ಯಂಚಗತಿಯಲ್ಲಿ ಜನ್ಮ ತಾಳುತ್ತಾನೆ. ಈ ಕಪಟೀ ಮಾಯಾಚಾರೀ ಮನುಷ್ಯನ ವ್ಯವಹಾರಗಳು ನ್ಯಾಯಪೂರ್ವಕ ಇಲ್ಲವಾದು ದರಿಂದ ಯಾವತ್ತು ರಾಜದಂಡ ಮತ್ತು ಪಂಚದಂಡಕ್ಕೆ ಗುರಿಯಾಗುತ್ತಾನೆ. ಮಾಯಾಚಾರಿ ಮನುಷ್ಯನಿಗೆ ಜನ್ಮಕೊಟ್ಟ ತಾಯಿತಂದೆಗಳೂ ಮತ್ತು ಬಂಧುಗಳೂ ದಾಯಾದರುಗಳೂ, (ಅಥವಾ ಶತ್ರುಗಳು) ಸಹ ನಂಬಿಗೆ ಯನ್ನಿಡುವದಿಲ್ಲ.

ಮಾಯಾಚಾರದಿಂದ ಆಗುವಹಾನಿಃ—

ಯಾವದೊಂದು ಪಟ್ಟಣ ದೊರೆಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವನಲ್ಲಿ ರುವ ಮಂತ್ರಿಯ ಹೃದಯದಲ್ಲಿ ಕಪಟಭಾವ ಉಂಟಾಯಿತು. ಅಂದರೆ ಈ ರಾಜ ನನ್ನು ಏನಾದರೊಂದು ಉಪಾಯದಿಂದ ಕೊಂದು ಇವನ ರಾಜ ಗದ್ದುಗೆಗೆ

ನಾನೆ ಅಧಿಪತಿಯಾಗಬೇಕೆಂದು, ಮನಸಿನಲ್ಲಿ ಏನು ಆಲೋಚಿಸುತ್ತಾನಂದರೆ:– ಅದೇ ನಗರದಲ್ಲಿ ಕಾಳ್ಯಾಯೆಂಬ ರಾಜನ ನಾವಲಿಗನಿದ್ದನು, ಅವನನ್ನು ಕರೆಸಿ ಅವನಿಂದಲೇ ಈ ಕೃತಿಯನ್ನು ಪೂರೈಸಬೇಕೆಂದು ಆಲೋಚಿಸಿ ಆ ನಾವಲಿಗನನ್ನು ಕರೆಸಿಕೊಂಡನು, ನಾವಲಿಗನು ಬಂದ ಮೇಲೆ ಅವನನ್ನು ಏಕಾಂತಕ್ಕೆ ಕರೆದೊಯ್ದು ಹೇಳಿದ್ದೇನೆಂದರೆ, ನೀನು ಈ ರಾಜನನ್ನು ಕೊಲ್ಲುವ ಉಪಾಯವನ್ನು ಮಾಡಬೇಕೆಂದು ಹೇಳಿದನು. ಈ ಮಾತನ್ನು ಕೇಳಿ ನಾವಲಿಗನು—ಅನ್ನದಾತಾ ಈ ಕೆಲಸವು ನನ್ನಿಂದ ಆಗುವದು ಅಸಾಧ್ಯವಿದೆ. ಈ ರೀತಿ ಅಂದ ಕೂಡಲೆ ಮಂತ್ರಿಯು ಅವನನ್ನು ಹೆದರಿಸಿ ಹೇಳಿದ್ದೇನಂದರೆ ನೀನು ಈ ಕೆಲಸ ಮಾಡದಿದ್ದರೆ ನಿನ್ನಲಿರ್ವ ಆಸ್ತಿಯನ್ನೆಲ್ಲ ಕಸಿದುಕೊಂಡು ನಿನ್ನನ್ನು ಹದ್ದುಪಾರ ಮಾಡುವೆನೆಂದು ಹೇಳಿದನು. ಈ ರೀತಿ ಅಂದ ಕೂಡಲೆ ಕಾಳ್ಯಾ ನಾವಲಿಗನು ಒಪ್ಪಿಕೊಂಡು ಕೇಳುವದೇನಂದರೆ– ಯಾವ ಉಪಾಯದಿಂದ ಈ ರಾಜನನ್ನು ಕೊಲ್ಲಬೇಕು? ಆ ರೀತಿಯನ್ನು ಹೇಳಿರಿ ನಾನು ಬಡವ ನನಗೆ ನೀವೆ ಗತಿ, ಎಂದು ಈ ನಾವಲಿಗನು ದೀನತೆಯಿಂದ ಕೇಳಿಕೊಂಡ ಮೇಲೆ ಮಂತ್ರಿ ಅಂದದ್ದು:—

ನೀನು ಹೆದರಬೇಡ ನಿನಗೆ ನಾನು ಸಾಕಾಗುವಷ್ಟು ಹಣ ಕೊಟ್ಟು ನಿನ್ನನ್ನು ನಾನು ಸುಖದಲ್ಲಿಡುವೆನು.

ರಾಜನನ್ನು ಕೊಲ್ಲುವ ಉಪಾಯ–ನೀನು ರಾಜಮಹಲದಲ್ಲಿ ರಾಜನ ಕ್ಷೌರ ಮಾಡುವಾಗ ಕಲ್ಲಿಗೆ ನಿನ್ನ ಶಸ್ತ್ರವನ್ನು (ಕತ್ತಿ) ಚನ್ನಾಗಿ ತಿಕ್ಕುತ್ತ ತಿಕ್ಕುತ್ತಲೇ ಅವನ ಗದ್ದಕ್ಕೆ ನೀರು ಹಚ್ಚಿದ ಕೂಡಲೆಯೇ, ಆ ಕ್ಷೌರ ನಿಮಿತ್ತದಿಂದ ಅವನ ಕುತ್ತಿಗೆಯನ್ನು ಅಸ್ತ್ರದಿಂದ ಕೊಯ್ದು ಬಿಡುಯೆಂದು ಹೇಳಿದಾಗ ಆ ನಾವಲಿಗನು ಆ ಕಪಟ ಮಾಯಾಚಾರಿ ಮಂತ್ರಿ ಹೇಳಿದ ಮಾತನ್ನು ಕೇಳಿ ಒಪ್ಪಿಕೊಂಡನು. ಒಂದಾನೊಂದು ದಿವಸ ವಸಮಯನನ್ನು ಕಾಯ್ದುಕೊಂಡು ಜನವಿಲ್ಲದ ಸಮಯವನ್ನರಿದು ಕ್ಷೌರಕ್ಕೆ ನಾವಲಿಗನು ರಾಜ ಮಂದಿರದಲ್ಲಿ ಪ್ರವೇಶಿಸಿದನು. ರಾಜನು ಕ್ಷೌರಕ್ಕೆ ಬಂದು ಕುಳಿತ ಮೇಲೆ ಹಸಿಬೆಯೊಳಗಿನ ಒಂದು ಬಟ್ಟಲವನ್ನು ತೆಗೆದುಕೊಂಡು ಅದರೊಳಗೆ ನೀರು ತುಂಬಿ ಆ ಹಸಿಬೆಯೊಳಗಿನ ವಸ್ತ್ರಳವನ್ನು ತಗೆದು ನಿರೊಳಗೆ ಎದ್ದಿ ಒಂದು ಮಸಿಯುವ ಕಲ್ಲ ಮೇಲೆ ತಿಕ್ಕುತ್ತ ಪುನಃ ನಿರೊಳಗೆ ಮುಳು ಮುಳುಗಿಸಿ (ಕತ್ತಿಯನ್ನು) ತಿಕ್ಕು

ವನು. ಈ ರೀತಿ ಬಾರಿ ಬಾರಿ ಮಾಡುತ್ತಿರುವಾಗ ಅಲ್ಲೇ ಸಮೀಪದಲ್ಲಿ ಒಂದು ನೀರಿನಿಂದ ತುಂಬಿದ ಒಂದು ಹೂಜೆ ಇದ್ದಿತು. ಅದರ ಮೇಲೆ ಒಂದು ಕಾಗೆಯೂ ಅದೇ ಸಮಯದಲ್ಲಿ ಕುಳಿತು ತನ್ನ ಚುಂಚಿನಿಂದ ಹೂಜೆಯೊಳಗಿನ ನೀರಲ್ಲಿ ಚುಂಚನ್ನು ಮುಣುಮುಣುಗಿಸಿ ಹೂಜೆಯ ಕಂಠಕ್ಕೆ ತಿಕ್ಕುವದು. ಪುನಃ, ಮುಳಗಿಸಿ ಪುನಃ ಮೇಲಕೆತ್ತಿ ಚುಂಚನ್ನು ಮಸೆಯುವದು ಈ ರೀತಿ ಎಷ್ಟೋ ಸಾರೆ ಕ್ರಿಯೆಗಳನ್ನು ಮಾಡತಿದ್ದ ಆ ಕಾಗೆಯ ಕ್ರಿಯೆಗಳನ್ನು ರಾಜನು ನೋಡಿ ಹೇಳುವದೇನಂದರೆ.

ಮುಖ ಡುಬಾವೆ ಖೂರ ಘಿಸೆ ಘಿಸ ಘಿಸಲಾವೆ ಪಾಣಿ ॥
ತೇರೆಮನಕೀ ಸಬ ಬಾತೆ ಕಾಲಿಯಾ ನ್ಯೆನೆ ಜಾಣಿ ॥

ಈ ಪದ್ಯವನ್ನು ರಾಜನು ಅವನ ಮುಖದಿಂದ ಕೇಳಿದಾಗ ಕಾಳಿಯಾ ನಾವಲಿಗನು ಹೆದರಿ ಆಗಲೇ ಸೀಘ್ರದಿಂದ ಕರಗಳನ್ನು ಜೋಡಿಸಿ ಚರಣದ ಮೇಲೆ ಬಿದ್ದು ಹೇಳಿದ್ದೇನಂದರೆ-ಎಲೇ ನನ್ನ ಅನ್ನದಾತರಾದ ಪ್ರಭುಗಳೇ ! ಇದೊಂದು ಬಹಳ ದೊಡ್ಡ ತಪ್ಪು ಮಾಡಿದ್ದೇನೆ. ಕ್ಷಮಿಸಬೇಕೆಂದೂ ಮತ್ತು ಈ ಕರ್ತವ್ಯ ತಮ್ಮ ಮುಖ್ಯ ಮಂತ್ರಿಗಳು ನನಗೆ ಒತ್ತಾಯ ಮಾಡಿದ್ದರಿಂದ ಈ ನಿಂದ್ಯ ಕೆಲಸವನ್ನು ನಾನು ಮಾಡಲು ಉದ್ಯುಕ್ತನಾದದ್ದನ್ನು ಕ್ಷಮಿಸಬೇಕೆಂದು ಹೇಳಲು:-ಈ ಕಾಳಿಯ ನಾವಲಿಗನ ಈ ಪ್ರಾರ್ಥನೆಯನ್ನು ಕೇಳಿ ಇದೇನು ಈ ರೀತಿ ನೀನು ಮಾತನಾಡುವದು, ಎಂದು ಕೇಳಲು ಕಾಳಿಯ ನಾವಲಿಗನಂದದ್ದು:— ನಿಮ್ಮ ಮಂತ್ರಿಯುನಿಮ್ಮನ್ನು ಕ್ಷೌರ ನಿಮಿತ್ಯದಂದ ಇಂದು ನಿಮ್ಮ ಕುತ್ತಿಗೆಯನ್ನು ಕತ್ತಿಯಿಂದ ಕೊರೆಯಬೇಕೆಂದು ಹೇಳಿದ್ದನು. ಆದ್ದರಿಂದ ನಾನು ಇದೇ ವೇಳೆಯಲ್ಲಿ ತತ್ಕಾಲದಲ್ಲಿ ಕೊರೆಯುವದಕ್ಕೆ ಆರಂಭಿಸುವವನಿದ್ದೆನು. ಆದರೆ ತಾವು ನನ್ನ ಮನಸ್ಸಿನ ಕೆಟ್ಟ ದುರ್ಭಾವನೆಯನ್ನು ಅರಿತಿರುವಿರಿ. ನನ್ನ ಹೆಸರು ಕಾಳಿಯ. ನಾನು ನಿಮ್ಮ ದೊಡ್ಡ ಅಪರಾಧದ ದಂಡನೆಗೆ ಪಾತ್ರನಿದ್ದೇನೆಂದು ಹೇಳುವ ನಾವಲಿಗನ ಮಾತನ್ನು ಕೇಳಿ ರಾಜನು ಆ ಮಂತ್ರಿಯು ಮಾಡಿಸತಕ್ಕಂಥಾ ದೊಡ್ಡ ಅಪರಾಧದ ಬಗ್ಗೆ ಅವನಿಗೆ ಪ್ರಾಣ ದಂಡನೆ ಮಾಡಿದನು.

ರಾಜನು ಆ ಕಾಗೆಯು ಹೂಜಿಯೊಳಗಿನ ನೀರು ಕುಡಿಯುವದನ್ನು ನೋಡಿ ಮತ್ತು ತನ್ನ ಚೊಂಚನ್ನು ಮರಮರಳಿ ನೀರೊಳು ಮುಳುಗಿಸಿ ಪುನಃ ಮಸೆಯುವದನ್ನು ನೋಡಿ, ಕಾಗೆಯು ಉದ್ದೇಶದಿಂದ ನುಡಿದ ಈ ಪದ್ಯದಿಂದ ಅಂದರೆ ಕಾಗೆಯು ಕಾಳಿಯ ಎಂದು ಹೇಳಿದ್ದರಿಂದ ಈ ಮಾತು ನಾವಲಿಗನ ಹೆಸರೂ ಕೂಡ ಇದ್ದದರಿಂದ, ನಾವಲಿಗನೂ ತನ್ನ ಮನಸ್ಸಿಗೆ ದುಷ್ಟ ಕರ್ತವ್ಯವನ್ನು ರಾಜನು ತಿಳಿದುಕೊಂಡನೆಂದು ಅರಿದುದರಿಂದ ತನ್ನ ಮಾಡುವ ದುಷ್ಕೃತ್ಯವನ್ನು ಹೇಳಿದನೆಂದು ಇದರ ತಾತ್ಪರ್ಯವಾಯಿತು. ನಾವಲಿಗನಿಗೆ ರಾಜನು ನಿರಪರಾಧಿಯೆಂದರಿತು ಅವನಿಗೆ ಪ್ರಾಣದಾನವನ್ನು ಕೊಟ್ಟು ತನ್ನ ದೇಶದಿಂದ ಹೊರಕ್ಕೆ ಹಾಕಿದನು.

ಹೇಳುವ ತಾತ್ಪರ್ಯವೇನಂದರೆ ಕಪಟತನ ಅರ್ಥಾತ್ ಮಾಯಾಚಾರದಿಂದ ಮಾಡಿದ ಕೃತ್ಯವು ಎಂದಿಗೂ ಮುಚ್ಚಿರದೆ ಹೊರಗೆ ಪ್ರಕಟವಾಗುತ್ತದೆ. ಆದ್ದರಿಂದ ಯಾರಿಗೆ ತಮ್ಮ ಆತ್ಮಹಿತ ಮಾಡಿಕೊಳ್ಳಬೇಕೆಂಬ ಇಚ್ಛೆ ಉಂಟೋ ಅವರು ನಿಷ್ಕಪಟವೃತ್ತಿ ಅರ್ಥಾತ್ ಮಾಯಾಚಾರ ವೃತ್ತಿಯನ್ನು ಬಿಟ್ಟು ಸರಳ ಪರಿಣಾಮವನ್ನು ತಾಳಬೇಕು. ಈ ಮಾಡಿದ ಕಪಟ ಬುದ್ಧಿಯು ನಾವು ಯಷ್ಟು ಮುಚ್ಚಬೇಕೆಂದರೂ ಮುಚ್ಚುವದಿಲ್ಲ. ಎಣ್ಣೆಯನ್ನು ನೀರೊಳಗೆ ಮುಳುಗಿಸಿದರೆ ಅದು ಎಷ್ಟು ಆಗಲೇ ಮೇಲಕ್ಕೆ ಬರುತ್ತದೆ. ಇದೇ ರೀತಿ ಕಪಟಿ ಮನುಷ್ಯನ ಕಪಟತನವೂ ಕೂಡ ಶೀಘ್ರ ಪ್ರಕಟವಾಗಿ ಕಂಡು ಬರುತ್ತದೆ.

ಇದರ ಬಗ್ಗೆ ಓರ್ವ ಹಿಂದಿಕವಿಗಳು ಒಂದು ದೋಹೆಯನ್ನು ಹೇಳುತ್ತಾರೆ.

ಚೋರಚುರಾಯಾ ತುಂಬಡಿ ಜಲಮೆ ದಿಯಿ ಡುಬಾಯ ।
ವೇಡು ಬಾವೆ ವೇ ಉಮಡೆ ಪಾಪ ಛಿಪೆಗಾನಾಯ ॥

ಒಬ್ಬ ಕಳ್ಳನು ಒಂದು ಈಸುಗುಂಬಳಕಾಯಿ (ತುಂಬಿಫಲ) ಯನ್ನು ಕದ್ದು ತಂದು ಒಂದು ಬಾವಿಯಲ್ಲಿ ಕೆಸರನ್ನು ಲೇಪಿಸಿ ಮುಳುಗಿಸಿ ಮೇಲೆ ಬಂದು ಹತ್ತುವದರೊಳಗಾಗಿಯೇ ಆ ತುಂಬಿಫಲವು ಮೇಲಕ್ಕೆದ್ದು ಬರುವಂತೆ ಕಪಟಪೂರ್ವಕವಾಗಿ ಮಾಡಿದ ಪಾಪವು ಆಗಲೇ ತನ್ನ ಎದುರು ಬಂದು ಫಲಕೊಡುತ್ತದೆಂದು ತಿಳಿದು ಸಜ್ಜನರಾದ ಜ್ಞಾನಿ ಜನರು ಕಪಟವನ್ನು ತೊರೆಯಬೇಕೆಂದು ಶ್ರೀ ಜಿನೇಂದ್ರ ದೇವರ ಆಜ್ಞೆಯಿದೆ.

ಪರವಸ್ತುವಿನ ಪ್ರಾಪ್ತಿಯಗೋಸ್ಕರ ಈ ಜೀವಾತ್ಮನು ತಾನು ಮಾಡ ಬಾರದ ಪಾಪವನ್ನು ಈ ಸಂಸಾರವೆಂಬ ಮಹಾ ಅರಣ್ಯದೊಳಗೆ ಯಾರೂ ತನಗೆ ರಕ್ಷಕರಿಲ್ಲದೆ ಒಂಟಿಯಾಗಿ ನಾನಾತರದ ಸುಖದುಃಖಗಳನ್ನು ಅನುಭವಿ ಸುತ್ತಾನೆ.

ನರಕ ತಿರಿಯಂಚಾದಿ ಪಶುಗತಿಗಳನ್ನು ಧರಿಸಿ ಹೊಂದಲಾರದ ಪರ್ಯಾಯ ಮತ್ತು ಯೋನಿಗಳನ್ನು ತಾಳುತ್ತ ರಾಟಾಳದಂತೆ ಪಂಚವರ್ತನ ಸಂಸಾರಚಕ್ರ ದಲ್ಲಿ ಪರಿಭ್ರಮಣ ಮಾಡುತ್ತಾನೆ. ಆದ್ದರಿಂದ ಎಲೇ ಜೀವಾತ್ಮನೆ ನಿನ್ನಲ್ಲಿ ನೀನು ಅರಿದು ಪರಮಾರ್ಥ ದೃಷ್ಟಿಯಿಂದ ನೋಡಿದರೆ ನೀನು ಯಾವಾಗಲೂ ಪರಿಭ್ರಮಣರಹಿತ ಅಚಲ ಅನುಪಮ ಅಗತಿಶಾಶ್ವತ ಸ್ವರೂಪ ಉಳ್ಳವನಾಗಿ ರುತ್ತೀ ಅಯ್ಯಾ ಜೀವಾತ್ಮನೆ! ನೀನು ಇಂಥ ನಿರಪರಾಧ ನಿತ್ಯಾನಂದ ಅಖಂಡ ಸುಖರೂಪವುಳ್ಳವನಾಗಿಯೂ ನಿನ್ನನ್ನು ನೀ ಮರೆತು ಯಾಕೆ ಪರವಸ್ತು ನನ್ನ ದೆಂದು ಅದರ ಪ್ರಾಪ್ತಿಗೋಸ್ಕರ ಇನ್ನೊಬ್ಬ ಜೀವರನ್ನು ಕಪಟ ಬುದ್ಧಿಯಿಂದ ಮೋಸ ಮಾಡಿ ನೀನು ಮೋಸದಿಂದ ಪಾಪಫಲವನ್ನು ಸಂಪಾದಿಸಿಕೊಂಡು ಆ ಪಾಪದ ಫಲದಿಂದ ಪರಪರಿಣತಿಯನ್ನು ಹೊಂದಿ ಪರಿ ಪರಿ ದುಃಖವನ್ನಾಕೆ ಭೋಗಿಸುತ್ತಿರುವೆ? ಬಿಡು. ಕಪಟ ರೀತಿಯಿಂದ ಎಷ್ಟು ಜನರು ಪಾಪಕ್ಕೆ ಸಂದು ಆ ನರಕದಲ್ಲಿ ಪರಿ ಪರಿ ದುಃಖವನ್ನು ಅನಭವಿಸಿದರು !

ಪೂರ್ವ ಪುಣ್ಯಹೀನವಾದ ಮನುಷ್ಯನು ಸಾಕಷ್ಟು ಅನ್ಯಾಯ ಅಥವಾ ಕಪಟಬುದ್ಧಿಯಿಂದ ಇನ್ನೊಬ್ಬರನ್ನು ಮೋಸಗೊಳಿಸಿ ಹಣವನ್ನು ಧರ್ಮವನ್ನು ಗಳಿಸಿಕೊಳ್ಳಬೇಕೆಂದರೂ ತಾನೆ ಪೂರ್ವ ಪುಣ್ಯಸಂಚಯವು ಇಲ್ಲದ ಕಾರಣ ಸಂಸಾರದಲ್ಲಿ ನಮಗೆ ಬೇಕಾದ ದ್ರವ್ಯ, ಮನೆ, ಹೊಲ, ಜನರ ಅನುಕೂಲತೆ ಎಲ್ಲ ಜನರಿಗೆ ಪ್ರಿಯವಾಗಿರುವಂಥ ಗುಣಗಳು, ನಡೆ–ನುಡಿ, ವಿನಯ, ಲೋಕ, ವ್ಯವಹಾರದ ಧಂಡೆ, ಪ್ರವೃತ್ತಿ ಜನರಲ್ಲಿ ಒಳ್ಳೇ ನಂಬುಗೆ ಇವು ಮೊದಲಾದವು ಗಳು ನಮಗೆ ನಮ್ಮ ಮನದ ಅನುಕೂಲದಂತೆ ದೊರೆಯಬೇಕಾದರೆ ಪುಣ್ಯ ಸಂಚಯವೇ ಬೇಕು. ಇದು ಇಲ್ಲದಿದ್ದರೆ ನಮ್ಮ ಕೈಯಲ್ಲಿದ್ದ ಹೊನ್ನು ಕೂಡ ಮಣ್ಣುಪಾಲವಾಗುವದು. ಮತ್ತು ಪುಣ್ಯವಿದ್ದರೆ ಮಣ್ಣೂ ಕೂಡ ಹೊನ್ನಾ ಗುವದು. ಪುಣ್ಯಹೀನನಾಗಿದ್ದರೆ ಎಲ್ಲಿ ಹೋದರೂ ಪಾಪವು ಬಿಡದೆ ಬೆನ್ನಟ್ಟಿ ಹಿಂಬಾಲಿಸಿ ಬರುತ್ತದೆ.

ಇದರ ಬಗ್ಗೆ ನೀತಿಕಾರರು ಹೇಳುತ್ತಾರೆ:—

ಖಲ್ವಾಟೋ ದಿವಸೇಶ್ವರಸ್ಯ ಕಿರಣ್ಯೈಃ ಸಂತಾಪಿತೋ ಮಸ್ತಕೇ ।
ವಾಂಛಂದೇಶಮನಾತಪಂ ವಿಧಿವಶಾತ್ತಾಲಸ್ಯಮೂಲಂ ಗತಃ ॥
ತತ್ರಾಪ್ಯಸ್ಯ ಮಹಾಫಲೇನ ಪತತಾ ಭಗ್ನಂ ಸಶಬ್ದಂ ಶಿರಃ ।
ಪ್ರಾಯೋಗಚ್ಛತಿ ಯತ್ರ ಭಾಗ್ಯರಹಿತ ಸ್ತತ್ರೈವ ಯಾನ್ತ್ಯಾಪದಃ ॥

ಒಬ್ಬ ದರಿದ್ರ ಮನುಷ್ಯನು ದರಿದ್ರತೆಯಿಂದ ಪೀಡಿತನಾಗಿದ್ದು ಅವನು ಕ್ಷೌರವನ್ನು ಮಾಡಿಸಿಕೊಂಡು ಬೋಳ ತಲೆಯನ್ನು ಬಿಟ್ಟುಕೊಂಡು ಹೊಟ್ಟೆ ಹೊರುವದನ್ನು ಹುಡುಕುವ ಸಲುವಾಗಿ ಹಳ್ಳಿ–ಕೊಳ್ಳಿಗೆ ಹೋಗುತ್ತಿದ್ದನು. ಹೊಟ್ಟೆ ಹಸಿವು ಅದರೊಳಗೆ ಬಿಸಿಲಿನ ಹೆಚ್ಚಾದ ತಾಪ ಅದರೊಳಗೆ ಬರಿಗಾಲಿಂದ ನಡೆಯುವದು. ಇದೆಲ್ಲ ಪೂರ್ವ ಜನ್ಮದಲ್ಲಿ ನಾನು ಮಾಡಿದ ಪಾಪದ ಫಲವೆಂದು ಅರಿದು ತನ್ನೊಳಗೆ ವಿಚಾರಿಸುತ್ತ ನಡೆಯುತ್ತಿರಲು ದಾರಿಯಲ್ಲಿ ಒಂದು ತಂಪವಾದ ಶೀತಲ ಜಲದಿಂದ ತುಂಬಿದ ಬಾವಿಯನ್ನು ಕಂಡು ಬಿಸಿಲಿನ ತಾಪದಿಂದ ಬೇಸತ್ತವನಾಗಿದ್ದವನಾಗಿರುವದರಿಂದ ಅಲ್ಲಿ ಹೋಗಿ ಶೀತಳ ಜಲವನ್ನು ಕುಡಿದು ಪುನಃ ಸ್ನಾನ ಮಾಡಿಕೊಂಡು ನಡೆದು ಅತ್ಯಂತ ಬೇಸರಾಗಿದ್ದರಿಂದ ಅದೆ ಒಂದು ಬಾವಿಯ ಬಳಿಯಲ್ಲಿ ಒಂದು ತಾಡ ಮರ ವಿತ್ತು. ಅಲ್ಲಿ ವಿಶ್ರಾಂತಿಕೊಳ್ಳಬೇಕೆಂದು, ವಿಶ್ರಮಿಸಿದರೆ ಅಲ್ಲಿಯಾದರೂ, ಆವನ ಕರ್ಮದ ವಿಧಿಯು ಆತನು ಇದ್ದ ಕಡೆಗೆ ಹುಡುತ್ತ ಬಂದಿದೆಂಬುವಂತೆಯೇ ಆದರಿಂದ್ರ ಮನುಷ್ಯ ಬೋಳ ತಲೆ ಬಿಟ್ಟುಕೊಂಡು ಹೊಟ್ಟೆಗಿಲ್ಲದೆ ಅಯ್ಯೋ ! ಭಗವಂತನೆ ನಾನು ಏನು ಇಂಥಾದ್ದು ಪಾಪ ಮಾಡಿದೆ ಹಿಂದಿನ ಭವದಲ್ಲಿ ? ಈಗ ನನಗೆ ನಿರಾಶ್ರಯವಾಗಿ ಕಳೆಯಬೇಕಾಗಿದೆಯೆಲ್ಲಾ ? ಎಂದು ಹಳಹಳಿಸುತ್ತ ದೊಡ್ಡ ಉಸುರುಕೆಯನ್ನು ಬಿಡುತ್ತ ಕಣ್ಣೀರು ಉದುರಿಸುತ್ತಿರುವಾಗ ವಿಧಿ ಹುಡುಕಿ ಬಂದಿತೇನೋ ಎನ್ನುವ ಹಾಗೆ ಆ ತಾಡಮರದ ಒಂದು ಫಲವು ಬಿರುಗಾಳಿಯಿಂದ ಹರಿದು ಆತನ ಬೋಳ ತಲೆಯ ಮೇಲೆಯೇ ನೆಟ್ಟನೆ ಬಂದು ಬಿದ್ದು ಕೂಡಲೆ ಅವನ ಮಸ್ತಕವು ಸೀಳಿ ಎರಡು ಭಾಗವಾಯಿತು. ಮತ್ತು ಅವನ ಪ್ರಾಣ ಅಲ್ಲೇ ಹಾರಿಹೋಯಿತು. ಹೇಳುವ ತಾತ್ಪರ್ಯವೇನಂದರೆ ಪುಣ್ಯ ಸಂಚಯವಿಲ್ಲದೆ ಈ ಜೀವನಿಗೆ ಸಂಸಾರಿಕ ಸಂಬಂಧಿಯಾದ ಎಲ್ಲ ಇಂದ್ರಿಯಜನ್ಯ ಸುಖವು ಅನುಕೂಲವಾದ ದೇಶ, ಕುಲ, ಜಾತಿ, ನೀತಿ ಯೋಗ್ಯ ನಡತೆ, ನಡಾವಳಿ, ಐಶ್ವರ್ಯ, ಜಗತ್ತಿನ, ಕೀರ್ತಿ, ಲಾಭ, ಖ್ಯಾತಿ

ಜನರ ಪ್ರೇಮ, ದಾನಧರ್ಮ ಮಾಡಬೇಕಾದ ಗುಣಗಳು, ಜನರ ಅನುಕೂಲತೆ ತನ್ನ ಮೇಲೆ ಎಲ್ಲ ಜನರ ನಂಬಿಗೆ ಉಂಟಾಗುವದು,-ಇವು ಎಲ್ಲ ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯ ಫಲದ ಪ್ರಾಪ್ತಿಯೆಂದು ತಿಳಿದು ನಿಷ್ಕಪಟದಿಂದ ನಾವು ಪುಣ್ಯ ಸಂಚಯ ಮಾಡಿಕೊಂಡು ಈ ಮನುಷ್ಯ ಪರ್ಯಾದ ಸಾರ್ಥಕ ಮಾಡಿಕೊಳ್ಳುವುದೇ ಸಾರ್ಥಕವೆಂದರಿದು ಕಪಟವನ್ನು ತೊರೆಯಬೇಕು.

೪ ಉತ್ತಮ ಸತ್ಯ ಧರ್ಮಃ

ಸತ್ಯಾಂ ಬ್ರೂಹ್ಯನುಯಾಯಿ:— ಯಾವತ್ತು ಸತ್ಯ ವಚನವನ್ನೇ ಆಡಬೇಕು.

ಜಿನವಯನಮೇವ ಭಾಸದಿತಂ ಪಾಲೇದುಂ ಅಸವಕ ಮಾಣೋವಿ ।
ವವಹಾರೇಣವಿ ಅಲಿಪಂ ಣವದತಿ ಜೋ ಸಚ್ಚವಾಯೀಸೋ ॥

ಯಾವನು ಪ್ರತಿನಿತ್ಯವೂ ಶಾಸ್ತ್ರಾನುಸಾರವಾಗಿಯೇ ವಚನವನ್ನು ಆಡುವನೋ ಮತ್ತು ಒಂದು ವೇಳೆ ಅವನು ತೀರ್ವ ಕರ್ಮದ ಉದಯದಿಂದ ಒಂದಾನ್ನೊಂದು ವೇಳೆ ಕರ್ಮದ ಉದಯದಿಂದ, ಅನಿವಾರ್ಯಪ್ರಸಂಗದಲ್ಲಿ ಕೂಡಾ ಅಸತ್ಯ ವಚನವನ್ನಾಡುವದಿಲ್ಲವೋ ವ್ಯವಹಾರದಲ್ಲಿ ಹಾಸ್ಯ ಕೌತುಕಭಲ ಮೊದಲಾದ ನಿಮಿತ್ಯದಲ್ಲಿಯೂ ಕೂಡಾ ಯಳ್ಳಷ್ಟು ಮಾತಾಡುವದಿಲ್ಲವೋ ಇಂಥ ಮನ್ಯುಷ್ಯನೇ ಸತ್ಯವಾದಿ ಎಂದೆನಿಸಿಕೊಳ್ಳುತ್ತಾನೆ.

ಸತ್ಯದ ಪರಿಭಾಷೆಯು:— ಸತ್ಯೈಹಿತಂಯತ್ ಕಥ್ಯತೆ ತತ್ ಸತ್ಯಂ. ಅರ್ಥಾತ್ ಯಾವ ವಚನವು ಸ್ವಪರ ಹಿತಕ್ಕೋಸ್ಕರ ಮಾತಾಡುವದಾಗಿದೆಯೋ ಅದಕ್ಕೆ ಸತ್ಯವೆಂದು ಹೇಳುತ್ತಾರೆ. ವಸ್ತುಗಳ ಸ್ವರೂಪವು ಹ್ಯಾಗೆ ಆದೆಯೋ ಹಾಗೆ ನ್ಯೂನ್ಯಾಧಿಕರಹಿತವಾಗಿ ಮಾತನಾಡುವದಾಗಿದೆಯೋ ಹಾಗೆ ಅಥವಾ ವಸ್ತುಸ್ಥಿತಿಯು ಇದ್ದಂತೆ ಮಾತಾಡುವದು ಇದೂ ಸತ್ಯವೆಂಬುದಾಗಿದೆ. ಉತ್ತಮ ಶಬ್ದವು ಗುಣವಾಚಕವಾಗಿದೆ. ಇದನ್ನು ಅನ್ಯ ಅಥವಾ ತನ್ನ ಸ್ವಂತ ಬುದ್ಧಿಯಿಂದ ಅದರಲ್ಲಿ ಶಬ್ದಗಳನ್ನು ಕೂಡಿಸಿ ಬರೆಯಬಾರದು. ಅಥವಾ ಮಾತಾಡಬಾರದು. ಇದ್ದಂತೆಯೇ ಮಾತಾಡಬೇಕು. ಇದೇ ಸತ್ಯವಾಗಿದೆ. ನ್ಯೂನ್ಯಾಧಿಕವು ಯಾವಾಗ್ಗೆ ಆಗುತ್ತದೆಂದರೆ ಯಾವಾಗ ತನ್ನ ವಿಷಯ ಕಷಾಯಗಳಿಂದ ಕೂಡಿದ ರಾಗದ್ವೇಷಾದಿ ಪರಣತಿ ಯಿಂತಾಗಿ ಮಾತಾಡುವಾಗ ಪರಣತಿಯು ಕಷಾಯಗಳ ಪುಷ್ಟಿಯನ್ನು ಮಾಡುವದು.

ಆವಾಗ್ಗೆ ನ್ಯೂನ್ಯಾಧಿಕವಾಗಿ ಸಂಭವಿಸುವದು. ಇಂಥ ರಾಗದ್ವೇಷಾದಿಗಳ ಪುಷ್ಟಿಯನ್ನು ಮಾಡುವ ವಿಚಾರವು ಮನದಲ್ಲಿ ಬಂದಾಗ ಕರ್ಮಗಳ ಆಸ್ರವ ವಾಗುವದು, ಅದರಿಂದ ಪುನಃ ಸಂಸಾರದಲ್ಲಿ ಪರಿಭ್ರಮಣೆಯನ್ನು ಮಾಡು ವದು, ಸತ್ಯವಂತನಾದ ಸಮ್ಯಕ್‌ಜ್ಞಾನಿ ಜೀವನಿಗೆ ಇದು ಯೋಗ್ಯವೆನಿಸೀತೆ ? ಇಲ್ಲ. ಇದಕ್ಕೋಸ್ಕರ ಜ್ಞಾನಿ ಜನರು ಅಸತ್ಯವನ್ನು ದೂರದಿಂದಲೇ ತೊರೆ ಯುತ್ತಾರೆ. ಅಸತ್ಯದಂಥ ಸಂಸಾರದಲ್ಲಿ ಮತ್ತೊಂದು ಬೇರೆಯಾವದೂ ಪಾಪವಿಲ್ಲ. ಅಸತ್ಯನಾಡುವ ಮಾನವನಿಗೆ ಯಾವಾಗಲೂ ಅನೇಕ ದುಃಖ-ಸಂಕಟಗಳ ಬಾಧೆಗಳನ್ನು ಸಹಿಸಬೇಕಾಗುತ್ತದೆ.

ಜಗತ್ತಿನಲ್ಲಿ ಯಾವನ ವಚನದ ಪ್ರತೀತಿ (ಪ್ರಭಾವವು) ಆಗುವದಿಲ್ಲವೋ ಆತನಿಗೆ ಜನರು ನಿಂದ್ಯ ಮತ್ತು ಕೀಳನೆಂದು ತಿಳಿದು ಅವನನ್ನು ಅತ್ಯಂತ ಹೀನ ದೃಷ್ಟಿಯಿಂದ ನೋಡುತ್ತಾರೆ. ಮತ್ತು ಅವನ ವಿಶ್ವಾಸವೂ ಕೂಡಾ ಉಳಿಯುವದಿಲ್ಲ. ಅವನ ವ್ಯವಹಾರಗಳೂ ಕೂಡಾ ನೆಟ್ಟಗೆ ನಡೆಯುವದಿಲ್ಲ. ಮತ್ತು ಅವನ ಜೀವನವೂ ಸಾಗುವದು ದುರ್ಧರವಾಗುತ್ತದೆ. ಅನೇಕ ವಿಘ್ನ ಗಳು ಉಪಸ್ಥಿತವಾಗಿದ್ದರೂ ಕೂಡ ಅವನ ಮೇಲೆ ಯಾರೂ ದಯಾ (ಸಹಾಯ) ಮಾಡುವದಿಲ್ಲ.

ಯಾಕಂದರೆ ಒಬ್ಬ ನೀತಿಕಾರರು ಹೇಳುತ್ತಾರೆ.

ಮಿಥ್ಯಾಭಾಷೀ ಸಾಂಚ ಹೂಂ ಕಹೆ ನ ಕೋಯ ||
ಬಾಂಡ ಪುಕಾರೆ ಪೀರ ವಶ ಮಿಸ ಸಮುಝೆ ಸಬಕೋಯ ||

ಸೊಳ್ಳು ಮಾತನಾಡಲು ಒಂದು ಕಾರಣವಿದೆ. ಯಾವನು ಭಯದಿಂದ ಮಾತಾಡುತ್ತಾನೆ. ಯಾವನು ಲೋಭದಿಂದ ಮಾತಾಡುತ್ತಾನೆ. ಯಾವನು ಮೋಹದಿಂದ, ಯಾವನು ವೈರದಿಂದ, ಯಾವನು ಕ್ರೋಧದಿಂದ, ಯಾವನು ಮಾನವಶದಿಂದ, ಯಾವನು ಲಜ್ಜೆಯಿಂದ, ಯಾವನು ಕೌತುಕದಿಂದ, ಯಾವ ಕೇವಲ ಮನೋರಂಜನೆಯ ಸಲುವಾಗಿ ಮಾತನಾಡುತ್ತಾನೆ. ಈ ರೀತಿ ಅನೇಕ ಕಾರಣಗಳಿಂದ ಲೋಕದಲ್ಲಿ ಸುಳ್ಳು ಮಾತಾಡುವವರಲ್ಲಿ ಆಗ್ಗೆ ಸ್ವಲ್ಪ ಆನಂದ ವೆನಿಸುತ್ತದೆ. ಆದರೆ ಆ ನಂತರ ಅಸತ್ಯವು ಪ್ರಕಟವಾದ ನಂತರ ಜಗತ್ತಿನಲ್ಲಿ ಅವನ ಅವಿಶ್ವಾಸವು ಹುಟ್ಟಿ ಅದರಿಂದ ಅವನಿಗೆ ಅತ್ಯಂತ ತ್ರಾಸವಾಗುತ್ತದೆ. (ಅನೇಕ ಕಷ್ಟನಷ್ಟಗಳನ್ನು) ಅನುಭವಿಸಬೇಕಾಗುತ್ತದೆ.

ಆದ್ದರಿಂದ ಯಾರಿಗೆ ಸತ್ಯ ಅಥವಾ ನಿಜವಾದ ತನ್ನ ಆತ್ಮ ಸ್ವರೂಪವನು, ಪ್ರಾಪ್ತ ಮಾಡಿಕೊಂಡು ನಿತ್ಯವೂ ಸುಖದಲ್ಲಿ ಇರಬೇಕೆಂದು ಭಾವಿಸಿ ಇರುವವರು ಅಸತ್ಯವು ಸಂಸಾರಕ್ಕೆ ಕಾರಣವೆಂದು ತಿಳಿದು ಸತ್ಯವ್ಯವಹಾರವನು, ಸತತವಾಗಿ ಮಾಡಬೇಕೆಂದು ಶ್ರೀ ವೀತರಾಗ ಜಿನೇಶ್ವರರ ಆಜ್ಞೆಯು ಇರುತ್ತದೆ.

ಪ್ರಶ್ನೆ:— ಸತ್ಯ ಇದು ಏನು ಅದೆ ?

ಉತ್ತರ:— ಸಚ್ಚಂಬು ಭಗವಂ, ಸತ್ಯವೇ ಭಗವಂತನ ಸ್ವರೂಪವದೆ. ವೈದಿಕ ಧರ್ಮದಲ್ಲಿ ಸತ್ಯನಾರಾಯಣನ ಈ ಶಬ್ದವು ಪ್ರಚಲಿತವಾಗಿದೆ. (ಪಾಡಿಕೆಯಲ್ಲಿವೆ) ಇವರ ಅರ್ಥವೂ ಸತ್ಯನಾರಾಯಣ ಎಂದರೆ ಈ ರೀತಿ ಪ್ರತಿ ಒಂದು ಧರ್ಮಗಳಲ್ಲಿ ಸತ್ಯದ ಮಹತ್ವವನ್ನು ಮಾನಿಸದಿದ್ದರೆ (ಅಥವಾ ಜಗತ್ತಿನಲ್ಲಿ ಸತ್ಯವಂತರು ಇರದಿದ್ದರೆ) ಈ ಜಗತ್ತಿನಲ್ಲಿ ಸೂರ್ಯನೂ ಉಗವುವಾಗುತ್ತಿದ್ದಿಲ್ಲ. ದಿನಾಲು ಸೂರ್ಯನು ಉದಯವಾಗುತ್ತಿದ್ದಾನೆ. ಇದರ ಸಂಬಿಕೆಯು ಎಲ್ಲರಲ್ಲಿಯೂ ಎಳ್ಳಷ್ಟೂ ಸಂಶಯವಿಲ್ಲದೆ ಇರುತ್ತದೆ. ಇದೇ ರೀತಿ ನಾವೂ ಕೂಡಾ ಜಗತ್ತಿನಲ್ಲಿ ಸತ್ಯವೂ ಇವೆ ಎಂದು ನಿಜವಾಗಿ ನಮ್ಮೊಳಗೂ ನಿಃಶಂಕವಾಗಿ ಇರಬೇಕು. ಶಾಸ್ತ್ರಕಾರರು ಸತ್ಯದ ಮಹತ್ವವನ್ನು ತೋರಿಸುತ್ತ ಹೇಳುವದೇನಂದರೆ– " ಸಚ್ಚಂ ಲೋಗಮ್ಮಿ ಸಾರಭೂಯಂ " ಲೋಕದಲ್ಲಿ ಸತ್ಯವೇ ಒಂದು ಸಾರಭೂತವಾದ ವಸ್ತುವಿದೆ. ಉಳಿದುದೆಲ್ಲ ನಿಸ್ಸಾರವಿದೆ. ಈ ಸತ್ಯವ್ರತದ ಆಧಾರ, ವಾಣಿಯಲ್ಲಿ ಕಠೋರತೆಯ ಅಂಶವೂ ಆಗುವದಿಲ್ಲ. ಮತ್ತು ನಿಷ್ಠೂರತೆಯೂ ಆಗುವದಿಲ್ಲ. ಮತ್ತು ಅಂಥ ನಿಷ್ಠೂರ, ಕಠೋರ ವಚನವಾಣಿಗೆ ಸತ್ಯವೆಂದು ಹೇಳುವದೂ ಇಲ್ಲ. ಅಂಥ ವಾಣಿಗೆ ಮಹತ್ವವೂ ಇಲ್ಲ. ಸತ್ಯ ವಚನದಲ್ಲಿ ಅಪ್ರೀಯ ವಿರುವದಿಲ್ಲ. ಈ ವಾಣಿಯಲ್ಲಿ ಭಾಷೆಯ ಅಸತ್ಯ ಆಡಂಬರವೂ ಇರುವದಿಲ್ಲ. ಅತಿ ಮಧುರ ಸಾತ್ವಿಕ ಮತ್ತು ನಮ್ರತೆ ಯುಕ್ತವಾಗಿರುವದು. ಮತ್ತು ಹಿತ ಮಿತ ಪ್ರಿಯಕರವಾಗಿರುವದು.

ಸತ್ಯದ ಆರಾಧಕನ ವಿಚಾರ ಮತ್ತು ವಾಣಿ ಅಷ್ಟೇ ಸತ್ಯವಿರುವದಿಲ್ಲ; ಆದರೆ ಅವನ ಆಚರಣವೂ ಕೂಡ ಸಮ್ಯಕ್ತ್ವರೂಪವಾಗಿರುತ್ತದೆ. ಇಸಲಾವು ಶಬ್ದದಲ್ಲಿ ಹೇಳಿದರೆ.—

ಅರ್ಥಾತ್ ಸತ್ಯವನ್ನು ತನ್ನ ಜೀವನದಲ್ಲಿ ಇಳಿಸುವದೇ ಸತ್ಯದ ಸರ್ವೋಚ್ಛವಾದ ಸನ್ಮಾನ ಮಾಡುವದಾಗಿದೆ.

ಸತ್ಯವು ಆತ್ಮನ ನಿಜ ಸ್ವಭಾವವಾಗಿದೆ, ಅದನ್ನು ತನ್ನಲ್ಲಿ ಉದಿಸುವದಾಗಿದೆ. ಆದ್ದರಿಂದ ಅದನ್ನೇ ನಾವು ಆರಾಧಿಸುವದು ಶ್ರೇಯಸ್ಕರವಾಗಿದೆ. ಇದರಿಂದ ಭಿನ್ನವಾದ ಜಗತ್ತಿನಲ್ಲಿ ಕಾಣುವವೆಲ್ಲ ಪರವಸ್ತುಗಳಾಗಿವೆ. ಆತ್ಮನಿಂದ ಭಿನ್ನವಾಗಿ ಕಾಣುವ ಪರವಸ್ತುಗಳೆಲ್ಲ ನನ್ನವೆಂದು ಮೂಢಮತಿಗಳು ತಿಳಿದು ಸಂಸಾರದಲ್ಲಿ ಅನೇಕ ಯೋನಿ ಮತ್ತು ಪರ್ಯಾಯಗಳನ್ನು ಧರಿಸಿ ಪರಿಬ್ರಮಣ ಮಾಡುತ್ತಿದ್ದಾರೆ.

ಜಗತ್ತಿನ ಧರ್ಮಗಳೆಲ್ಲ ಭಿನ್ನ ಭಿನ್ನವಾಗಿದ್ದರೂ ಕೂಡ ಸತ್ಯವು ಎಲ್ಲರಲ್ಲಿಯೂ ಒಂದೇ ಯಾಗಿದೆ. ಅದೇ ಮಾನವ ನಿಜಾತ್ಮ ಸ್ವಭಾವವೆಂದು ತಿಳಿಯುಬೇಕು. ಎಲ್ಲ ಜೀವಗಳ ಸಂಬಂಧವಾಗಿ ಕಲ್ಯಾಣದ ಭಾವನೆಯನ್ನು ಹೃದಯುದಲ್ಲಿ ಇಡುವದು ಮಾನಸಿಕ ಸತ್ಯವಿದೆ, ವಿವೇಕ ಪೂರ್ವವಾಗಿ ಮಾತನಾಡುವದಿದು ವಚನಿಕ ಸತ್ಯವಿದೆ, ಮತ್ತೊಬ್ಬರ ಅಹಿತವಾಗದಂತೆ ಪ್ರವೃತ್ತಿಯನಿಡುವದು ಇದು ಕಾಯಿಕ ಸತ್ಯವಾಗಿದೆ. ಈ ಸತ್ಯದ ವ್ಯಾಖ್ಯೆಯನ್ನು ಎಲ್ಲ ಧರ್ಮದವರು ಸಮಾನ ರೂಪವಾಗಿ ಸ್ವೀಕರಿಸಿದ್ದಾರೆ.

ಸತ್ಯವ್ರತದ ಆರಾಧನೆಯನ್ನು ಮಾಡುವದಕ್ಕೋಸ್ಕರ ಆದಷ್ಟು ತಕ್ಕಮಟ್ಟಿಗೆ ಅಭ್ಯಾಸಿಸುವ ಕ್ರಮವನ್ನು ಅರಿಯಬೇಕು ಹಿತಮಿತ, ಸತ್ಯ, ಮತ್ತು ತಥ್ಯ ವಚನದ ಹೊರತಾಗಿ ಬೇರೆ ನುಡಿಯುವ ಅಭ್ಯಾಸ ಅಥವಾ ಹೀನ ಪದ್ಧತಿಯನ್ನು ಮರೆಯಬೇಕು. ಮಾತನಾಡುದ ಮೊದಲು ತಾನು ವಿಚಾರಸಬೇಕೇ ನಂದರೆ ಮಾತನಾಡಿದ್ದರಿಂದ ಈ ಮಾತಿನ ಪ್ರಭಾವ ಕೇಳುವವನ ಮೇಲೆ ಯಾವ ರೀತಿ ಬಿದ್ದೀತು ? ಇದನ್ನು ವಿಚಾರಿಸಿ ತಾನು ಮಾತನಾಡಬೇಕು. ಇನ್ನೊಬ್ಬರಿಗೆ ಮಾತ, ಅಥವಾ ವಚನ ಕೊಡುವ ಮೊದಲೇ ವಿಚಾರಿಸಿ ಕೊಡಬೇಕು.

ಮಹಾತ್ಮಾ ಮೋಹನಲಾಲ ಗಾಂಧಿಯವರು ಕೂಡ 'ಮಂಗಳ ಪ್ರಭಾತದಲ್ಲಿ' ಬರೆದಿದ್ದದ್ದೇನಂದರೆ, ಸತ್ಯದ ಆರಾಧನೆಯಲ್ಲಿ ತಪಶ್ಚರ್ಯಯನ್ನು ಮಾಡಲಾಗುತ್ತದೆ. ಆನಂತರ ಕಷ್ಟ ಸಹಿಸಬೇಕಾಗುತ್ತದೆ. ಮತ್ತು ಎಷ್ಟೋ ಸಾರೆ ಮೃತ್ಯುವಿಗೆ ತುತ್ತಾಗಬೇಕಾಗುತ್ತದೆ. ಸತ್ಯದಲ್ಲಿ ಇಂಥ ದೊಡ್ಡ ದೊಡ್ಡ

ಪ್ರಸಂಗಾದಿಗಳು ಬಂದು ಒದಗಿದಾಗಲೂ ಆನಂದದಿಂದ ಜಯಿಸಬೇಕಾಗುತ್ತದೆ. ಅದರಲ್ಲಿ ಸ್ವಾರ್ಥದ ಹೆಸರು ತಿಳಮಾತ್ರವೂ ಇರುವದಿಲ್ಲ. ಈ ಸತ್ಯರೂಪ ಪರಮೇಶ್ವರನು ಬಂದು ಮಹಾಚಿಂತಾಮಣಿ ರತ್ನದೋಪಾದಿಯಲ್ಲಿದೆ. ಇದರ ಪ್ರಾಪ್ತಿಯಿಂದ ಈ ಜೀವನು ತೇಜಸ್ವಿ ಮತ್ತು ಸೌರ್ಯಯುಕ್ತನಾಗುತ್ತಾನೆ.

ಸತ್ಯವು ಮಾನವನ ಹೃದಯದಲ್ಲಿರುತ್ತದೆ. ಅಥವಾ ಹೃದಯದಲ್ಲಿ ಈಶ್ವರನ ನಿರ್ವಿಕಾರ ಮೂರ್ತಿಯರೂಪವಾಗಿ ನೆಲಿಸಿದೆ, ಸತ್ಯದ ಮರ್ಮವು ಮಾನವನಿಗೆ ತಿಳಿದುಬಂದರೆ, ಆ ಮಾನವನಿಗೆ ಈಶ್ವರನ ಎಲ್ಲ ಸಂಪತ್ತಿ ಮತ್ತು ಆ ಈಶ್ವರನ ಎಲ್ಲ ಗುಣಗಳು ಎಲ್ಲ ಸಂಪತ್ತಿಗಳೂ ಆ ಮಾನವನಿಗೆ ದೊರೆಕೊಳ್ಳುವ ಭಾಗ್ಯವು ದೊರೆಯಿತೆಂದು ಅರಿಯಬೇಕು. ಸತ್ಯದ ಪ್ರಾಪ್ತಿಯ ವಿನಃ ಮಾನವನು ಕುರುಡನೆಂದು ಭಾವಿಸಬೇಕು. ಸತ್ಯವೆ ಮಾನವನ ಹೃದಯಚಕ್ಷುವಿದೆ.

ಮನುಷ್ಯನು ಯಾವಾಗ ಸತ್ಯದ ಅನುಕರಣ ಮಾಡುವವನಾಗುತ್ತಾನೆಯೋ ಆವಾಗ ಅವನ ದೃಷ್ಟಿಯಲ್ಲಿ ಸತತವಾಗಿ ಸತ್ಯವೇ ಇರುವದಾಗುತ್ತದೆ. ಅವನಿಗೆ ಒಂದುವೇಳೆ ಈ ರೀತಿಯಾಗಿ ಭಾಸವಾಗಹತ್ತುತ್ತದೇನಂದರೆ ಸತ್ಯದ ವಿನಃ ಸಂಸಾರದಲ್ಲಿ ಸುಖದ ಮಾರ್ಗವೇ ಇಲ್ಲ. ಬೇಕಾದಂಥ ಪ್ರಸಂಗ ಅಥವಾ ಸಂಕಟ ತನಗೆ ಬಂದೊದಗಿದರೂ ಸತ್ಯದಿಂದ ಅವನು ದೂರಾಗುವದಿಲ್ಲ. ಆದರೂ ಆ ವೇಳೆಯಲ್ಲಿಯೂ, ತಾನು ಗಾಬರಿಯಾಗುವದಿಲ್ಲ. ಈ ರೀತಿ ಪ್ರತಿಯೊಂದು ಮಾನವ ಪ್ರಾಣಿಯಲ್ಲಿ ವಿಶ್ವಾಸವಿರಬೇಕು: ಅಂದರೆ ಸತ್ಯವು ನನಗೆ ಅಧಿಕ ತರವಾಗಿ ಶುದ್ಧ ನಿತ್ಯನಿರಂಜನ ಪರಮಾತ್ಮ ಈಶ್ವರನ ಕಡೆಗೆ ನನ್ನನ್ನು ಎಳೆದೊಯ್ಯ ಹತ್ತಿದೆಯೋ ಏನೋ?— ಎಂದು.

ಪ್ರತಿಯೊಬ್ಬ ಮಾನವನು ಇಚ್ಛಿಸುವದೇನಂದರೆ ಸತ್ಯವು ನನ್ನ ಪಕ್ಷದಲ್ಲಿರಬೇಕು. ಅಂದರೆ ಇಂಥ ಭಾವನೆಯುಳ್ಳವರು ಬಹಳ ಜಗತ್ತಿನಲ್ಲಿ ದುರ್ಲಭವಾಗಿರುತ್ತಾರೆ. ಯಾರು ನಿಜವಾದ ಭಾವನೆಯಿಂದ ಸತ್ಯವನ್ನು ಇಚ್ಛಿಸುವರೋ ಅವರ ಪಕ್ಷದಲ್ಲಿಯೇ ಸತ್ಯವಿರುತ್ತದೆ. ಹೇಳುವ ತಾತ್ಪರ್ಯವೇನಂದರೆ ಜಗತ್ತಿನ ದೃಷ್ಟಿಯಿಂದ ಎಲ್ಲರೂ ಸತ್ಯತೆಯ ಪ್ರಾಪ್ತಿಯನ್ನು ಇಚ್ಛಿಸುವವರುಂಟು. ಆದರೆ ಸತ್ಯಭಾವನೆಯಿಂದ, ಸತ್ಯಹೃದಯದಿಂದ ಸತ್ಯದ ಆರಾಧನೆ ಮಾಡುವವರು ಯಾರೂ ಇಲ್ಲ ಮತ್ತು ಇಚೆಯನ್ನು ಮಾಡುವವರೂ ದುರ್ಲಭವಾಗಿದ್ದಾರೆ.

ಸಾಕ್ರೇಟಿಸ್‌ನ ಶಿಷ್ಯನಾದ ಪ್ಲೇಟೋನು ಹೇಳುವದೇನಂದರೆ

"ಕೇವಲ ಸತ್ಯವಚನ ಕೇಳುವದು ಸತ್ಯಮಾತನಾಡುವದರಿಂದ ಅಧಿಕ ಅಧಿಕವಾಗಿ ಆನಂದ ಬರುವದಿಲ್ಲ. ಸತ್ಯದ ಆಚಣ ಮಾಡಿದ ಹೊರ ತಾಗಿ ಸತ್ಯದ ಪ್ರತೀಯು ಆಗಲು ಶಕ್ಯವಿಲ್ಲ."

ಸಾವಿರಾರು ಸೂರ್ಯರು ಕೂಡಿ ಪ್ರಕಾಶ ಮಾಡಿದರೂ ಕೂಡ ಸತ್ಯದ ಮುಖಾಬಲತೆ ಮಾಡುವದು ಅಶಕ್ಯವಿದೆ ಶಕ್ಯವಿಲ್ಲ, ಅರ್ಥಾತ್ ಸತ್ಯತೆಯ ಸಮಾನತೆಯನ್ನು ಮಾಡಲು ಅಶಕ್ಯವಿದೆ, ಮತ್ತು ಲಕ್ಷಾವಧಿ ಚಂದ್ರತಾರೆ ಗಳು ಕೂಡ ಅಸತ್ಯದ ಅಂಧಕಾರವನ್ನು ದೂರ ಮಾಡಲು ಅಶಕ್ಯವಾಗಿರು ತ್ತವೆ. ಸತ್ಯದ ಪ್ರಕಾಶದ ಮುಂದೆ, ಸಾವಿರಾರು ಸೂರ್ಯರ ಮತ್ತು ಅಸತ್ಯದ ಅಂಧಕಾರದ ಮುಂದೆ ಲಕ್ಷಾವಧಿ ರಾವುಗಳ ಶಕ್ತಿಯು ಕುಂಠಿತವಾಗುತ್ತದೆ. ಸದ್ಗುಣವೆಂಬ ಸತ್ಯದಮುಂದೆ ಅಸತ್ಯದೋಷದ ವಿಷಯಗಳು ಅಸತ್ಯವಾ ಗುತ್ತವೆ. ಸತ್ಯದ ಆರಾಧಕನು ಪ್ರತಿದಿವಸ ಸಮೃದ್ಧವುಳ್ಳವನಾಗುತ್ತ ಹೋಗು ತ್ತಾನೆ. ಮತ್ತು ತನ್ನ ನ್ಯೂನ್ಯತೆಯನ್ನು ಸ್ವತಃ ತಿಳಿದು ಅವನ್ನು ಸುಧಾ ರಣೆ ಮಾಡಿಕೊಳ್ಳುತ್ತ ಮುಂದುವರಿಸುವನು. ಇದರ ಸಲುವಾಗಿ ಸತ್ಯವೇ ಸ್ವಯಂಭುಯೆಂಬ ಹೆಸರಿನ ಆತ್ಮಾ ಪರಮಾತ್ಮಾ ಸರ್ವದರ್ಶಿ ಸರ್ವಶಕ್ತಿ ಮಾನ ಜ್ಞಾತಾ ದೃಷ್ಟಾ ಮತ್ತು ಸರ್ವವೀರ್ಯಗುಪ್ತ, ಸರ್ವ ವೀರ್ಯ ಕಕ್ಷಿ ಎಂದು ಹೇಳಿದ್ದಾರೆ. ಇಂದ್ರಿಯ ಜನ್ಯ ಸುಖ ಮತ್ತು ಸಾಮರ್ಥಜನ್ಯವಾದ ಸತ್ಯ ಈ ಎರಡರ ಜೊತೆಗೆ ಸತ್ಯಧ ಹನ್ನೆರಡನೆ ಸತ್ಯರೂಪಿ ಚಂದ್ರಮುನಿ ದ್ದಾನೆ. ಅಂದರೆ ಅಸತ್ಯವುಳ್ಳ ಸುಖಕ್ಕೆ ವಿರೋಧ ಇದ್ದಾನೆ. ಸತ್ಯದ ಪಾಲನೆ ಯಿಂದ ಎರಡು ಪ್ರಕಾರದ ಸಾಮರ್ಥ್ಯ ಉಂಟಾಗುತ್ತದೆ. ಮೊದಲು ಅವನ ವಾಣಿಯಲ್ಲಿ ತೇಜಬರುತ್ತದೆ. ಎಲ್ಲಕಡೆಗೆ ಅವನ ಪ್ರಭಾವವು ಬೀಳುತ್ತದೆ. ಇನ್ನೊಂದು ಏನಂದರೆ ನಿಜವಾದ ವಸ್ತುಸ್ವರೂಪವು ತನ್ನಿಂದ ತಾಗಿಯೇ ಅವನಲ್ಲಿ ತಿಳಿದುಬರಹತ್ತುತ್ತದೆ.

ಅಸತ್ಯದಲ್ಲಿ ಸ್ವಲ್ಪವೂ ಬಲವಿರುವದಿಲ್ಲ

ನಿರ್ಬಲದ ಆಶ್ರಯ ಮಾಡುವದರಿಂದ ಮನುಷ್ಯನಲ್ಲಿ ನಿರ್ಭಯತೆಯು ಹ್ಯಾಗೆ ಉಂಟಾಗುತ್ತದೆ? ಸತ್ಯವು ಬಲವಾನವಾಗಿದೆ. ಅದರ ಆಶ್ರಯ ಮಾಡುವದರಿಂದ ನಿರ್ಭಯತೆ ಉಂಟಾಗುತ್ತದೆ. ಈ ಸತ್ಯವು ತೋಫಿನ

ಗುಂಡಿನಂತೆ ಜಗತ್ತಿನಲ್ಲಿ ಅದ್ಭುತ ಶಕ್ತಿಯುಳ್ಳದ್ದಾಗಿರುತ್ತದೆ. ಇದರ ಮುಂದೆ ಅಸತ್ಯವು ಕಂಪಾಯಮಾನವಾಗಿ ಓಡುತ್ತದೆ, ಸತ್ಯದ ಶಕ್ತಿಯ ಬಲಾಢ್ಯವನ್ನು ಯಾರೂ ಯಾರಿಂದಲೂ ತಡೆಯಲು ಶಕ್ಯವಿಲ್ಲ. ಸತ್ಯದ ಪಾಲನೆಯನ್ನು ಪ್ರಕೃತಿಯೂ ಮಾಡುತ್ತದೆ, ಸಮಯಕ್ಕೆ ಅನುಕೂಲವಾಗಿ ಋತುಗಳ ಪರಿವರ್ತನೆ ಯಾಗುವದು. ಸಮುದ್ರದಲ್ಲಿ ಕ್ಷಾರವು (ಉಪ್ಪಿನ ಗುಣ) ಬರುವದು. ಸೂರ್ಯ ಚಂದ್ರರ ಉದಯ ಮತ್ತು ಅಸ್ತವಾಗುವದು, ಗ್ರಹಗಳು ನಿಯಮದಿಂದ ಪರಿಭ್ರಮಣೆ ಮಾಡುವದು ಇವೆಲ್ಲವು ಸ್ವಾಭಾವಿಕವಾಗಿ ಸತ್ಯದ ಪರಿಚಾಯಕವಾಗಿರುತ್ತವೆ. ಒಂದು ಸಮಯದಲ್ಲಿ ಪ್ರಕೃತಿ ಈ ರೀತಿ ಸತ್ಯದ ಅನುಕರಣ ಮಾಡದಿದ್ದರೆ ಎಷ್ಟು ಅವ್ಯವಸ್ಥೆ ಆದೀತು?

ಗ್ರೀಷ್ಮ ಋತುವಿನ ಸಮಯದಲ್ಲಿ ವರ್ಷಾಋತು ಬಂದರೆ ಎಷ್ಟು ಗಡಿಬಿಡಿ ಆದೀತು? ಇದೇ ರೀತಿ ಮನುಷ್ಯನು ಕೂಡ ಒಂದು ವೇಳೆ ಸತ್ಯವನ್ನು ಉಲ್ಲಂಘಿಸಿದರೆ ಬಹಳೇ ಅವ್ಯವಸ್ಥೆ ಉಂಟಾದೀತು! ಇಂದಿನ ನಮ್ಮ ಭಾರತದಲ್ಲಿ ಈಗ ಎಲ್ಲ ಸಾಮಾಜಿಕ ಅವ್ಯವಸ್ಥೆಯು ಅಸತ್ಯಮಯ ಕಾರಣವನ್ನೇ ಆಚರಣೆಯಲ್ಲಿ ಹಿಡಿದುಕೊಂಡಿದೆ; ಸಾಮಾಜಿಕ ಅಥವಾ ರಾಷ್ಟ್ರೀಯ, ಆರ್ಥಿಕ ಅಥವಾ ಕೌಟುಂಬಿಕ, ಈ ಯಾವದೇ ಪ್ರಕಾರದ ವ್ಯವಸ್ಥೆಯನ್ನು ಇಡುವ ಸಲುವಾಗಿ–ಸತ್ಯದ ಅತ್ಯಂತ ಅವಶ್ಯಕತೆಯು ಇರುತ್ತದೆ; ಯಾಕಂದರೆ, ಸತ್ಯವೇ ಎಲ್ಲಕ್ಕೂ ರಾಜ್ಯಮಾರ್ಗವಿದೆ. ಸತ್ಯಗುಣದ ಸ್ವಭಾವವು ಮನುಷ್ಯನಲ್ಲಿಯೇ ಇರುತ್ತದೆ. ಮತ್ತು ಸತ್ಯ ಆಚರಣೆ ಮಾಡುವದಕ್ಕೂ ವ್ಯವಸ್ಥೆಯ ಅವಶ್ಯಕತೆಯು ಇರುವದಿಲ್ಲ. ಒಂದು ವೇಳೆ ಮನುಷ್ಯನು ಕೆಟ್ಟ ಸಂಗತಿಯಲ್ಲಿ ಬಿದ್ದು ಅಸತ್ಯದ ವಾತಾವರಣದಲ್ಲಿ ಇದ್ದರೂ ಅಸತ್ಯದಾಚರಣೆ ಮಾಡದಿದ್ದರೆ ಸತ್ಯದ ಆಚರಣವು ಅವನಿಗೆ ಸ್ವಾಭಾವಿಕವಾಗಿಯೇ ಬಿದ್ದುಬಿಡುತ್ತದೆ, ಪ್ರಾರಂಭದಿಂದಲೇ ಸತ್ಯದ ಅಭ್ಯಾಸದಲ್ಲಿದ್ದು ಸತ್ಯವನ್ನು ಪಾಲನೆ ಮಾಡುತ್ತಿದ್ದರೆ, ಎಂದೂ ಅವನಿಗೆ ಅಸತ್ಯದ ವಿಚಾರವೇ ಮನಸ್ಸಿನಲ್ಲಿ ಬರುವದಿಲ್ಲ. ಚಿಕ್ಕಬಾಲಕರಿಗೆ ಸತ್ಯದ ಉಪದೇಶ ಕೊಡುವ ಅವಶ್ಯತೆ ಇಲ್ಲ, ಆ ಮಕ್ಕಳಿಗೆ ಏನು ಅವಶ್ಯತೆ ಇದೆಯೆಂದರೆ ಆ ಮಕ್ಕಳ ಎದುರಿಗೆ ಸತ್ಯಮಯ ಆಚಣೆ ಅಥವಾ ಅದರ ಮಾರ್ಗದರ್ಶಕತೆಯನ್ನು ಅವರ ಮುಂದೆ ತಂದು ನಿಲ್ಲಿಸುವ ಅವಶ್ಯಕತೆ ಇರುತ್ತದೆ. ಒಂದುವೇಳೆ ಸತ್ಯದ ಆಚಣೆಯನ್ನು ನಡೆಸಿದ್ದರೆ ಅವನು ಅವಶ್ಯವಾಗಿ ಸತ್ಯವಕ್ತಾ ಇದ್ದಾನೆಂದು ತಿಳಿಯಬೇಕು. ಈ ರೀತಿ

ಸತ್ಯ ಮನುಷ್ಯನಲ್ಲಿ ಸ್ವಾಭಾವಿಕವಾಗಿ ಗುಣಗಳಿದ್ದರೆ ಅವನು ತನ್ನಲ್ಲಿದ್ದ ಅಸತ್ಯ ಗುಣಗಳನ್ನು ಹೊರಗೆ ದಬ್ಬಿಬಿಡುತ್ತಾನೆ.

ಸತ್ಯಕೋಟಿಯಲ್ಲಿ ಇದ್ದ ಮಾನವನು ಒಂದು ವೇಳೆ ಸೂಕ್ಷ್ಮಜೀವದ ಹಿಂಸೆಯನ್ನು ಮತ್ತು ಭಕ್ಷಾಭಕ್ಷಾದಿಗಳ ಆಚಾರ ವಿಚಾರ ಕಲ್ಪನೆ ಮಾಡದಿದ್ದರೂ ಅಥವಾ ತೊರೆಯದಿದ್ದರೂ ಸಾಧಾರಣ ರೂಪದಿಂದ ಜಗತ್ತಿನ ವ್ಯವಹಾರ ದೃಷ್ಟಿಯಿಂದ ಅಸತ್ಯವನ್ನು ತೊರೆದು ಸತ್ಯವನ್ನು ಗ್ರಹಿಸುತ್ತಾನೆ.

ಎಷ್ಟೋ ಜನರು ಹೀಗೆ ಹೇಳುತ್ತಾರೆ. ಏನಂದರೆ ವ್ಯವಹಾರದಲ್ಲಿ ಅಸತ್ಯ ಮಾತಾಡಿದ ಹೊರತು ವ್ಯವಹಾರ ನಡೆಯುವದೇ ಇಲ್ಲ. ಆದರೆ ಹೀಗೆ ಅವರು ಹೇಳುವದು ಅಸತ್ಯವಿದೆ. ಲೋಕ ವ್ಯವಹಾರವೂ ಕೂಡ ಸತ್ಯದ ಹೊರ್ತಾಗಿ ನಡೆಯುವದೇ ಇಲ್ಲ. ಒಂದು ವೇಳೆ ಮನುಷ್ಯನು ಒಂದು ಕ್ಷಣ ಸತ್ಯ ಮಾತಾಡುವದನ್ನು ಬಿಟ್ಟರೆ ಅವನ ವ್ಯವಹಾರ ನಡೆಯುವದು ಕೂಡ ಅತ್ಯಂತ ಕಠಿಣವಾದೀತು! ಬೋರಿಬಂದರ ಸ್ಟೇಶನ್‌ದಿಂದ ಇಳಿದು ಯಾವನೊಬ್ಬ ಮನುಷ್ಯನಿಗೆ ಕಾಳಬಾದೇವಿಗೆ ಹೋಗುವ ದಾರಿಯನ್ನು ಕೇಳಿದರೆ ಆ ಮನುಷ್ಯನಿಗೆ ನಿಜವಾದ ಸತ್ಯದಾರಿಯನ್ನು ತೋರಿಸಬೇಕಾದೀತು! ತೋರಿಸದಿದ್ದರೆ ಅನರ್ಥವಾದೀತು! ಸಂಸಾರದಲ್ಲಿ ನಡೆಯುವ ವ್ಯವಹಾರವೂ ಕೂಡ ನಡೆಯುವದು ಅಶಕ್ಯವಾದೀತು.

ಒಬ್ಬ ದಾರಿಕಾರನಿಗೆ ಬಾಯಾರಿಗೆ ಯಾಗಿದ್ದರೆ ಅವನು ದಾರಿಯಲ್ಲಿ ಅಡ್ಡಾಡುವ ಮನುಷ್ಯನಿಗೆ ನೀರು ಇರುವಸ್ಥಾನ ಅಥವಾ ಬಾವಿ ಎಲ್ಲಿಯಿದೆಯೆಂದು ಕೇಳುವಾಗ ಆ ಮನುಷ್ಯನಿಗೆ ನಿಜವಾಗಿ ಬಾವಿ ಇಂಥ ಒಂದು ಸ್ಥಾನದಲ್ಲಿದೆ, ಮತ್ತು ಬಾವಿಗೆ ಹೋಗುವದಾರಿ ಇತ್ತ ಕಡೆ ಇದೆಯೆಂದು ನಿಜವಾಗಿ ಹೇಳಬೇಕಾದೀತು ! ಹೇಳದಿದ್ದರೆ, ಅನ್ಯ ದಾರಿ ತೋರಿಸಿದರೆ ಲೋಕ ವ್ಯವಹಾರ ಕೆಟ್ಟು ಹೋದೀತು ! ಅಂಗಡಿಕಾರನ ಅಂಗಡಿಯಲ್ಲಿಯ ವಸ್ತುಗಳನ್ನು ಕೊಂಡುಕೊಳ್ಳಲಿಕ್ಕೆ ಹೊರಟವನಿಗೆ ನಿಜವಾಗಿ ಇಲ್ಲಿದೆ ದಾರಿ ಎಂದು ತೋರಿಸಬೇಕಾಗುವದು ! ಅಥವಾ ಅಂಗಡಿಯ ಹೆಸರನ್ನು ಕೂಡ ಹೇಳಬೇಕಾದೀತು ! ಆಳು ಮನುಷ್ಯನಿಗೆ ಎಲ್ಲಾದರೂ ಕಳಿಸಬೇಕಾದರೆ ಅವನಿಗೆ ಇಂಥ ಸ್ಥಾನಕ್ಕೆ ಹೋಗೆಂದು ನಿಜವಾದ ಸ್ಥಾನವನ್ನು ತೋರಿಸಿ ಕೊಡಬೇಕಾದೀತು ! ಅಥವಾ ನಿಜವಾದ ಒಂದು ಚೀಟಿಯನ್ನು ಬರೆದು ಕೊಡಬೇಕಾದೀತು ! ಈ ರೀತಿ ಅವನಿಗೆ ತೋರಿಸದಿದ್ದರೆ ಕೆಲಸ ಸಾಗುವದೇ ಕಠಿಣವಾದೀತು !

ಇದೇ ರೀತಿ ಬ್ಯಾಂಕಿನಲ್ಲಿ ರೂಪಾಯಿಗಳನ್ನು ಬೇಡುವ ಸಮಯದಲ್ಲೂ ಚೆಕ್ಕಿನ ಮೇಲೆ ಸಹಿ ಮಾಡಬೇಕಾದೀತು! ಅದರ ಹೊರತಾಗಿ ದುಡ್ಡು ಸಿಕ್ಕದೇ ಗೋಳಾಡಬೇಕಾದೀತು! ಇದರಿಂದ ನಿಮಗೆ ತಿಳಿದು ಬಂದಿರಬಹುದು, ಸಂಸಾರಿ ಜನರ ಜೀವನವು ಅಸತ್ಯದಿಂದ ಸಾಗಿಲ್ಲ; ಸತ್ಯದವಿನಃ ನಡೆಯಲು ಶಕ್ಯವಿಲ್ಲ! ಜನರು ಬಲಾತ್ಕಾರ ಹೇಳುತ್ತಾರೇನಂದರೆ, ವ್ಯವಹಾರದಲ್ಲಿ ಅಸತ್ಯ ಮಾತನಾಡಿದ ಹೊರತಾಗಿ, ನಡೆಯಲು ಶಕ್ಯವಿಲ್ಲ, ಎಂದು ಜೀವನಕ್ಕಾಗಿ ಪ್ರತಿಯೊಂದು ಸಮಯದಲ್ಲಿ ಅಥವಾ ಕ್ಷಣಕ್ಷಣಕ್ಕೆ ಸತ್ಯ ಮಾತಾಡುವ ಅವಶ್ಯ ಕತೆ ಬೀಳುತ್ತದೆ; ಇದರಿಂದ ನಮಗೆ ಏನು ಗೊತ್ತಾಗುವದೆಂದರೆ, ಸತ್ಯವು ಸ್ವಾಭಾವಿಕವಾಗಿದೆ, ಅಸತ್ಯವು, ಅಸ್ವಾಭಾವಿಕವಾಗಿದೆ, ಎಂದು ಸಿದ್ಧವಾಗುತ್ತದೆ. ಆದ್ದರಿಂದ ಅಸತ್ಯವನ್ನು ಮಹಾರೋಗವೆಂದು ತಿಳಿದು ದೂರದಿಂದಲೇ ತೊರೆಯಬೇಕೆಂಬ ಅಭಿಪ್ರಾಯವು. ಇದಕ್ಕಾಗಿ ಶ್ರೀವೀತರಾಗ ಪ್ರಭು ಭಗವಾನ ಮಹಾವೀರರು ಮೃಷಾವಾದವನ್ನು ತೊರೆಯಬೇಕೆಂದು ಉಪದೇಶಗೇಯ್ದಿದ್ದಾರೆ.

ಮಾನವನು ವ್ಯವಹಾರದಲ್ಲಿ ಬರುವ ಅಸತ್ಯಗಳನ್ನೆಲ್ಲ ತೊರೆಯಬೇಕು. ಮಿಥ್ಯಾ ಉಪದೇಶ ಮಾಡುವದು, ರಹಸ್ಯಾಭ್ಯಾಖ್ಯಾನ, ಕೂಟ ಲೇಖನ ಕ್ರಿಯೆ, ನ್ಯಾಸಾಪಹಾರ, ಸಾಕಾರ ಮಂತ್ರಭೇದ, ಸತ್ಯವೆಂದು ಹೇಳಿ ಇನ್ನೊಬರಿಗೆ ಕೆಟ್ಟ ಮಾರ್ಗದ ಕಡೆಗೆ ಪ್ರವೃತ್ತಿ ಮಾಡಿಸುವದು, ಇನ್ನೊಬ್ಬ ಯಾರಾದರೂ ಗಂಡ ಹೆಂಡರು ಸರಿಯಾಗಿ ಪ್ರಪಂಚ ಮಾಡುತ್ತಿದ್ದರೆ, ಅಥವಾ ನೀತಿ ಮಾರ್ಗದಿಂದ ನಡಿಯುತ್ತಿದ್ದರೆ, ಅವರನ್ನು ಅಗಲಿಸಿ ಅಸತ್ಯ ಮಾರ್ಗಕ್ಕೆ ಹಚ್ಚುವದು ಮೊದಲಾದ ಇವೆಲ್ಲ ಅಸತ್ಯ ಮಾರ್ಗಗಳು ಮನುಷ್ಯನನ್ನು ಪಾಪಗತಿಗೆ ಕಳಿಸಿ ಕೊಡುವವೆಂದು ತಿಳಿದು ಅಸತ್ಯ ಮಾರ್ಗವನ್ನು ತೊರೆಯಬೇಕು.

ಸತ್ಯ ವಚನವು ಮಾನವನಿಗೆ ಒಂದು ಮಹಾನ ಚಿಂತಾಮಣಿ ರತ್ನವಿದ್ದಂತೆ! ಇದನ್ನು ಬಿಟ್ಟರೆ ಮಾನವನಿಗೆ ಸುಖ ಶಾಂತಿಯನ್ನು ಪ್ರಾಪ್ತ ಮಾಡಿಕೊಡುವ ಇನ್ನೊಂದು ಯಾವದೇ ವಸ್ತುವೂ ಇಲ್ಲ. ಸಂಸಾರದಲ್ಲಿ ಸುಳ್ಳು ಮಾತನಾಡುವವರಿಗೆ ಅನೇಕ ಪ್ರಕಾರದ ತೊಂದರೆ ಬರುತ್ತದೆ. ಆದರೂ ಕೂಡಾ ಮನುಷ್ಯನು ಅಸತ್ಯವನ್ನು ತೊರೆಯಬೇಕು. ನೋಡಿರಿ, ಶ್ರೀ. ರಾಮಚಂದ್ರನ ವಚನಗಳು ಮತ್ತು ಮಹಾರಾಜ ಧರ್ಮರಾಜ ಮೊದಲಾದವರ ವಚನದ ಪ್ರಭಾವವು ಶತ್ರು ಪಕ್ಷಗಳಲ್ಲಿಯೂ ಕೂಡ ಬೀಳುತ್ತಿತ್ತು. ಸತ್ಯದಲ್ಲಿ

ಹರಿಶ್ಚಂದ್ರರಾಜನ ಕಥೆಯು ಜಗತ್ತಿನಲ್ಲಿ ಪ್ರಸಿದ್ಧವಿದೆ. ಮಹಾರಾಜ ದಶರಥ. ವಸುದೇವ ಮುಂತಾದವರು ತಮ್ಮ ವಚನದಿಂದ ಜಗತ್ತಿನಲ್ಲಿ ಪ್ರಸಿದ್ಧ ರಾಗಿದ್ದಾರೆ.

ಜಗತ್ತಿನಲ್ಲಿ ಸತ್ಯದ ಪ್ರತೀತಿಯು ಯಾವತ್ತು ಪ್ರಚಲಿತವಾಗಿದೆ; ಕೊಟ್ಯಾವಧಿ ರೂಪಾಯಿಗಳ ಕೊಡುತಗೊಳ್ಳುವ ವವ್ಯಹಾರಗಳು ಕಾಗದ ಪತ್ರಗಳಿಂದ ಆಗುತ್ತವೆ; ಸತ್ಯದ ಪ್ರತೀತಿ ಎಷ್ಟರ ವರೆಗೆ ಚನ್ನಾಗಿ ನಡೆಯು ವದೋ ಅಷ್ಟರ ವರೆಗೆ ವ್ಯವಹಾರಗಳು ಸುರಕ್ಷಿತವಾಗಿ ನಡೆಯುತ್ತವೆ. ಯಾವಾಗ ಅಸತ್ಯವು ಸ್ವಲ್ಪವಾದರೂ ಕಂಡು ಬರುವದೋ ಆಗ ಅವರ ವ್ಯವ ಹಾರಗಳಲ್ಲಿ ತೊಂದರೆ ಬರುತ್ತದೆ. ಆಗ ಅಸತ್ಯ ವ್ಯವಹಾರ ಮಾಡುವ ಮನು ಷ್ಯನ ಮೇಲೆ ಯಾರೂ ನಂಬಿಕೆ ಇಡುವದಿಲ್ಲ. ಜನರ ವಿಶ್ವಾಸ ಹೊರಟು ಹೋಗುತ್ತದೆ; ಮತ್ತು ಅಸತ್ಯ ವ್ಯವಹಾರ ನಿಂತು ಬಿಡುತ್ತದೆ. ಲೋಕದಲ್ಲಿ ಅಪಕೀರ್ತಿ ಯಾಗುತ್ತದೆ.

ನೋಡಿರಿ, ರಾಜಾವಸು ತನ್ನ ಹಟವಾದದಿಂದ, ಅಜದ ಅರ್ಥ ಮೂರು ವರ್ಷದ ಭತ್ತ ಎಂದು ಆಗುತ್ತದೆ ಎಂದರೂ ಪರ್ವತನ ಪಕ್ಷದಿಂದ, ಅಜದ ಅರ್ಥವನ್ನು ' ಕುರಿ ' ಯೆಂದು ಮಾಡಿ ಹೋಮದಲ್ಲಿ ಕುರಿಗಳನ್ನು ಹಾಕ ಬೇಕೆಂದು ಅರ್ಥಮಾಡಿದ್ದರಿಂದ ಅವನು ಯಾವ ಸಿಂಹಾಸನದ ಮೇಲೆ ಕುಳಿ ತಿದ್ದನೋ ಅದೇ ವೇಳೆಯಲ್ಲಿ ಅವನ ಸಿಂಹಾಸನವು ಭೂಮಿಯಲ್ಲಿ ಇಳಿದು ಪುನಃ ತೀವ್ರ ಅಸತ್ಯ ವಚನ ಆಡಿದ ಪಾಪೋದಯದಿಂದ ಅವನು ನರಕಕ್ಕೆ ಹೋದನು.

ಇದರಂತೆಯೇ ಸತ್ಯಘೋಷನೆಂದ ಬನಜಾರಿಯು ತನ್ನ ಅಸತ್ಯ ವಚನವನ್ನು ಸತ್ಯ ರೂಪದಲ್ಲಿ ಪ್ರಗಟ ಮಾಡುವದಕ್ಕೋಸ್ಕರ ಜಗತ್ತಿ ನಲ್ಲಿ ಅವನು ದೊಡ್ಡ ಖ್ಯಾತಿಯನ್ನು ಪ್ರಗಟ ಮಾಡಿಕೊಂಡಿದ್ದನು. ಕೆಲವು ದಿವಸ ಹೀಗೆಯೇ ಕಳೆದು ಹೋಗಲು ಒಂದಾನೊಂದು ದಿವಸ ಯಾವನೊಬ್ಬ ಬನಜಾರಿಯು ತನ್ನ ವ್ಯಾಪಾರ ಸಲುವಾಗಿ ಬೇರೆ ದ್ವೀಪಾಂತರಕ್ಕೆ ಹೋಗಬೇ ಕೆಂದು ಅವನು ಎಷ್ಟೋ ಹಣವನ್ನು ಜೊತೆಗೆ ತಕ್ಕೊಂಡು ಹೋಗುತ್ತಿರುವಾಗ, ಮನಸಿನಲ್ಲಿ ವಿಚಾರಿಸಿದ್ದೇನಂದರೆ ದ್ವೀಪಾಂತರದಿಂದ ಹಣ ಗಳಿಸಿಕೊಂಡು ಬರುವ ವರೆಗೆ ಅಥವಾ ದಾರಿಯಲ್ಲಿ ಏನಾದರೊಂದು ತೊಂದರೆಯಿಂದ ಅಥವಾ

ಅಶುಭ ಕರ್ಮದ ಉದಯದಿಂದ ಏನಾದರೂ ವ್ಯಾಪಾರದಲ್ಲಿ ಅಸ್ತವ್ಯಸ್ತವಾದರೆ ಪ್ರಸಂಗೋಪಾತ ಕೆಲವು ರತ್ನಗಳನ್ನು ಯಾರಾದರೊಬ್ಬ ವಿಶ್ವಾಸಿಕ ವರ್ತಕ ನಿದ್ದರೆ ಆತನ ಹತ್ತರ ಕೆಲವು ರತ್ನಗಳನ್ನು ಇಟ್ಟು ಹೋಗಬೇಕೆಂದು ನಿಶ್ಚಯ ಸಿದನು, ಅವನ ಹತ್ತರ ಐದು ರತ್ನಗಳಿದ್ದವು.

ಒಂದು ರಾಜಧಾನಿಯಲ್ಲಿ ಅರ್ಥಾತ್ ಒಂದು ಪಟ್ಟಣದಲ್ಲಿ ಒಬ್ಬ ಸತ್ಯ ಘೋಷನೆಂಬ ಪುರೋಹಿತನು ಲೋಕದ ಜನರಲ್ಲಿ ಪ್ರಸಿದ್ಧನಿರುತ್ತಾನೆಂದು ಲೋಕದ ಜನಗಳ ಮುಖವಾರ್ತೆಯಿಂದ ಆ ಬನಚಾರಿಯು ಸತ್ಯಘೋಷ ನೆಂಬ ರಾಜವರ್ತಕನ ಹತ್ತರ ಆ ಐದು ರತ್ನಗಳನ್ನು ಇಟ್ಟು ಹೇಳಿದ್ದೇನೆಂದರೆ, ನನಗೆ ಅವಶ್ಯಕವಾದಾಗ ನನ್ನಮೇಲೆ ಪ್ರಸಂಗಬಂದಾಗ ನಾನು ಅಲ್ಲಿಂದ ಬೇಡಿ ಸಿದಾಗ ಅವುಗಳನ್ನು ತಾವು ನನಗೆ ಕಳುಹಿಸಬೇಕೆಂದು ಹೇಳಿ ಆ ರತ್ನಗಳನ್ನು ಅವನ ಹತ್ತರ ಇಟ್ಟು ಮುಂದೆ ದ್ವೀಪಾಂತರಕ್ಕೆ ಪ್ರಯಾಣ ಇಟ್ಟನು. ಹಲವು ದಿವಸಗಳಲ್ಲಿ ಆ ಬನಚಾರಿ ದ್ವೀಪಾಂತರದಿಂದ ಬೇಕಾದಷ್ಟು ಹಣವನ್ನು ಸಂಪಾದಿಸಿಕೊಂಡು ಜಹಾಜದಲ್ಲಿ ಹೇರಿಕೊಂಡು ಸಮುದ್ರದಿಂದ ತಿರುಗಿ ತನ್ನ ದೇಶಕ್ಕೆ ಮರಳಿ ಬರುವ ಸಮಯದಲ್ಲಿ "ಕರ್ಮೋ ಗಹನೋ ಗತಿ" ಎಂಬ ಉಕ್ತಿಯಂತೆ ಅವನ ಅಶುಭ ಕರ್ಮದ ಉದಯದಿಂದ ದೊಡ್ಡ ಬಿರು ಗಾಳಿ ಬಂದು ಬೀಸಲು ಸಮುದ್ರದ ಮಧ್ಯ ನೀರೊಳಗಿಂದ ಬರುತ್ತಿದ್ದ ಜಹಾಜ (ಬೋಟು) ಬಿರುಗಾಳಿ ಅಪಾಯದಿಂದ ಮುಳುಗಿ ಹೋಗಿ ಈ ಬನಚಾರಿ ಒಬ್ಬನೇ ಪೂರ್ವ ಸಂಚಿತ ಪುಣ್ಯಯೋಗದಂದ ಉಳಿದು ಸಮುದ್ರದ ಧಡಕ್ಕೆ ಬಂದು ದುಃಖಿತನಾಗಿ ಆಧಾರವಿಲ್ಲದೇ ಬಹಳೇ ಚಿಂತಾಗ್ರಸ್ತನಾಗಿ ಪುನಃ ವಿಚಾರ ಬಂದು ತಾನು ಮೊದಲು ವ್ಯಾಪಾರಕ್ಕೆ ಬರುವ ವೇಳೆಯಲ್ಲಿ ಆ ಸತ್ಯ ಘೋಷನೆಂಬ ವರ್ತಕನ ಬಳಿಯಲ್ಲಿ ಇಟ್ಟಿದ್ದ ಐದು ರತ್ನಗಳನ್ನು ತರಿಸಿಕೊಂಡು ಅವುಗಳ ಸಹಾಯದಿಂದ ಏನಾದರೂ ವ್ಯಾಪಾರ ಮಾಡಿಕೊಂಡು ತನ್ನ ದೇಶಕ್ಕೆ ಮರಳ ಹೋಗಬೇಕೆಂದು ಮನಸ್ಸಿನಲ್ಲಿ ವಿಚಾರಿಸಿ ಆ ರಾಜವರ್ತಕ ನಾದ ಸತ್ಯಘೋಷನಿಗೆ ಚೀಟಿಯನ್ನು ಕಳುಹಿಸಿದನೇನಂದರೆ ನನ್ನ ಅವಸ್ಥೆಯು ಅತ್ಯಂತ ದುರವಸ್ಥೆಯಲ್ಲಿದೆ. ನಾನು ಸಂಪಾದಿಸಿಕೊಂಡು ಬರುವ ದ್ರವ್ಯ ಅಥವಾ ನನ್ನ ಎಲ್ಲ ಸಂಪತ್ತು ಸಮುದ್ರದಲ್ಲಿ ಬಿರುಗಾಳಿಗೆ ಸಿಕ್ಕ ಹಡಗಿನೊಡನೆ ಮುಳುಗಿ ಹೋಗಿರುತ್ತದೆ. ನನ್ನ ಹತ್ತರ ಏನೂ ಉಳಿದಿಲ್ಲ. ಆದರೆ ಈ ಸಮಯದಲ್ಲಿ ನಾನು ನಿನ್ನ ಬಳಿಯಲ್ಲಿ ಇಟ್ಟಿರ್ದ ಐದು ರತ್ನಗಳನ್ನು ಕಳುಹಿಸ

ಬೇಕೆಂದು ಪ್ರಾರ್ಥನೆ. ಈ ರೀತಿ ಪತ್ರವನ್ನು ಬರದು ಕಳುಹಿಸಿದನು. ಆ ಓಲೆಯು ಆ ರಾಜವರ್ತಕನಾದ ಸತ್ಯಘೋಷನ ಕೈಯಲ್ಲಿ ಬಿದ್ದು ಅವನು ಆ ಓಲೆಯನ್ನು ನೋಡಿ ಮನಸಿನೊಳಗೆ ಅಂದದ್ದು ಅದೇನಂದರೆ ಇವನಿಗೆ ಈ ರತ್ನಗಳನ್ನು ಕೊಡಬಾರದು. ಇವನು ಹುಚ್ಚನೆಂದು ಲೋಕದ ಜನಗಳಲ್ಲಿ ಪ್ರಸಿದ್ಧಿ ಮಾಡಬೇಕು. ಈ ಸತ್ಯಘೋಷನು ವರ್ತಕನ ರತ್ನಗಳನ್ನು ಇಟ್ಟುಕೊಂಡಿದ್ದಾನೆಂಬ ಅಪವಾದವು ನನ್ನ ಮೇಲೆ ಬಾರದು. ಈ ರೀತಿ ವಿಚಾರಿಸಿ ಅವನು ಲೋಕದ ಜನಗಳಲ್ಲಿ ಪ್ರಚಾರ ಮಾಡಿದ್ದೆನಂದರೆ ಒಬ್ಬ ಹುಚ್ಚ ನಾಲ್ಕೆಂಟು ದಿವಸಗಳಲ್ಲಿ ಬರುವವನಿದ್ದಾನೆ. ಮತ್ತು ನನ್ನ ಹತ್ತರವೇ ಬಂದು ನನ್ನ ರತ್ನಗಳನ್ನು ಕೊಡು ಎಂದು ಕಾಡುವನು. ಇದೊಂದು ಮುಂದಿನ ಭವಿಷ್ಯವಿದೆ ಎಂದು ಪ್ರಸಿದ್ಧ ಮಾಡಲು ಲೋಕದ ಜನಗಳಿಗೆ ಇವನಲ್ಲಿ ನಂಬಿಗೆ ಇದ್ದುದರಿಂದ ಅವರಿಗೆ ಈ ಸತ್ಯಘೋಷನು ಹೇಳಿದ ಮಾತಿನಲ್ಲಿ ನಂಬಿಗೆ ಉಂಟಾಯಿತು. ಅದರಂತೆಯೇ ಕೆಲವು ದವಸ ಕಳೆದು ಹೋದ ಮೇಲೆ ಬನಚಾರಿಯು ಹುಚ್ಚು ಹಿಡಿದಂತೆ ಅಸ್ತವ್ಯಸ್ತವಾಗಿ ದರಿದ್ರನ ಅವಸ್ಥೆಯಲ್ಲಿ ಆ ಸತ್ಯಘೋಷನ ಬಳಿಗೆ ಬಂದು ನಾನು ಇಟ್ಟಿದ್ದ ರತ್ನಗಳನ್ನು ಕೊಡು ಎಂದು ಹೇಳಿದಾಗ ಆ ಸತ್ಯಘೋಷನು ಅಂದದ್ದು:— ನೀನು ಯಾವಾಗ ನನ್ನ ಹತ್ತರ ರತ್ನಗಳನ್ನು ಮಡಿಗಿ ಹೋಗಿದ್ದೆ ? ಯಾರಿಗೂ ಗೊತ್ತಿಲ್ಲದೆ ಹ್ಯಾಗೆ ಹೋಗಿದ್ದೆ ? ಎಂದು ಅವನನ್ನು ಹೀಯಾಳಿಸಿ ಬೈದು ದೂಡಿ ಬಿಟ್ಟನು. ಅದರಂತೆ ಲೋಕ ಜನಗಳೂ ಕೂಡ ಅವನನ್ನು ದೂಡ ಹತ್ತಿದರು. ಆದರೆ ಈ ಬಣಜಾರಿಯು ನನ್ನ ರತ್ನಗಳನ್ನು ತಕ್ಕೊಂಡಿದ್ದಾನೆ. ನಾನು ಇವನ ಹತ್ತರ ಇಟ್ಟಿದ್ದೇನೆ, ಕೊಡಲೊಲ್ಲನು ಎಂದು ರಾತ್ರಿ ಹಗಲು ಅವನ್ನೇ ತನ್ನ ಮುಖದಿಂದ ಒರಲುತ್ತಿದ್ದನು. ಅದೇ ಮಾತನ್ನು ಹೇಳಿ ಬಡಬಡಿಸುತ್ತಿದ್ದನು. ಒಂದಾನೊಂದು ದಿವಸ ರಾತ್ರಿಯಲ್ಲಿ ಊರ ಹೊರಗಿನ ಗಿಡವನ್ನೇರಿ ಇದೇ ಮಾತನ್ನು ಬಡಬಡಿಸುತ್ತಿರುವಾಗ ಆ ಊರ ದೊರೆಯ ರಾಣಿಯು ಮನಸ್ಸಿನಲ್ಲಿ ಸಂಶಯ ಉತ್ಪನ್ನವಾಯಿತು. ಅಂದರೆ ಈ ಬನಚಾರಿಯು ಹುಚ್ಚನಾಗಿದ್ದರೆ ಮತ್ತೆ ಏನಾದರೂ ಮುಖದಿಂದ ಬಡಬಡಿಸ ಬೇಕಾಗಿತ್ತು. ನನ್ನ ಐದು ರತ್ನಗಳನ್ನು ಸತ್ಯಘೋಷನು ಇಟ್ಟುಕೊಂಡಿದ್ದಾನೆ, ಇಟ್ಟುಕೊಂಡಿದ್ದಾನೆಂದು ಹ್ಯಾಗೆ ಬಡಬಡಿಸುತ್ತಾನೆ ? ಈ ರೀತಿ ಅವಳಲ್ಲಿ ಸಂಶಯ ಹುಟ್ಟಿ ರಾಜನ ಬಳಿಗೆ ಹೋಗಿ ರಾಣಿಯು ಅಂದದ್ದು– ಎಲೇ ದೊರೆಗಳೇ ನನ್ನದೊಂದು ಮಾತನ್ನು ದಯವಿಟ್ಟು ಗಮನಪೂರ್ವಕವಾಗಿ

ಲಾಲಿಸಿರಿ. ಆ ಬನಚಾರಿಯು ಹುಚ್ಚನಾದರೆ ಒಂದೇ ಮಾತನ್ನು ಹ್ಯಾಗೆ ಪ್ರತಿ ದಿವಸ ಬಡಬಡಿಸುವನ್ನು ಇದರ ಬಗ್ಗೆ ನನಗೆ ಸಂಶಯ ಬರುತ್ತದೆ. ಆದರೆ ಆ ಸತ್ಯಘೋಷನನ್ನು ನನ್ನ ಜೊತೆಗೆ ಜೂಜ ಆಡಲಿಕ್ಕೆ ಒಂದು ತಾಸು ಬರುವ ಅಪ್ಪಣೆ ಕೊಟ್ಟರೆ ಆ ಗುಟ್ಟನ್ನು ಅವನಿಂದ ಹೊರಗೆ ತೆಗೆಯುವೆನು, ಎಂದು ಈ ರೀತಿಯಾಗಿ ಹೇಳುವ ರಾಣಿಯ ಮಾತನ್ನು ಕೇಳಿ ದೊರೆಯು ಹಾಗಿದ್ದರೆ ಸರಿ, ಎಂದು ಆಕೆಗೆ ಅವನ ಜೊತೆಗೆ ಜೂಜ ಆಡಲಿಕ್ಕೆ ಅಪ್ಪಣೆ ಕೊಡಲು ಆಕೆಯು ಆ ಸತ್ಯಘೋಷನನ್ನು ಕೂಡಿಸಿಕೊಂಡು ಅಂದದ್ದು:— ಈ ದಿವಸ ನನಗೆ ನಿನ್ನ ಜೊತೆಯಲ್ಲಿ ಸ್ವಲ್ಪ ವೇಳೆ ಜೂಜು ಆಡುವ ಭಾವನೆಯಾಗಿದೆ. ಆದರೆ ನೀನು ಒಪ್ಪು ಎಂದು ರಾಣಿಯು ಹೇಳಲು ಸತ್ಯಘೋಷನಂದದ್ದು:- ನಾನು ನಿನ್ನ ಜೊತೆಗೆ ಜೂಜು ಆಡಲು ಪ್ರಾರಂಭಿಸಿದರೆ ಒಂದು ದೊಡ್ಡ ಅಪವಾದ ಬಂದೀತು ! ಎಂದು ಹೇಳಲು ರಾಣಿ ಅಂದದ್ದು:-- ನೀನು ಹೆದರಬೇಡ ನಮ್ಮ ರಾಜರ ಅಪ್ಪಣೆ ನನಗೆ ಸಿಕ್ಕಿದೆ. ಸತ್ಯಘೋಷನು ಒಪ್ಪಿ ಜೂಜು ಆಡಲು ಪ್ರಾರಂಭಿಸಿದನು. ಆಟದ ವೇಳೆಯಲ್ಲಿ ರಾಣಿಯು ಎರಡು ಆಟಗಳ ಡಾವಿನಲ್ಲಿ ಆ ಸತ್ಯಘೋಷನ ಕಡೆಗೆ ಬಿಟ್ಟು, ಆಮೇಲೆ ಅವಳು ಒಂದೊಂದು ಡಾವಿನಲ್ಲಿ ಅವನ ಯಜ್ಞೋಪವೀತ, ಮತ್ತೊಂದು ಡಾವಿನೊಳಗೆ ಉಂಗುರ ಹೀಗೆ ಕ್ರಮದಿಂದ ಗೆಲ್ಲುತ್ತ ಗೆಲ್ಲುತ್ತ ರಾಣಿಯು ಅದೇ ವೇಳೆಯಲ್ಲಿ ಒಬ್ಬ ದಾಸಿಗೆ ಸೂಚನೆ ಮಾಡಿ ಹೇಳಿದ್ದೇನಂದರೆ:-ಈ ಸತ್ಯಘೋಷನ ಮನೆಗೆ ಹೋಗಿ ಅವನ ಹೆಂಡತಿಗೆ ಈ ರೀತಿ ಹೇಳು--ನಿನ್ನ ಗಂಡನು ರಾಣಿಯವರ ಜೊತೆಗೆ ಜೂಜು ಆಡಿ ಎಲ್ಲ ಮೈಮೇಲಿದ್ದ ವಸ್ತು-ಒಡವೆಗಳನ್ನು ಕಳೆದಿದ್ದಾನೆ ಆದ್ದರಿಂದ ಅವುಗಳನ್ನು ಬಿಡಿಸಿಕೊಂಡು ತರುವಗೋಸ್ಕರ ಆ ಒಳಗಿನ ತಿಜೋರಿಯಲ್ಲಿ ಐದು ರತ್ನಗಳನ್ನು ಆ ವರ್ತಕನು ಇಟ್ಟಿದಾನಂತೆ ಆದರೆ ಅವುಗಳನ್ನು ತೆದದು ಕೊಡಬೇಕೆಂದು ನಿಮಗೆ ಹೇಳಿದ್ದಾನೆ. ಅವುಗಳನ್ನು ತೆಗೆದು ಕೊಡಿರಿ. ಈ ರೀತಿ ಹೇಳಲು ಆಕೆಯು ತೆಗೆದು ಕೊಡಲಿಲ್ಲ. ಪುನಃ ದಾಸಿಯು ಮರಳಿ ಹೋಗಿ ಕೊಡಲಿಲ್ಲವೆಂದು ಹೇಳಲು ರಾಣಿಯು ಗೆದ್ದುಕೊಂಡಿದ್ದ ಯಜ್ಞೋಪವೀತ ಮತ್ತು ಉಂಗುರವನ್ನು ದಾಸಿಯ ಕೈಯಲ್ಲಿ ಗಂಡನು ಕಳುಹಿಸಿಕೊಟ್ಟಿದ್ದಾನೆಂದು ನಂಬುಗೆ ಹುಟ್ಟುವ ಸಲುವಾಗಿ ದಾಸಿಯನ್ನು ಕಳಿಸಿದಳು. ಆಮೇಲೆ ಆ ಸತ್ಯಘೋಷನ ಮಡದಿಯು ಆ ಯಜ್ಞೋಪವೀತದ ನಂಬಿಗೆ

ಯಿಂದ ಮತ್ತು ಉಂಗುರದ ಸಂಬಿಗೆಯಿಂದ ಆ ತಿಜೋರಿಯಲ್ಲಿ ಇಟ್ಟಿದ್ದ ಐದೂ ರತ್ನಗಳನ್ನೂ ತೆಗೆದುಕೊಟ್ಟಳು. ಅವನ್ನು ದಾಸಿಯು ತಂದು ರಣಿಯ ಕೈಯಲ್ಲಿ ಕೊಟ್ಟಳು.

ಆ ಮೇಲೆ ರಾಣಿಯು ಐದು ರತ್ನಗಳು ಕೈಗೆ ಸಿಕ್ಕಿದ ಮೇಲೆ ಆಕೆ ಸತ್ಯ ಘೋಷನಿಗೆ ಅಂದದ್ದು ಇನ್ನು ನನಗೆ ಆಟ ಸಾಕು. ಯಾಕಂದರೆ ಈಗ ಹೊತ್ತು ಹೆಚ್ಚಾಯಿತು. ಎಂದು ಆಟವನ್ನು ಸಾಕು ಮಾಡಿ, ಸತ್ಯಘೋಷನು ಹೋದ ನಂತರ ರಾಣಿಯು ಆ ರತ್ನವನ್ನು ತೆಗೆದುಕೊಂಡು ಹೋಗಿ ರಾಜನ ಕೈಯಲ್ಲಿ ಕೊಟ್ಟಳು. ರಾಜನು ರಾಣಿಯ ಬುದ್ಧಿ–ಚಾತುರ್ಯವನ್ನು ನೋಡಿ ಮನಸ್ಸಿಗೆ ಆನಂದವಾದ ನಂತರ ಸತ್ಯಘೋಷನನ್ನು ಕರೆಸಿ ಕೇಳಿದನೆಂದರೆ ಈ ಐದು ರತ್ನಗಳು ಎಲ್ಲಿಂದ ತಂದೆ ಹೇಳು ಇವು ನಿನ್ನ ಮನೆಯಿಂದ ನಿನ್ನ ಹೆಂಡತಿ ಕಡೆಯಿಂದ ದಾಸಿ ತಂದಿದ್ದಾಳೆ. ಈ ಐದು ರತ್ನಗಳು ಆ ವರ್ತಕನವು. ಹೌದೋ ಅಲ್ಲವೋ ? ಈ ಮಾತಿಗೆ ಸತ್ಯಘೋಷನಂದದ್ದು:– ವರ್ತಕನ ರತ್ನ ನಾನು ತಗೊಂಡೇ ಇಲ್ಲ. ಇವು ನನ್ನ ನಿಜ ರತ್ನಗಳಿರುತ್ತವೆ. ಹೀಗೆ ಅಂದ ಮೇಲೆ, ನನ್ನ ರತ್ನಗಳನ್ನು ಸತ್ಯಘೋಷನು ತಗೊಂಡಿದ್ದಾನೆ. ನಾನು ಅವ ನಲ್ಲಿ ಇಟ್ಟಿದ್ದೇನೆಂದು ರಾತ್ರಿ–ಹಗಲು ಕೂಗುತ್ತಿರುವ ವರ್ತಕನನ್ನು ಕರೆಸಿ, ಒಂದು ಪಾತ್ರೆಯಲ್ಲಿ ಅನೇಕ ರತ್ನಗಳನ್ನು ತಂದು ಅದರೊಳಗೆ ಆ ಐದು ರತ್ನ ಗಳನ್ನು ಕೂಡಿಸಿ ಆ ಪಾತ್ರೆಯನ್ನು ಅವನ ಮುಂದೆ ಇಟ್ಟು ರಾಜನಂದದ್ದೇ ನಂದರೆ:— ನಿನ್ನ ಐದು ರತ್ನಗಳು ಯಾವವು ಇದರೊಳಗೆ ? ನೋಡು ಮತ್ತು ಹುಡುಕಿಕೋ ! ಎನ್ನಲು ಅವನು ಆ ಪಾತ್ರೆಯಲ್ಲಿ ಅನೇಕ ರತ್ನ ದೊಳಗೆ ಕೂಡಿಸಿ ಇಟ್ಟ ರತ್ನಗಳಲ್ಲಿರುವ ತನ್ನ ಐದು ರತ್ನಗಳನ್ನು ಗುರುತಿ ನಿಂದ ತಕ್ಕೊಂಡಳು ಆಗ ರಾಜನು ಆ ಸತ್ಯ ಘೋಷನಿಗೆ ಅತ್ಯಂತ ಪತ್ತಾಯ ಮಾಡಿ ಹೆದರಿಸಿ ನೀನು ಇವನ ರತ್ನಗಳನ್ನು ಇಟ್ಟುಕೊಂಡಿದ್ದಿಯೋ ಇಲ್ಲವೋ ನಿಜವಾಗಿ ಹೇಳು ! ಅಂದಮೇಲೆ ಸತ್ಯಘೋಷನು ತಾನು ಇಟ್ಟುಕೊಂಡಿದ್ದನ್ನು ಒಪ್ಪಿಕೊಂಡನು; ಅನಂತರ ರಾಜನು ಸತ್ಯಘೋಷನಿಗೆ ಕೇಳಿದ್ದೇನಂದರೆ ಈ ಅಪರಾಧಕ್ಕೆ ಏನು ದಂಡ ಮಾಡಬೇಕು ? ನೀನೇ ಹೇಳು ! ಯಾಕಂದರೆ ನಾನು ಮೊದಲೇ ನಿನ್ನನ್ನು ಕೇಳಿದ್ದೇನಂದರೆ ರತ್ನ ಕದ್ದವನಿಗೆ ಏನು ದಂಡ ಎಂದು ಕೇಳಿದ್ದಕ್ಕೆ ನೀನೇ ಹೇಳಿದ್ದಾಗಿದ್ದೇನಂದರೆ ಒಂದು ಬುಟ್ಟಿ ಆಕಳ ಶಗಣಿ ತಿನ್ನಬೇಕು. ಅಥವಾ ಕುಸ್ತೀ ಪೈಲವಾನನಿಂದ ಮೂರು ಹೊಡೆತಗಳನ್ನು

ಸಹಿಸಬೇಕೆಂದು ನೀನು ಹೇಳಿದ್ದೆ. ಅಂದಮೇಲೆ ನೀನು ಈ ಎರಡರೊಳಗಿಂದ ಯಾವದನ್ನು ಸಹನ ಮಾಡುವೆ? ಶಗಣಿಯನ್ನು ತಿನ್ನುವಿಯೋ? ಅಥವಾ ಪೈಲವಾನನ ಮೂರು ಹೊಡೆತ ಸಹಿಸುವಿಯೋ? ಹೇಳು! ಅಂದಮೇಲೆ ಆ ಸತ್ಯಘೋಷನು ಹಣದ ಲೋಭದಿಂದ ಶಗಣಿಯನ್ನು ತಿನ್ನಲು ಒಪ್ಪಿದನು. ಸ್ವಲ್ಪ ಶಗಣಿಯನ್ನು ತಿಂದ ಮೇಲೆ ಅದು ಅವನಿಗೆ ಬಹಳೇ ಅಸಹ್ಯ ಹತ್ತಿದ್ದರಿಂದ ಪೈಲವಾನನು ಬಂದು ಮೂರು ಹೊಡೆದ ಕೂಡಲೆ ಪ್ರಾಣ ಬಿಟ್ಟು ಆರ್ತಧ್ಯಾನದಿಂದ ನರಕಕ್ಕೆ ಹೋಗಿ ಪುನಃ ಅಲ್ಲಿಂದ ಎಷ್ಟೋ ಭವಗಳನ್ನು ಧರಿಸಿ ಹಣದ ನಿಧಾನಬಂಧದಿಂದ ರಾಜನ ಖಜಾನೆಯಲ್ಲಿ ಹಾವು ಆಗಿ ಹುಟ್ಟಿ ಖಜಾನೆಯನ್ನು ಯಾರು ತೆರೆಯುತ್ತಾರೆಯೋ ಅವರನ್ನು ಕಡಿದು ಬಿಡುವವನಾದನು. ಇದರ ತಾತ್ಪರ್ಯವೇನಂದರೆ ಅಸತ್ಯವು ಮಹಾ ಸಂಸಾರ ಮತ್ತು ಪಾಪಕಾರಣ ಮತ್ತು ಬಂಧ ಕಾರಣ ವೆಂದು ತಿಳಿದು ಬುದ್ಧಿವಾನ ಜನರು ಅಸತ್ಯವನ್ನು ತೊರೆದು ಸತ್ಯ ಮಾರ್ಗವನ್ನು ಆಚರಿಸಿ ಸತ್ಯಸ್ವರೂಪ ಮೋಕ್ಷ ಪ್ರಾಪ್ತಿಯನ್ನು ಮಾಡಿಕೊಳ್ಳಬೇಕು. ಈ ಜಗತ್ತಿನಲ್ಲಿ **“ಸತ್ಯಂ ಶಿವಂ ಸುಂದರಂ”** ಎಂದು ಹೇಳಿದ ವಚನದಂತೆ ಜಗತ್ತಿನಲ್ಲಿ ಸತ್ಯವೇ ಸುಂದರವಿದೆ, ಸತ್ಯವೇ ಅಹಿಂಸಾಧರ್ಮವಿದೆ, ಸತ್ಯವೆ ಸ್ವರ್ಗ ಸುಖವನ್ನು ಕೊಡುವದಾಗಿದೆ. ಸತ್ಯ ಮಾತಾಡುವ ಮನುಷ್ಯನು ಜಗತ್ತಿನಲ್ಲಿ ಶ್ರೇಷ್ಠನೆನಿಸಿಕೊಳ್ಳುವನು. **ಸತ್ಯಕ್ಕೆ ಸಾವು ಇಲ್ಲ ಸುಳ್ಳಿಗೆ ಸುಖವಿಲ್ಲ** ವೆಂದು ನಾಣ್ಣುಡಿಯುಂಟು ಇದನ್ನು ತಿಳಿದು ಸತ್ಯದ ಆರಾಧನೆಯನ್ನು ಮಾಡಬೇಕೆಂಬುದು ತಾತ್ಪರ್ಯವಿದೆ.

—: ಇತಿ ಓಂ ಹ್ರೀಂ ಸತ್ಯ ಧರ್ಮಾಂಗಾಯನಮಃ :—

೫ ಉತ್ತಮ ಶೌಚಧರ್ಮ.

ಬಾಹ್ಯಾಭ್ಯಂತರಂ ಚಾಪಿಮನವಾಕ್ಕಾಯ ಶುದ್ಧನಿಃ ।
ಶುಚಿತ್ವೇನ ಸದಾಭಾವ್ಯಂ ಪಾಪಭೀರುತ್ವಃ ಶುಭಾವಕೈಃ ॥

ಯಾವ ಸಜ್ಜನ ಶ್ರಾವಕ ಗೃಹಸ್ಥನು ಪಾಪ ಭೀರು ವಿರುತ್ತಾನೆಯೋ ಅವನು ಮನಸ್ಸಿನಲ್ಲಿ ಶುಚಿತ್ವವನ್ನು ಧರಿಸುತ್ತಾನೆ. ನಿರ್ಮಳಾತ್ಮನ ಸ್ವರೂಪ ವನ್ನು ಭಾವಿಸುವದೇ ಶುಚಿತ್ವ ಭಾವನೆ ಇದೆ. ಮನಸ್ಸಿನ ಶುದ್ಧಿಯಾಗದ ಹೊರತು ಹೊರಗಿನ ಕೇವಳ ಶರೀರ ಶುದ್ಧಿಗೆ ಶುದ್ಧಿಯೆಂದು ಹೇಳುವದು ಶುದ್ಧಿಯಲ್ಲ; ಗೋದಾವರಿ, ಯಮುನಾ, ಗಂಗಾ, ಸರಯು, ಕೃಷ್ಣಾ, ಚಂದ್ರಭಾಗಾ, ಎಂಬ ನದಿಗಳಲ್ಲಿ ಸ್ನಾನಮಾಡಿ ಶರೀರ ಶುದ್ಧಿ ಮಾಡಿಕೊಂಡು ಇದರಿಂದ ನಮಗೆ ಪುಣ್ಯ ವಾಗುವದೆಂದು ಕಲ್ಪನೆಯಿಂದ ಸ್ನಾನಮಾಡುವದೇ ಶುದ್ಧಿ ಅಥವಾ ಉತ್ತಮ ಶೌಚಧರ್ಮವಲ್ಲ; ಅಂಥ ಹೊಳೆಗಳಲ್ಲಿ ಎಷ್ಟೋ ಮೀನ, ಮೊಸಳೆ, ಕಪ್ಪೆ. ಏಡಿ ಮೊದಲಾದ ಅನೇಕ ಜೀವಗಳು ರಾತ್ರಿ ಹಗಲು ಹೊಳೆಯಲ್ಲಿಯೇ ಇರುತ್ತವೆ. ಅದ್ದರಿಂದ ಅವೂ ಸ್ವರ್ಗ ಅಥವಾ ಮೋಕ್ಷಕ್ಕೆ ಹೋಗಬೇಕಾಗಿತ್ತು. ಆದರೆ ಅವು ಇನ್ನೂ ಈ ಸಂಸಾರ ಸಮುದ್ರದಲ್ಲಿ ಪಾಪದ ಫಲದಿಂದ ಭ್ರಮಣ ಮಾಡಹತ್ತಿ ರುತ್ತವೆ; ಆದ್ದರಿಂದ ನಾವೂ ನಿಜವಾದ ಆತ್ಮ ತೀರ್ಥವನ್ನು ಗುರುತಿಸಿ ಅದರೊ ಳಗೆ ಸ್ನಾನ ಮಾಡಿದರೆ ಎಷ್ಟೋ ಕರ್ಮಗಳೆಲ್ಲ ನಾಶವಾಗಿ ನಮ್ಮ ಆತ್ಮನು ಶುಚಿರ್ಭೂತನಾಗಿ ಮೋಕ್ಷ ಪ್ರಾಪ್ತಿಯನ್ನು ಹೊಂದುವನು.

ಅನಾದಿಕಾಲದಿಂದ ಈ ಜೀವನು ಅತ್ಯಂತ ಹೊಲಸಾದ ಈ ಕೊಳಕು ದೇಹದ ಶುದ್ಧಿಯಗೋಸ್ಕರ ಎಷ್ಟೋ ಸಾಬೂಣ ಸುಗಂಧ ತೈಲಾದಿಗಳನ್ನು ಹಚ್ಚಿ ಶುದ್ಧಮಾಡಬೇಕೆಂದು ರಾತ್ರಿ ಹಗಲು ಪ್ರಯತ್ನ ಮಾಡುತ್ತಿದ್ದಾನೆ. ಆದರೂ ಈ ದುಷ್ಟವಾದ ಶರೀರವು ತನ್ನ ದುಷ್ಟತೆಯನ್ನು ಬಿಡದೆ ಯಾವತ್ತೂ ನವಮಲ ದ್ವಾರದಿಂದ ಸೋರುತ್ತಲೇ ಇರುತ್ತದೆ.

ಎಲೇ ಮೂಢಾತ್ಮನೆ, ನೀನು ಅನಾದಿ ಕಾಲದಿಂದ ಅತ್ಯಂತ ನಿಂದ್ಯ ಮತ್ತು ಸಪ್ತಧಾತುಮಯದಿಂದ ಕೂಡಿರುವ ಶರೀರಕ್ಕೆ ಮೆಚ್ಚಿ ಇದರ ಸಂಗತಿ ಯಿಂದ ಇದರಲ್ಲಿ ಮೋಹಿತನಾಗಿ ಈ ಪಾಪಮಯ ಸಂಸಾರದಲ್ಲಿ ಪರಿಭ್ರಮಿಸು ವವನಾಗಿರುತ್ತಿ. ಇನ್ನು ಇದರ ಸ್ವರೂಪವನ್ನು ಚೆನ್ನಾಗಿ ಅರಿದು ಇನ್ನಿದರ ಮೋಹವನ್ನು ತೊರೆದು ಈ ಶರೀರವೆಂಬ ದುರ್ಗಂಧ ಹೆಂಡದ ಮಡಿಕೆಯಂತಿರುವ

ಹೇಸಿದುರ್ಗಂಧ ಚರ್ಮವನ್ನು ಹೊದ್ದುಕೊಂಡು ಅರ್ಥಾತ್ ಸುತ್ತಿಕೊಂಡು ಕುಳಿತು ನಿನ್ನ ಅತ್ಯಂತ ಪರಿಶುದ್ಧವಾದ ಅಥವಾ ಅತ್ಯಂತ ಶುಚಿಭೂತವಾದ ಸ್ವರೂಪವನ್ನು ಮರೆತೆಯಲ್ಲಾ ?

ಈ ಶರೀರ ಹೇಗಿದೆ ಎಂದರೆಃ—

ಕಾಯೋಽಯಂ ರಸರಕ್ತ ಮಾಂಸವಿಸರೊಮೇದೋಽಸ್ಥಿಮಜ್ಜಾ ವ್ರಜೊ।
ಬೀಭಸ್ತೊ ವಿತತಾಂತ್ಯ ಧಾತುರುದಿತಃ ಶುಕ್ರಾರ್ತವಾಭ್ಯಾಂ ಕ್ಷಯೀ ॥
ಜೀವಾಶ್ಲೀವ ಶಾತ್ತಕಾಂತಿರಖಿಲಕ್ಲೇಶೈಕನೀಡೋ ಜಡಃ।
ಸಂಗೊಽನೇನ ಸತಾಂದುನೋತಿ ಹೃದಯಂ ನೊದೋಽಪ್ರಜ್ಜಾ ಸ್ಪದಮ್ ॥

ಎಲೇ ಮೂಢಾತ್ಮನೆ ! ನೋಡು ಈ ಶರೀರವು ವೀರ್ಯ, ರುಧಿರ, ಮತ್ತು ಮಾಂಸದ ಸಮೂಹದಿಂದ ತಯಾರಾಗಿರುತ್ತದೆ. ಚರಮು, ಮೂಳೆ, ಮತ್ತು ಮಜ್ಜೆಗಳ ಸಮೂಹದಿಂದ ತುಂಬಿ ಬಿಟ್ಟಿರುತ್ತದೆ. ಆದ್ದರಿಂದ ಈ ದೇಹವು ಅತ್ಯಂತ್ಯ ದುರ್ಗಂಧ ಮತ್ತು ನಿಂದ್ಯವಾಗಿರುವದರಿಂದ ಗರ್ಹಣವುಳ್ಳುದಾಗಿದೆ. ಇದರ ಎಲ್ಲ ಕಡೆಯಲ್ಲಿಯೂ ವೀರ್ಯ ತುಂಬಿಹೋಗಿದೆ. ತಾಯಿಯ ರಜ ಮತ್ತು ತಂದೆಯ ವೀರ್ಯ್ಯದಿಂದ ಇದು ತಯಾರಾಗಿದೆ, ಮತ್ತು ಇದರ ನಾಶ ವಾಗುವದೂ ನಿಶ್ಚಿತವಾಗಿದೆ. ಇದರಲ್ಲಿ ಜೀವನು ಬಂದು ವಾಸ ಮಾಡುತ್ತಾನೆ. ಇದಕ್ಕೋಸ್ಕರ ಇದು ಕಾಂತಿಮಾನ್ ಅಥವಾ ತೇಜಸ್ವಿ ಯಾಗಿ ಕಂಡು ಬರುತ್ತದೆ; ವಿಚಾರಿಸಿ ನೋಡಿದರೆ ಇದು ಜಡವಿದೆ; ಮತ್ತು ಸಂಪೂರ್ಣ ಕ್ಲೇಶಗಳ ಅಥವಾ ದುಃಖಗಳ ಆಗರವಿದೆ; ಇದರ ಸಲುವಾಗಿ ಇದರ ಸಂಸರ್ಗವೂ ಸಜ್ಜನ ಪುರುಷರ ಹೃದಯವನ್ನು ಯಾವತ್ತೂ ದುಃಖಿತಗೊಳಿಸುತ್ತದೆ. ಇಂಥ ಎಲ್ಲ ತರದಿಂದ ದುಷ್ಟವಾಗಿ ದುಃಖಗಳನ್ನು ಕೊಡುವ ಶರೀರಕ್ಕೆ ಯಾವನಾದರೂ ಪ್ರಸನ್ನವಾದರೆ ಇದಕ್ಕಿಂತ ಹೆಚ್ಚಿಗೆ ನಿರ್ಲಜ್ಜೆಯ ಮಾತು ಯಾವದಿದೆ !

ಎಲೆ ಜೀವನೆ, ಈ ನಿಂದ್ಯವಾದ ಕೊಳಕ ಮತ್ತು ದುರ್ಗಂಧ ಶರೀರಕ್ಕೋಸ್ಕರ ಮತ್ತು ಇದರೊಳಗಿರ್ದ ಕ್ಷಣಿಕವಾದ ಇಂದ್ರಿಯ ಸುಖಕ್ಕೋಸ್ಕರ ಯಾಕೆ ಇಷ್ಟು ಚಂಚಲ ಮನಸುಳ್ಳವನಾಗಿರುವಿ ? ಎಲೆ ! ಜೀವನೆ ಕೇಳು.—

ಚೇತಸ್ತ್ವಂ ಕಿಮಿತಿ ವ್ರಜಸ್ಯತಿತರಾಂಜ ಭ್ರಾಂತಿಸ್ತ್ವನಾತ್ರಾಸ್ತಿಕಿಂ।
ಮೋಹೋತ್ಪಾದಕ ಮಿಂದ್ರಿಜಾಲ ಲಲಿತೆ ಕಾಂತ್ಯೈಕ ಕಾಂತೇಽಕ್ಷಜೆ ॥
ಸೌಖ್ಯಂತೆ ವಿರಸೇಽಭಿಮಾನಸರಸೆ ಕಾಂತಾಶ್ಚ ದರ್ದ್ದರ್ಪಣ ।
ಪ್ರೋಲ್ಲಾಸಿ ಪ್ರತಿಬಿಂಬ ಡಂಬರ ಭಿರಾಃ ಸಂಮೋಹದಾಃ ಕೇವಲಮ್॥

ಎಲೇ ಮನವೆ, ನೀನು ಇಷ್ಟು ಚಂಚಲ ಚಿತ್ತವುಳ್ಳವನ್ಯಾಕೆ ಆಗ ಹತ್ತಿರುವೆ ? ಚಂಚಲವಾದ ಇಂದ್ರಿಯ ವಿಷಯುಗಳಲ್ಲಿ ಯಾಕೆ ಓಡುತ್ತಿದ್ದಿಯಾ ? ಏನಯ್ಯಾ ಜೀವನೆ ! ಈ ವಿಷಯುಗಳಲ್ಲೇನು ಭ್ರಾಂತಿಯಾಗಿದೆಯೊ? ನೋಡು, ಯಾವ ಇಂದ್ರಿಯ ಜನ್ಯ ಸುಖಕ್ಕೆ ನೀನು ಸುಖವೆಂದು ಮನ್ನಿಸಿಕೊಂಡಿದ್ದೆಯೋ ಅದು ಸುಖವಲ್ಲ; ಆದರೆ ಅದು ಇಂದ್ರಜಾಲದ ಸಮಾನದಂತಿದೆ; ಸ್ವಲ್ಪ ಸಮಯ ಸುಖಾಭಾಸವೆನಿಸುವುದು; ಮತ್ತು ರಮಣಿಯವಾಗಿ ಕಂಡು ಬರುವದು; ಆದರೂ ಅದು ಅತ್ಯಂತ ಸಾರ ರಹಿತವಾಗಿದೆ. ಕೇವಲ ನಿನ್ನ ಅಭಿಮಾನ ವಶವಾಗಿ ಸರಸವಿದ್ದಂತೆ ಕಂಡು ಬರುತ್ತದೆ. ಇಂಥ ಇಂದ್ರಿಯುಗಳಿಂದ ಉತ್ಪನ್ನವಾದ ಸುಖವು ಕೇಲವ ನಿನಗೆ ಮೋಹವನ್ನು ಉಂಟು ಮಾಡುವವಾಗಿದ್ದೆ ಅಥವಾ ಇದರ ಕಾರಣವು ಹೀಗಿದೆ: ಅಂದರೆ, ಕನ್ನಡಿಯನ್ನು ನೋಡಿ ಮೋಹವನ್ನುಂಟು ಮಾಡುವಂತೆ, ಆಡಂಬರ ಪೂರ್ಣವಾದ ಸ್ತ್ರೀಯರು ಕೇವಲ ಮೋಹವನ್ನು ಉಂಟುಮಾಡುವವರಾಗಿರುತ್ತಾರೆ; ನಿನ್ನಾತ್ಮನಿಗೆ ಸುಖವನುಂಟು ಮಾಡುವವರಲ್ಲ; ಎಂದರಿದು ನೀನು ನಿನ್ನ ನೋಡಿ ನಿನ್ನನ್ನೇ ನೀನು ಭಾವಿಸಿದರೆ ನಿನಗೆ ಸುಖ ಉಂಟಾಗುವದು.

ಎಲೇ ಆತ್ಮನೆ ! ನೀನು ನಿನ್ನದೆಂದು ಭಾವಿಸುತ್ತಿರುವ ಈ ಪಂಚಭೂತಗಳಿಂದ ನಿರ್ಮಾಣವಾಗಿರ್ದ ಈ ಶರೀರವು ನಿನ್ನನ್ನು ಅನಾದಿ ಕಾಲದಿಂದ ನಿನ್ನ ನಿಜವಾದ ಸ್ವರೂಪವನ್ನು ಮರೆಯಿಸಿ ನಿನ್ನನ್ನು ಅಪವಿತ್ರವಾದ ಮಹಾಪಾಪವನ್ನು ಉತ್ಪನ್ನ ಮಾಡತಕ್ಕಂಥ ಅನೇಕ ಪರ್ಯಾಯಗಳನ್ನು ಧಾರಣ ಮಾಡಿಸತಕ್ಕಂಥದ್ದಾಗಿದೆ. ಆದ್ದರಿಂದ ನೀನು ಅದರ ದುಷ್ಟಸ್ವರೂಪವನ್ನು ನೀನು ತಿಳಿಯದೆ ಅದೇ ನನ್ನದೆಂದು ಭಾವಿಸಿರುವ ಕಾರಣ ಅನಾದಿಯಿಂದ ಇಲ್ಲಿಯವರೆಗೂ, ಈ ಕೊಳಕ ದೇಹದ ಸೇವೆಗಾಗಿ ಅಥವಾ ಇದರ ರಕ್ಷಣೆಗಾಗಿ ರಾತ್ರಿ ಹಗಲು ಅನೇಕ ವಸ್ತುಗಳನ್ನು ಸಂಗ್ರಹಿಸಬೇಕಾಗಿದೆ; ಆದರೆ ಇನ್ನೂ ವರೆಗೂ ಇದರ ದುಷ್ಟ ಸ್ವಭಾವವು ನಿನಗೆ ತಿಳಿಯಬಾರದೇ ? ಎಷ್ಟು ಆಶ್ಚರ್ಯ!– ನೋಡು ! —

ಅಶುಚಿತ್ವಭಾವನೆಯು ಸ್ವರೂಪ ಹೇಳುತ್ತಾರೆ ಕೇಳು

ರೇತಃ ಶೋಣಿತ ಜಾತಿ ಧಾತು ನಿಚಿತಂ ಪ್ರಚ್ಛಾದಿತಂ ಚರ್ಮಣಾ ।
ಸಾಂದ್ರೋದ್ರಿಕ್ತ ಶಲಸ್ ಮಲಂ ಬಹುವಿಲೈರರಿಗಂ ಜುಗುಪ್ಸಾಸು
ನಾಮ್ ॥
ಭೀತಿಂ ಕಿಂ ನ ತಸೋತ್ಯ ಸಂಸ್ಕೃತ ಬಹಿಶ್ಚರ್ಮಾತ್ರ ಗಾತ್ರೇನ ಚೇತ್ ।
ಸ್ಪೃಷ್ಟಂ ದೃಷ್ಟುಮಪಿ ಕ್ಷಮೋಽಸ್ತಿಕಮಿದಂ ತ್ರಾತುಂ ಪವಿತ್ರ್ಯಾದಿತಃ॥

ಎಲೇ ಆತ್ಮನೆ! ಈ ಶರೀರವು ರಕ್ತವೀರ್ಯಗಳಿಂದ ನಿರ್ಮಾಣವಾಗಿದೆ. ಮಾಂಸ ಮೊದಲಾದವುಗಳಿಂದ ತುಂಬಿಹೋಗಿದೆ. ಚರ್ಮದಿಂದ ಮುಚ್ಚಲ್ಪಟ್ಟಿದೆ. ಮೂಗು, ಕಿವಿ, ಕಣ್ಣು, ಮುಖ ಮೊದಲಾದವುಗಳ ಅನೇಕ ವಿಧ ಚಿದ್ರಗಳಿಂದ ಬಹಳವಾಗಿ ಮಲವು ಯಾವತ್ತೂ ಹೊರಬೀಳುತ್ತಲೇ ಇರುತ್ತದೆ. ಮತ್ತೆ ಇದು ಅತ್ಯಂತ ನಿಂದ್ಯ ಘ್ರಾಣಿತವಾದ ಸ್ಥಾನವಿದೆ. ಇಂಥ ಶರೀರವನ್ನು ಒಂದು ವೇಳೆ ವಸ್ತ್ರ ಮೊದಲಾದವುಗಳಿಂದ ಮುಚ್ಚಿ ಇಡದಿದ್ದರೆ ಅಥವಾ ತೊಳೆದು ಸ್ವಚ್ಛಮಾಡಿ ಇಡದಿದ್ದರೆ ಈ ಹೊಲಸು ಶರೀರವು ಯಾರಿಗೆ ಹೇಸಿಗೆ ಉಂಟು ಮಾಡುವದಿಲ್ಲ ?

ಎಲೇ ಜೀವನೆ! ಒಂದು ವೇಳೆ ಈ ಶರೀರವನ್ನು ಸುರಕ್ಷಿತವಾಗಿ ತೊಳೆದು ಸ್ವಚ್ಛ ಮಾಡಿ ಇಡದಿದ್ದರೆ, ಇದು ಅತ್ಯಂತ ಭಯಂಕರ ಭಯವನ್ನು ಉಂಟು ಮಾಡುವದಾಗಿದೆ; ಇವರ ಮೇಲೆ ಚರ್ಮದಿಂದ ಅಚ್ಛಾದನವಾಗದೆ ಇದ್ದರೆ ನೋಡುವದೇನು ? ಭಯಂಕರವಾಗಿ ಕಾಣಿ ಭೀತಿಯುಂಟು ಮಾಡುತ್ತದೆ. ಮತ್ತು ಈ ರೀತಿಯುಲ್ಲಿದ್ದರೆ, ನೀಚ ನಾಯಿ, ಕಾಗೆ, ಹದ್ದುಗಳೂ ಕೂಡ ಇದನ್ನು ತಾಳಗೊಡದೆ ಹರಿದು ತಿಂದು ಹಾಕಬಹುದು. ಆದ್ದರಿಂದ ಜೀವನೆ, ಇನ್ನು ನೀನು ಅಶುಚಿಯಾದ ಜಡತ್ವ ಶರೀರದ ನಿನ್ನ ಜಡ ಬುದ್ಧಿ ಭಾವವನ್ನು ಬಿಟ್ಟು ಅಖಂಡ ನಾಶರಹಿತ ಅನಂತಜ್ಞಾನಾದಿ ಚತುಷ್ಟಯ ಸ್ವರೂಪ ಮತ್ತು ಅನಂತ ಗುಣಗಳಿಂದ ಕೂಡಿದ ನಿನ್ನೊಳು ಅತ್ಯಂತ ಶುಚಿಭೂತವಾದ ಪರಿಶುದ್ಧ ಆತ್ಮ ಸ್ವರೂಪವನ್ನು ಶುದ್ಧ ಶುಚಿ ತೀರ್ಥ ನದಿಯಲ್ಲಿ ಮೀಯಲು ನಿನ್ನನ್ನು ಮಲೀನ ಮಾಡಿರ್ದ ಅನಾದಿ ಕರ್ಮದ ಮಲವು ನಾಶಮಾಡುವದೇನಚ್ಚರಿಯೆ? ಮುಂದೆ ಮತ್ತದನ್ನೆ ಸ್ಪಷ್ಟಗೊಳಿಸುತ್ತಾರೆ.

ತೊಗಲ ಪಸುಂಬೆಯೊಳ್ಪೊಲಸಿನೊೀವರಿಯೊಳ್ರುಜೆಯುಂಬ
ಚೇಳ್ಗಳಾ ।

ಪಗೆವಿನೊಳಿರ್ಪವೊಲ್ತುನುವಿನೊಳ್ಮವಿದಿರ್ಪನಾತ್ಮನೆಂಬುದಂ।
ಬಗೆಯದ ಕಾರಣಂ ಬರ್ದುಕುರಂಜಿಸಿತಲ್ಲದೆ ತೂಗಿ ನೋಳ್ಪಿನಂ।
ನಗಲೆಡೆಯುಂಟೆ ತುತ್ತಿದೆ ಮನಂ ಬಿಡದೇ ಅಪರಾಜಿತೇಶ್ವರಾ॥

ಈ ಕೊಳಕ ಶರೀರವೆಂಬ ಘಟಕ್ಕೆ ಮೋಹಿತನಾಗುವ ಜೀವಕ್ಕೆ ರತ್ನಾಕರ ಕವಿಗಳು ಈ ರೀತಿ ಹೇಳಿದ್ದೇನಂದರೆ:--

ಅಪರಾಜಿತೇಶ್ವರನೇ ! ಚರ್ಮದ ಚೀಲದಲ್ಲಿರುವಂತೆಯೂ, ಹೊಲಸಾದ ಕೋಣೆಯಲ್ಲಿರುವಂತೆಯೂ, ರೋಗವೆಂಬ ಚೇಳುಗಳ ಕುಳಿಯಲ್ಲಿರುವಂತೆಯೂ, ಆತ್ಮನು ಈ ಶರೀರದಲ್ಲಿ ಆವರಿಸಿಕೊಂಡಿರುತ್ತಾನೆ. ಎಂಬುದನ್ನು ವಿಚಾರ ಮಾಡುವದರಿಂದ ಬಾಳು ಶೋಭಿಸಿತಲ್ಲದೆ, ವಿಚಾರವಮಾಡಿ ನೋಡಿದಗೆ ನಗುವದಕ್ಕೆ ಅವಕಾಶವಿದೆಯೆ ? ಬಾಯಿಗೆ ತುತ್ತಿಡುವದಕ್ಕೆ ಮನಸ್ಸು ಬರುವುದೇ ? ಏನಯ್ಯಾ ಆತ್ಮನೆ ನೀನೆ ವಿಚಾರಮಾಡಿ ನಿನ್ನೊಳಗೆ ನೋಡು. ಮಹಾ ಅಶುಚಿಯೆಂಬ ಹೊಲಸು ಶರೀರದ ಪ್ರೇಮಭಾವವು ಹೋಗಿ ಶುದ್ಧಾತ್ಮನ ಭಾವನೆಯಾಗಿ ಅದರೊಳಗೆಯೇ ರುಚಿಯಾಗಿರುವದಿದು ಶುಚಿತ್ವ ಭಾವನೆಯೆಂದು ಅರಿದು ಭಾವಿಸುವದು ಸಂಸಾರದಿಂದ ಮುಕ್ತನಾಗುವ ಸಾಧನೆಯಿದೆ.

ಎಲೇ ಆತ್ಮನೇ! ನಿಜವಾದ ಶುಚಿತ್ವಭಾವನೆ ಯಾವದೆಂದರೆ, ಅಂತರಂಗ ಮತ್ತು ಬಹಿರಂಗ ಆತ್ಮಸ್ವಭಾವವನ್ನು ನಿತ್ಯವಾಗಿ ಮಲೀನ ಮಾಡುವ ಯಾವ ಬಹಿರಂಗ ಮತ್ತು ಅಂತರಂಗ ವೆಂಬ ಕುಷ್ಟ ಕಷಾಯಗಳ ಭಾವಗಳಾಗಿವೆಯೋ ಅವುಗಳನ್ನು ಶುದ್ಧ ವೀತರಾಗವಾಣಿಯಿಂದ ಹರಿದು ಬಂದ ಜ್ಞಾನರೂಪಿ ಗಂಗೆಯ ನೀರಿನಿಂದ ತೊಳೆಯದ ಹೊರತಾಗಿ ಒಳಗಿರುವ ಮಲೀನ ಭಾವಗಳು ಹೊರಗಿನ ಗೋದಾವರೀ, ಯಮುನಾ, ಗಂಗಾ, ಕೆರೆ, ಬಾವಿ, ಸರೋವರ ಮೊದಲಾದವುಗಳಲ್ಲಿ, ಮೀಯಲು ಹೊರಗಿನ ಶರೀರ ಮೇಲಿರುವ ಹೊಲಸು ತೊಳೆಯುತ್ತದೆ; ಆದರೆ ಒಳಗಿರುವ ಅಶುದ್ಧ ಕಷಾಯಗಳಿಂದ ಉಂಟಾದ ಮಲವು ತೊಳೆಯುವದಿಲ್ಲ. ವೀತರಾಗ ಭಗವಂತನ ವಾಣಿರೂಪ ತೀರ್ಥದಲ್ಲಿ ಸ್ನಾನ ಮಾಡಿದರೆ, ಶರೀರಮಲವು ಮತ್ತು ಅಂತರಂಗಮಲವೆಂಬ ಈ ಎರಡೂ ಮಲಗಳು ತೊಳೆದುಹೋಗುತ್ತದೆ.

ಇದರ ಬಗ್ಗೆ ಭಗವದ್ಗೀತೆಯಲ್ಲಿ ಹೇಳಿದ್ದಾರೆ:—

ಮಲನಿರ್ಮೋಚನಂ ಪುಂಸಾಂಜಲ ಸ್ನಾನಂ ದಿನೆದಿನೆ।
ಸಕೃದ್ಗೀತಾಂಭಸಿಸ್ನಾನಂ ಸಂಸಾರ ಮಲನಾಶಕಮ್॥

ಶರೀರ ಮಲವನ್ನು ತೊಳೆಯುವದಕ್ಕೋಸ್ಕರ ಈ ಮಾನವನು ಪ್ರತಿ ದಿವಸ ಅನೇಕ ವಿಧವಾದ ಹೊಳೆ, ಕೆರೆ, ಭಾವಿ, ಸರೋವರ ಮೊದಲಾದವು ಗಳಲ್ಲಿ ಅನಾದಿ ಕಾಲದಿಂದ ಸ್ನಾನ ಮಾಡುತ್ತಲೇ ಬಂದಿದ್ದಾನೆ, ಮತ್ತು ಈಗಲೂ ಮಾಡುತ್ತಿದ್ದಾನೆ. ಅವರಿಂದ ಈ ಹೊರಗಿನ ಶರೀರ ಮಲವು ಕ್ಷಣ ಮಾತ್ರಕ್ಕಾಗಿ ಸ್ವಚ್ಛವಾಗುತ್ತದೆ; ಆದರೆ ಸ್ವಚ್ಛವಾದ ಭಗವದ್ ಗೀತಾ ರೂಪ ವಾಣಿ ಗೀತೆಯೆಂಬ ನೀರಿನೊಳಗೆ ಸ್ನಾನ ಮಾಡಲು ಸಂಸಾರ ಮಲವೆಲ್ಲ ನಾಶ ವಾಗಿ ಶುದ್ಧ ಪರಮಾತ್ಮ ಪದ ಪ್ರಾಪ್ತವಾಗುವದೆಂದು ಭಾವಾರ್ಥವು.

ಅದೇ ವಿಷಯ ಮುಂದೆಯೂ ಹೇಳಿದ್ದಾರೆ:—

ಆತ್ಮಾನದೀ ಸಂಯಮ ತೋಯ ಪೂರ್ಣ ।
ಸತ್ಯಂ ಮಹಾಶೀಲ ತಟಾ ದಯೋರ್ಮಿಭಿಃ ॥
ತತ್ರಾಭಿಷೇಕಂ ಕುರು ಪಾಂಡು ಪುತ್ರ ।
ನವಾರಿಣಂ ಶುದ್ಧಯತಿ ಚಾರಿತರಾತ್ಮಾ ॥

ಎಲೇ ಜೀವನೇ ಕೇಳು ! ಸತ್ಯರೂಪಿ ಪ್ರವಾಹ, ಶಿಲರೂಪಿ ಧಡವು, ದಯೆ ಎಂಬ ತರಂಗ, ಮತ್ತು ಸಂಯಮವೆಂಬ ಜಲದಿಂದ ಪರಿಪೂರ್ಣದಾದ ಆತ್ಮರೂಪಿ ನದಿಯಲ್ಲಿ, ಎಲೈ ಪಾಂಡವಪುತ್ರನೆ,! ಸ್ನಾನ ಮಾಡು. ಯಾಕಂದರೆ ಇದರ ಹೊರತಾಗಿ ಬೇರೆ ಬಾಹ್ಯ ಗಂಗಾ, ಗೋದಾವರಿಯಲ್ಲಿ ಸ್ನಾನ ಮಾಡು ವದರಿಂದ ಆತ್ಮಶುದ್ಧಿಯಾಗುವದಿಲ್ಲ, ಮಾತ್ರ ಶರೀರ ಶುದ್ಧಿಯಾಗುತ್ತದೆ. ಸಂಯಮರೂಪಿ ಹೊಳೆಯಲ್ಲಿ ಸ್ನಾನ ಮಾಡಿದರೆ ಬಹಿರಂಗ ಮತ್ತು ಅಂತರಂಗ ಇವೆರಡೂ ಶುದ್ಧವಾಗುತ್ತವೆ. ಶೌಚಧರ್ಮ ವಿದೇ ! ಇದಲ್ಲದೆ ಬೇರೆ ಯಾವೂ ನದಿಗಳಿಂದ ಶುದ್ಧಿಯಾಗುವದಿಲ್ಲೆಂದು ತಿಲಿದು ಭವ್ಯ ಜ್ಞಾನಿ ಜೀವರು ಆತ್ಮನ ಶುಚಿತ್ವ ಸಲುವಾಗಿ ನಿತ್ಯವೂ ಸಂಯಮದ ಭಾವನೆ ಮಾಡಿ ಮತ್ತು ಭಗ ವಂತನು ಹೇಳಿದ ಶುದ್ಧ ಅಹಿಂಸಾ ತತ್ವದ ಭಾವನೆ ಅಥವಾ ಅವರ ಮಾರ್ಗದ ಅನುಕರಣವನ್ನು ಮಾಡುವದೇ ಜೀವನ ಸುಖದ ಮಾರ್ಗದ ಸಾಧನೆಯೆಂದು ತಿಳಿದು ಉತ್ತಮ ಶೌಚ ಭಾವನೆಯ ಆರಾಧನೆ ಮಾಡುವದೇ ಮಾನವ ಜನ್ಮದ ಸಾರ್ಥಕವಾಗಿದೆ.

—: ಇತಿ ಓಂ ಹ್ರೀಂ ಶೌಚ ಧರ್ಮಾಂಗಾಯನಮಃ :—

೬ ಉತ್ತಮ ಸಂಯಮ ಧರ್ಮಃ

ಸಂಯಮ:— ಸಂಯಮವು ಎರಡು ವಿಧವಾಗಿದೆ. ಒಂದು ಇಂದ್ರಿಯ ಸಂಯಮ, ಮತ್ತೊಂದು ಪ್ರಾಣ ಸಂಯಮ.

ಇಂದ್ರಿಯ ಸಂಯಮವೆಂದರೆ- ಇಂದ್ರಿಯಗಳು ಸ್ಪರ್ಶನಾದಿ ತಮ್ಮ ತಮ್ಮ ಇಷ್ಟ ಮತ್ತು ಅನಿಷ್ಠ ವಿಷಯ ಪದಾರ್ಥಗಳಿಂದ ತನ್ನ ಮನಸ್ಸು ತಡೆಯುವದು, ಇಷ್ಟ ವಸ್ತುಗಳಲ್ಲಿ ರಾಗ ಭಾವವಿಡುವದು, ಅನಿಷ್ಠ ವಸ್ತುಗಳಲ್ಲಿ ದ್ವೇಷ ಮಾಡುವದು, ಇದು ಸಂಯಮ. ಇವುಗಳಿಂದ ನಿವೃತ್ತಿಯಾಗುವದೇ ಇಂದ್ರಿಯ ಸಂಯಮ. ಐದು ಸ್ಥಾವರ ಮತ್ತು ತ್ರಸಜೀವಗಳಿಗೆ ಬಾಧೆ ಬರದಂತೆ ಅದರಿಂದ ವಿರಕ್ತವಾಗುವದು,- ಇದು ಪ್ರಾಣೀ ಸಂಯಮ. ಸಂಯಮವು ನಿಜವಾದ ಆತ್ಮನಧರ್ಮವಿದೆ. ಸಂಯಮವಿಲ್ಲದ ಮಾನವನು ಪಶುವಿನಂತೆ ಆಚರಿಸಿ ಕಡೆಗೆ ಆಯು–ಅವಸಾನದಲ್ಲಿ ಪಶುಗಳಂತೆ ಶರೀರವನ್ನು ಬಿಟ್ಟು ಪಾಪದ ಉದಯದಿಂದ ಅತ್ಯಂತ ನಿಂದ್ಯ ಗತಿಗೆ ಸಂದುತ್ತಾನೆ.

ಈ ಇಂದ್ರಿಯಗಳು ಮತ್ತು ಅವುಗಳ ವಿಷಯಗಳು ಜಡವಾಗಿವೆ. ಅವು ನಾಮಕರ್ಮದ ಉದಯದಿಂದ ಜನಿಸಿರುತ್ತದೆ. ಯಾವ ಉದಯ ಅಂತರಾಯ ಕರ್ಮದ ಕ್ಷಯೋಪಶಮದಿಂದ ಅಥವಾ ಕರ್ಮಕ್ಕೆ ಅನುಸರಿಸಿ ಪ್ರಾಪ್ತವಾಗುತ್ತವೆಯೋ, ಅವುಗಳನ್ನು ಉಪಭೋಗಿಸುವ ಶರೀರವು ಜಡ ರೂಪವಾಗಿದೆ. ಜೀವನು ಚೈತನ್ಯ ಸ್ವಭಾವವುಳ್ಳವನು. ದರ್ಶನಜ್ಞಾನ ಸುಖ ವೀರ್ಯ ಮೊದಲಾದ ಅನಂತ ಗುಣಗಳ ಆಧಾರ ಸ್ವರೂಪ ಉಳ್ಳ ಶುದ್ಧ ಚೈತನ್ಯ ಸ್ವರೂಪ ಮಾತ್ರ ಇದ್ದಾನೆ. ಮತ್ತು ಆತನು ಈ ಪರ ಪದಾರ್ಥಗಳಿಂದ ಉಂಟಾದ ಪರ ವಸ್ತುಗಳ ಉಪಾಧಿಗಳಿಂದ ಬೇರೆ ಯಾಗಿದ್ದಾನೆ. ಈ ಜೀವನು ಯಾವತ್ತು ನಿಶ್ಚಯದಿಂದ ಜ್ಞಾನದರ್ಶನ ಮೊದಲಾದ ತನ್ನ ಸ್ವರೂಪದಲ್ಲಿಯೇ ರಮಣ ಮಾಡುವವನಿದ್ದಾನೆ. ಹೀಗೆ ಇದ್ದಾಗ್ಯೂ ಕೂಡ ತನ್ನ ಜ್ಞಾನದರ್ಶನ ಚಾರಿತ್ರವೆಂಬ ತನ್ನ ನಿಜ ಸ್ವರೂಪವನ್ನು ಮರೆತು ವಿಷಯ ಕಷಾಯ ಮೊದಲಾದವುಗಳ ರಾಗ ಪರಿಣತಿಗಳಿಂದ ಪರಿಣಿತನಾಗಿ ತನ್ನ ಸ್ವರೂಪವನ್ನು ಮರೆತು ಬಿಟ್ಟು ಅನಾದಿ ಕಾಲದಿಂದ ಸಂಸಾರದಲ್ಲಿ ನಾರಕಿ ತಿರ್ಯಂಚ ಮನುಷ್ಯ ಮತ್ತು ದೇವ ಈ ನಾಲ್ಕು ಗತಿಗಳಲ್ಲಿ ಪರಿಭ್ರಮಣ ಮಾಡ ಹತ್ತಿದ್ದಾನೆ. ಇದಲ್ಲದೆ ಆಯಾ ಪರ್ಯಾಯಗಳ ಭಾವದಲ್ಲಿ ಭಾವ ಪರಿಣತವಾಗುತ್ತ ಎಂಬತ್ತು ನಾಲ್ಕು ಲಕ್ಷ

ಯೋನಿ ಎಂಬ ಕುಳಿಗಳಲ್ಲಿ ಅರ್ಥಾತ್ ಯೋನೀ ರೂಪಿ ತಗ್ಗಿನಲ್ಲಿ ಅನೇಕ ಪರ್ಯಾಯಗಳನ್ನು ತಾಳುತ್ತ ಜನ್ಮ ಜರಾ ಮರಣಗಳನ್ನು ಹೊಂದುತ್ತಾ ಬರುತ್ತಿದ್ದಾನೆ. ಯಾವಾಗ ಈ ಆತ್ಮನು ನಿಜವಾದ ಸ್ವರೂಪವನ್ನು ವಿಚ್ಯಾರಿಸುತ್ತಾನೆಯೋ ಆವಾಗಲೇ ಇವನು ದೇಹ ಮೊದಲಾದ ಸಮಸ್ತ ಜಡ ಪದಾರ್ಥಗಳಿಂದ ಭಿನ್ನನಾಗಿರುವೆನೆಂದು ತನ್ನೊಳಗೆ ತಾನಾಗಿ ಪರವಸ್ತುವಿನೊಳಗೆ ಸೇರಿದ ಉಪಯೋಗವನ್ನೇ ಕಿತ್ತಿ ತೆಗೆದು ಆ ಉಪಯೋಗ ತನ್ನನ್ನು ತನ್ನೊಳಗೆ ತಾನೇ ತನ್ನೊಂದೊಂದು ಜ್ಞಾನ ಸ್ವರೂಪವಾದ ಪರಮ ವಿಶುದ್ಧ ಪಾರಿಣಾಮಿಕ ಭಾವ ರೂಪವಾದ ಆತ್ಮನನ್ನು ನೋಡುತ್ತಾನೆಯೋ ಇಂದ್ರಿಯಗಳ ವಿಷಯಗಳನ್ನು ಕರ್ಮ ಕೃತ ಉಪಾಧಿಗಳೆಂದು ತಾನು ತನ್ನ ನಿಜ ರೂಪದಿಂದ ತಿಳಿದು ಅವುಗಳಿಂದ ಪರಾಙ್ಮುಖವಾಗುತ್ತಾನೆಯೋ ಆಗ ಜೀವನು ತನ್ನ ನಿಜವಾದ ಸತ್ಯಜ್ಞಾನ ಸ್ವರೂಪದ ಲಾಭವನ್ನು ಹೊಂದಿ ಸ್ವಾನುಭಾವವೆಂಬ ಸುಖದಲ್ಲಿ ಮಗ್ನನಾಗಿ ಪರಮ ವೀತರಾಗ ಅವಸ್ಥೆಯನ್ನು ಹೊಂದುತ್ತಾನೆ. ಆಗ ಅವನು ನಿಜವಾದ ಸುಖಿಯೆನಿಸಿಕೊಳ್ಳುವನು.

ಆದರೆ ಎಷ್ಟರ ವರೆಗೆ ಇವನಲ್ಲಿ ಇಂದ್ರಿಯ ವಿಷಯಗಳ ಚಂಚಲತೆಯು ಇರುವದೋ ಅಷ್ಟರ ವರೆಗೆ ವಿಷಯ ಕಷಾಯಗಳು ಮತ್ತು ಅದರ ಸಮ್ಮಂಧಿಯಾದ ವಿಷಯ ವಾಸನೆಗಳು ಬೆಳೆಯುತ್ತಲೇ ಇರುತ್ತವೆ. ಇದಕ್ಕೋಸ್ಕರ ಇಂದ್ರಿಯಗಳ ವಿಷಯದಿಂದ ಮನಸ್ಸಿನ ಉಪಯೋಗವನ್ನು ತಡೆಯುವದೇ ಉತ್ತಮ ಸಂಯಮವಿದೆ. ಈ ಸಂಯಮ ಧರ್ಮವು ಸ್ವತ ತನ್ನ ಆತ್ಮನ ಸ್ವಭಾವದ್ದಾಗಿದೆ. ಆದ್ದರಿಂದ ಸುಖದ ಇಚ್ಛೆಯ ಅಭಿಲಾಷೆಗಳಾದ ಭವ್ಯಜ್ಞಾನಿಜನರು ಯಾವತ್ತು ಸಂಯಮದ ರಕ್ಷಣೆಯನ್ನು ಮಾಡಬೇಕೆಂದು ಭಾವವು.

ಆದರೆ ಇಂದಿನ ಕಲಿಯುಗದ ತರುಣ ತರುಣಿಯರು ತಮ್ಮ ತಮ್ಮ ಧರ್ಮದ ಮಾರ್ಗವನ್ನು ಭಿನ್ನ ಭಿನ್ನವಾಗಿ ಸ್ವೀಕರಿಸಿಕೊಂಡಿದ್ದಾರೆ ಅವರು ಹೇಳುವದೇನಂದರೆ ಹೆಚ್ಚಾಗಿ ವಿಷಯ ಸೇವನೆ ಮಾಡುವದರಿಂದಲೇ ನಮಗೆ ಹೆಚ್ಚಾಗಿ ಆನಂದ ಅಥವಾ ಸಂತೋಷ ಉಂಟಾಗುತ್ತದೆ. ಇದಕ್ಕೋಸ್ಕರವೇ ಅವರು ತಮ್ಮ ತಮ್ಮ ಕಲ್ಪನೆಯಂತೆ ಒಂದೊಂದು ಸಿದ್ಧಾಂತವನ್ನು ತಯಾರಿಸಿಕೊಂಡು ಇಟ್ಟುಕೊಂಡಿದ್ದಾರೆ. ಅದು ಏನಂದರೆ—

ಯಾವಜ್ಜೀವೇತ್ ಸುಖಂ ಜೀವೇತ್ ಋಣಂ ಕೃತ್ವಾಘೃತಂ ಪಿಬೇತ್॥
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥

ಎಲ್ಲಿಯ ವರೆಗೆ ನಮಗೆ ಇರುವದಿದೆಯೋ ಅಲ್ಲಿಯ ವರೆಗೆ ಸುಖ ಪೂರ್ವಕವಾಗಿ ಬಾಳಬೇಕು. ಮತ್ತು ವಿಷಯ ಸುಖಗಳನ್ನು ಅನುಭವಿಸಬೇಕು. ಮನ ಬಂದಷ್ಟು ರುಣವಾದರೂ ಅಡ್ಡಿ ಇಲ್ಲ, ಮುಂದೆ ಅವರ ರುಣ ಕೊಡವದಾಗದಿದ್ದರೂ ಅಡ್ಡಿ ಇಲ್ಲ, ಆದರೆ ನೀವು ಸಾಕಷ್ಟು ತುಪ್ಪವನ್ನು ಕೊಂಡು ಕೊಂಡು ಕುಡಿಯಿರಿ. ಪೇಡೆ, ಹಾಲಿನ ಮೇಲಿನ ಕೆನೆ, ಮೇವಾ–ಮಿಠಾಯಿ, ಮೃಷ್ಟಾನ್ನ, ಹೆಂಡ (ದಾರು), ಮಾಂಸ, ಕೋಳಿ, ತತ್ತಿ ಮೊದಲಾದವುಗಳನ್ನು ತಿಂದರೂ ಅಡ್ಡಿ ಇಲ್ಲ. ಯಾಕೆಂದರೆ ಇವೆಲ್ಲ ಜಡ ಪದಾರ್ಥಗಳಾಗಿವೆ; ಚೇತನ ಪದಾರ್ಥಗಳಲ್ಲ, ಆತ್ಮನು ಇವುಗಳಿಂದ ಬೇರೆ ಯಾಗಿದ್ದಾನೆ, ಆತ್ಮನಿಗೆ ಪಾಪ ಪುಣ್ಯ ಮೊದಲಾದವುಗಳು ಇಲ್ಲ. ಶರೀರಕ್ಕೆ ಇವೆ. ಆದರೆ ಆತ್ಮನಿಗೆ ಇವು ಇಲ್ಲವು. ಆತ್ಮನು ಪಾಪ ಪುಣ್ಯಗಳ ಭೋಗಿಯಾಗುವದಿಲ್ಲ. ಮತ್ತು ಪುಣ್ಯ ಪಾಪಗಳನ್ನು ಯಾಗು ಕಂಡಿದ್ದಾರೆ ? ಮತ್ತು ಶರೀರವು ಭಸ್ಮವಾಗಿ ಹೋದ ಮೇಲೆ ಮರಳಿ ಹುಟ್ಟುವದನ್ನು ಯಾವನು ನೋಡಿದ್ದಾನೆ? ಇದೇ ರೀತಿ ಇಂಗ್ಲೀಷಿನಲ್ಲಿಯೂ ಕೂಡ ಹೇಳಿದ್ದಾರೆ. ಅವರು ಹೀಗೆ ಹೇಳುತ್ತಾರೆ. ನೋಡಿರಿ; ಅದರ ಸಾರಾಂಶ ಹೀಗಿದೆ.

" ಉಣ್ಣಿರಿ, ತಿನ್ನಿರಿ, ಕುಡಿಯಿರಿ, ಮತ್ತು ಚೈನಿ ಮಾಡಿರಿ. " ಆದರೆ, ಇವರ ಈ ವಿಚ್ಯಾರಗಳು ಚನ್ನಾಗಿಲ್ಲ. ಯಾಕಂದರೆ ಆಚಾರ ವಿಚಾರ ಹೀನ ಮನುಷ್ಯನಿಗೆ ಜ್ಞಾನಿಗಳಾದ ಸಜ್ಜನರು ನಾಸ್ತಿಕರೆಂದು ಹೇಳುತ್ತಾರೆ. ಒಂದು ವೇಳೆ ಈ ರೀತಿ ನಾಸ್ತಿಕರು ಆತ್ಮನ ಅಸ್ತಿತ್ವವನ್ನು ಮತ್ತು ಆವಾಗ ಮನವನ್ನು ಮತ್ತು ಪರಲೋಕವನ್ನು ಅಸ್ತಿತ್ವ ರೂಪದಲ್ಲಿ (ಇದೇ ಎಂದು) ಮಾನಿಸದಿದ್ದರೆ, ಅವರಿಗೆ ತಮ್ಮ ಇಚ್ಛೆಯ ಪ್ರಕಾರ ಸಂಸಾರಿಕ ಸುಖ ಸಾಮಗ್ರಿಗಳು ಎಲ್ಲಿಂದ ಪ್ರಾಪ್ತವಾಗುವವು; ಅರ್ಥಾತ್ ಅವರಿಗೆ ಪ್ರಾಪ್ತವಾಗುವದೇ ಇಲ್ಲ. ಯಾಕೆಂದರೆ ಇಚ್ಛೆಯ ಪೂರ್ಣತೆಯು ಎಂದಿಗೂ ಆಗುವದಿಲ್ಲ. ಯಾವ ರೀತಿ ಅಗ್ನಿಯಲ್ಲಿ ಕಟ್ಟಿಗೆಗಳನ್ನು ಹಾಕುತ್ತ ಹೋದಂತೆಯೇ ಅವು ಸುಟ್ಟು ಹೋಗುವದಲ್ಲದೆ ಮತ್ತಿಷ್ಟು ಅಗ್ನಿ ಬೆಳೆಯುತ್ತಲೇ ಹೋಗ ಹತ್ತುತ್ತದೆ. ಅದೇ ರೀತಿ ವಿಷಯ ವಾಸನೆಯಲ್ಲಿ ಎಷ್ಟು, ಇಂದ್ರಿಯಗಳ ವಾಸನೆಯು ಬೆಳೆಯುತ್ತ ಹೋಗುವದೋ ಅಷ್ಟಷ್ಟೇ ಅವುಗಳ ಇಚ್ಛೆಯು ಮತ್ತಿಷ್ಟು ಅಧಿಕವಾಗಿ ಭೋಗದ ಆಕಾಂಕ್ಷೆಯು ಬೆಳೆಯುತ್ತಲೇ ಹೋಗುವದು. ಇಚ್ಛೆಯು ಪೂರ್ತಿ ಯಾಗುವದಿಲ್ಲ. ಹ್ಯಾಗೆ ಖಜ್ಜಿಯಾಗಿದ್ದ ಮನುಷ್ಯನು ತನ್ನ ತಿನಿಸಿಕೆಗಾಗಿ ಕೆರೆದು ಕೊಳ್ಳುವದರಿಂದ

ಒಂದು ಕ್ಷಣ ಮಾತ್ರ ಸುಖವಾದಂತೆ ತೋರುವದು, ಆದರೆ ಅದರಿಂದ ಅಂತ್ಯ ದಲ್ಲಿ ಮತ್ತಿಷ್ಟು ದುಃಖವೇ ಹೆಚ್ಚಾಗುವದು. ಅದೇ ರೀತಿ ಇಂದ್ರಿ ಜನಿತವಾದ ಸುಖವು ಮೊದಲು ಮೊದಲು ಒಳ್ಳೆದೆಂದು ಅನಿಸುತ್ತದೆ. ಆ ಮೇಲೆ ಅದು ಮುಂದೆ ಬೆಳೆದು ಮನುಷ್ಯನ ವಿವೇಕವನ್ನು ಹೀನ ಮಾಡಿ ಭ್ರಾಂತಿಯನ್ನುಂಟು ಮಾಡಿ ಮುಂದೆ ಜನ್ಮ ಜರಾ ಮರಣಕ್ಕೆ ಕಾರಣವಾಗಿ ಪಂಚ ಪರಿವರ್ತನೆ ಯೆಂಬ ಸಂಸಾರದ ದುಃಖಕ್ಕೆ ಕಾರಣವಾಗುವದು. ಇದರ ಸಲುವಾಗಿ ಎಲ್ಲಿಯ ವರೆಗೆ ಮನುಷ್ಯನಿಗೆ ಇಂದ್ರಿಯ ಸಂಯಮ ಇಲ್ಲವೋ ಅಲ್ಲಿಯ ವರೆಗೆ ಮನು ಷ್ಯನ ದೇಹವು ನಿರೋಗವಾಗಿರುವದಿಲ್ಲ. ಈಗಿನ ಕಾಲದ ಮನುಷ್ಯರಲ್ಲಿ ಸಂಯ ಮವು ಇಲ್ಲದಿರುವದರಿಂದ ಎಷ್ಟೋ ರೋಗದಿಂದ ಮನುಷ್ಯರು ಉಷ್ಣ, ಪಾಯರಿ, ಮಧುಮೆಯ, ಮೊದಲಾದ ಅನೇಕ ರೋಗಗಳಿಂದ ಪೀಡಿತವಾಗಿರು ವದನ್ನು ನೋಡುತಿದ್ದೇವೆ. ಅತೀ ವಿಷಯ ಭೋಗಿಗಳಾದ ಮನುಷ್ಯರ ಕೈಕಾಲುಗಳು ಶಿಥಿಲವಾಗುತ್ತವೆ. ಕಣ್ಣುಗಳು ಒಳಗೆ ಸೇರಹತ್ತುತ್ತವೆ. ದೃಷ್ಟಿ ಮಂದವಾಗ ಹತ್ತುತ್ತದೆ, ಮೂಗಿನಿಂದ ಹೆಚ್ಚಾಗಿ ಸುಂಬಳು ಸೋರ ಹತ್ತು ತ್ತದೆ. ಮುಖದಿಂದ ರೊಜ್ಜು ಬೀಳ ಹತ್ತುತ್ತದೆ. ದೇಹದ ಎಲ್ಲ ಮೂಳೆಗಳು ಮತ್ತು ಬರ್ಕಿಗಳು ನೊಯುತ್ತವೆ; ರಕ್ತ ಮಾಂಸ ವೀರ್ಯ ಮೊದಲಾದವು ಎಲ್ಲ ಒಣಗಿ ಹೋಗ ಹತ್ತುತ್ತವೆ; ಜಗತ್ತಿನಲ್ಲಿರುವ ಅವನ ಪ್ರತಿಷ್ಠೆ ಅಥವಾ ಖ್ಯಾತಿಯು ಇಲ್ಲದಾಗಹತ್ತುತ್ತಿದೆ; ಎಲ್ಲ ಜನರು ಅವನಿಗೆ ಹೀಯಾಳಿಸುತ್ತಾರೆ; ಕಡೆಯಲ್ಲಿ ವಿಷಯ ವಾಸನೆಯ ಭ್ರಾಂತಿಯಲ್ಲಿ ಭ್ರಮಣೆ ಮಾಡಿ ಭಿಕ್ಷೆ ಬೇಡು ತ್ತಾನೆ; ಆದರೂ ಅವನಿಗೆ ಇಷ್ಟು ಆಗಿ ತಿನ್ನಲಿಕ್ಕೆ ಒಂದು ಕೊಳಿವೆ ಧಾನ್ಯವೂ ಸಿಕ್ಕುವದಿಲ್ಲ; ಕಡೆಗೆ ಅವನಿಗೆ ಅತೀ ದುಃಖವಾಗುತ್ತದೆ; ಆದರೆ ಅವನಿಗೆ ಸಂಯಮ ಧಾರಣೆ ಮಾಡುವ ಭಾವನೆ ಆಗುವದಿಲ್ಲ-ವಿಷಯ ಕಷಾಯದಲ್ಲಿ ಲೀನವಾದ ಒಂದೊಂದು ಜೀವಗಳ ಗತಿ ಏನೇನು ಆಗುವದೆಂಬುದನ್ನು ಹೇಳಿ ದ್ದಾರೆ, ನೋಡಿರಿ.—

ಅಲಿಮತಂಗ ಮೃಗಸಲಭ ಮೀನ ಹಾಥಿ ವಿಷಯ ಯಿಕಯಿಕಮೆ
ಮರೆತೆಹೈ ॥
ನತಿಜಾ ಕ್ಯಾನ ಪಾವೆ ವಿಷಯ ಪಾಂಚೊ ಜೋಕತೆ ಹೈ ॥ ?

ಭ್ರಮರವು ನಾಶಿಕ ಇಂದ್ರಿಯ ವಂಶದಿಂವ ಮೀನವು ರಸನೇಂದ್ರಿಯ ವಂಶದಿಂದ, ಆನೆಯು ಮೈಥುನ ವಶದಿಂದ, ಚಿಗರೆಯು ಕರ್ಣೆಂದ್ರಿಯ ವಶದಿಂದ

ಪತಂಗವು ಚಕ್ಷು ಇಂದ್ರಿಯ ವಶದಿಂದ ಐದು ಒಂದೊಂದು ಇಂದ್ರಿಯಗಳ ಆಧೀನದಿಂದ ತಮ್ಮ ಪ್ರಾಣವನ್ನು ಕಳಕೊಂಡಿರುತ್ತವೆ. ಆದರೆ ಐದೂ ಇಂದ್ರಿಯಗಳ ಆಧಿನವಾದ ಮನುಷ್ಯನ ಗತಿ ಏನು ಇದು ಭಗವಂತನಿಗೇ ಗೊತ್ತು.

ಹಿಂದಿಯಲ್ಲಿ ಒಬ್ಬ ಕವಿಯು ಹೇಳುತ್ತಾನೆ:—

ರಾಗ ಉದೆ ಜಗ ಅಂಧಭಯೊ ಸಹಜಹಿ ಸಬಲೋಗನಲಾಜಗ ಮಾಯಿ।
ಸೀಖವಿನಾಸಬ ಸೀಖತಹೈ ವಿಷಪಾನಕೆ ಸೇವನಕಿ ಚತುರಾಯಿ।
ತಾಪ ಔರ ರಚಿ ರಸಕಾವ್ಯ ಕಹಾ ಕಹಿಯೆ ತಿನಕೀ ನಿಠುರಾಯಿ।
ಅಂಧ ಅನು ಸೂಝನಕಿ ಅಂಖಯಾನಮೆಹೈ ರಜರಾಮುಡುರಾಯೀ॥

ರಾಗ ಉದಯದಿಂದ ಇಂದ್ರಿ ವಿಷಯ ವಿಷಯಗಳಲ್ಲಿ ಮಧಾಂಧವಾಗಿ ಈ ಜೀವನು ಸಹಜ ಸ್ವಾಭಾವಿಕವಾಗಿರುವ ತನ್ನ ಗುಣಗಳನ್ನು ಲೌಕಿಕ ಖ್ಯಾತಿ ಲಾಭಗಳ ಸಲುವಾಗಿ ಮನುಷ್ಯ ಪರ್ಯಾಯದಲ್ಲಿ ಪಾಲನೆ ಮಾಡತಕ್ಕಂಥ ಕರ್ತವ್ಯ ಕರ್ಮಗಳನ್ನೂ ಹೋಗಲಾಡಿಸಿ, ಮರೆತು ಕಲಿಯದೇ ಬಾರದ ಕಲೆಗಳನ್ನು ಕಲಿತು ಅರ್ಥಾತ್ ನಿಂದ್ಯ ಕೃತಿಗಳನ್ನು ಕಲಿತು ತನ್ನ ಚಾತುರ್ಯವನ್ನು ಜಗತ್ತಿನಲ್ಲಿ ಹರಡಿಸಿ ನಿತ್ಯವೂ ಪಂಚೇಂದ್ರಿಯಗಳಿಂದ ಜನಿತವಾದ ವಿಷಯ ರೂಪಿ ವಿಷಸೇವನೆಯನ್ನು ಮಾಡಿ ಅದರ ಮೇಲೆ ಈ ವಿಷಯೇರಿದ ಮೂಢನು ಪುನಃ ರಾಮಚಾರಿತ ಕಾವ್ಯದ ರಚನೆಯನ್ನು ಮಾಡುತ್ತಾನೆ. ಇದೇನು ಆಶ್ಚರ್ಯ ?

ಈ ವಿಷಯ ಕಷಾಯದ ನಿಮಿತ್ಯದಿಂದಲೇ ಈ ಜೀವನು ನಿಂದ್ಯವಾದ ಮಹಾ ನರಕಾದಿ ಗತಿಗಳಲ್ಲಿ ಭ್ರಮಣ ಮಾಡುತ್ತಿದ್ದಾನೆ. ಆದ್ದರಿಂದ ಇವನು ಮಹಾ ದುಃಖವನ್ನು ಅನುಭವಿಸುತಿದ್ದಾನೆಂದು ಭಾವವು.

ಈ ಮನುಷ್ಯಪರ್ಯಾಯ ಸಿಕ್ಕುವದು ಅತ್ಯಂತ ದುರ್ಲಭವಾಗಿದೆ. ಎಷ್ಟೋ ಯೋನಿಗಳನ್ನು ಭೋಗಿಸಿ ತೀರಲು ಏನೋ ತನ್ನ ಪೂರ್ವಾರ್ಜಿತ ಕಿಂಚಿತ ಪುಣ್ಯೋದಯದಿಂದ ಈ ಜೀವನಿಗೆ ಈ ಮಾನವ ಜನ್ಮವು ಲಭಿಸಿದೆ, ಮತ್ತಿದು ಒಂದು ಮಹಾನ ಚಿಂತಾಮಣಿ ರತ್ನದೋಪಾದಿಯಲ್ಲಿದ್ದು ಇಚ್ಛಿತ ಪದಾರ್ಥಗಳನ್ನು ಕೊಡಲಿಕ್ಕೆ ಇದರಲ್ಲಿ ಸಾಮರ್ಥ್ಯವಿದೆ. ಇದರ ಬಗ್ಗೆ ಆಚಾರ್ಯರು ಈ ರೀತಿ ಹೇಳಿದ್ದಾರೆ.

ಮನುಷ್ಯಂ ವರವಶ ಜನ್ಮವಿಭವೋ ದೀರ್ಘಾಯುರಾರೋಗ್ಯತಾ ।
ಸನ್ಮಿತ್ರ ಸುಸುತ್ ಸತಿ ಪ್ರಿಯತಮಾ ಭಕ್ತಿಶ್ಚ ತೀರ್ಥಂಕರೆ ॥
ವಿದ್ವತ್ವಂ ಸುಜನತ್ವ ಮಿಂದ್ರಿಯಜಯಃ ಸತ್ಪಾತ್ರ ದಾನೇರತಿಃ ।
ತೆ ಪುಣ್ಯೇನ ವಿನಾ ಚತುರ್ದಶ ಗುಣಾಃ ಸಂಸಾರಿಣಾ ದುರ್ಲಭಃ ॥

ಮನುಷ್ಯಪರ್ಯಾಯವೂ ಉತ್ತಮ ಉತ್ತಮ ಕುಲದಲ್ಲಿ ಜನ್ಮವೂ ಹೆಚ್ಚಾದ ಸಂಪತ್ತಿಯೂ ದೀರ್ಘಕಾಲದ ವರೆಗೆ ಬಾಳುವ ಆರೋಗ್ಯ ಶರೀರವೂ, ಉತ್ತಮ ಸುಪುತ್ರ ಸಂತಾನಗಳೂ ಉತ್ತಮ ಸ್ತ್ರೀಯರೂ, ಭಗವಂತನ ಪೂಜೆಯನ್ನು ತನ್ನ ಕೈಮುಟ್ಟ ಮಾಡಬೇಕೆಂಬ ಭಾವನೆಯೂ, ಸಾಧುಸಜ್ಜನರ ಸಂಗತಿಯೂ ಅವರ ಸಂಗತಿಯಿಂದ ಪ್ರಾಪ್ತವಾದ ಉಪದೇಶದ ಗ್ರಹಣವೂ ವಿಷಯ ಕಷಾಯಗಳನ್ನು ತಡೆಯುವ ಭಾವನೆಯೂ, ಸತ್ಪಾತ್ರದಲ್ಲಿ ದಾನ ಕೊಡುವ ಭಾಗ್ಯವೂ, ಈ ಹದಿನಾಲ್ಕು ಮಾತು ಮಾನವ ಜೀವನೊಳಗೆ ಉತ್ತರೋತ್ತರ ಲಭ್ಯವಾಗುವದು ಅತ್ಯಂತ ದುರ್ಲಭವಾಗಿದೆ. ಈ ವಿಷಯಗಳನ್ನು ಎಲ್ಲ ಮಾನವ ಪ್ರಾಣಿಗಳು ತಿಳಿದುಕೊಂಡು ಈಗ ನಮಗೆ ಪ್ರಾಪ್ತವಾದ ಮಾನವ ರತ್ನದ ಉಪಯೋಗವನ್ನು ನಮ್ಮ ಆತ್ಮ ಸಾಧನೆಗೆಂದು ಮಾಡಿಕೊಂಡರೆ ಅನಾದಿಕಾಲದಿಂದ ನಮ್ಮ ಆತ್ಮನ ಜೊತೆ ಬೆನ್ನಟ್ಟಿಬರುವ ಕರ್ಮ ಶತ್ರುಗಳು ತೊಳಿಹೋಗಿ ನಮ್ಮ ಆತ್ಮನು ಕಡೆಯವರೆಗೆ ಅತ್ಯಂತ ಸುಖಿಯಾಗುವನು.

ಮನುಷ್ಯ ಭವದ ದುರ್ಲಭತೆ

ಅತ್ಯಂತ ದುರ್ಲಭೇಷ್ವೆ ದೈವಾ ಲಬ್ಧೆಷ್ವಪಿ ಕ್ವಚಿತ್ ।
ಪ್ರಮಾದಾತ್ ಪ್ರಚ್ಯವಂತೇಽತ್ರ ಕೆಚಿತ್ಕಾ ಮಾರ್ಥಲಾಲಸಃ ॥

ಒಂದು ವೇಳೆ ಮೇಲೆ ಹೇಳಿದ ಸಾಮಗ್ರಿಗಳು ತನಗೆ ಪ್ರಾಪ್ತವಾಗುವದು ಅತ್ಯಂತ ದುರ್ಲಭ ಇವೆ, ಆದರೂ ಒಂದು ವೇಳೆ ದೈವಯೋಗದಿಂದ ಪ್ರಾಪ್ತವಾದರೂ ಸಂಸಾರಿ ಜೀವಗಳು ಪ್ರಮಾದಕ್ಕೆ ವಶೀಭೂತರಾಗಿ ಅರ್ಥಾತ್ ಕಾಮ ಅರ್ಥಗಳಲ್ಲಿ ಮಗ್ನರಾಗಿ ಸಮ್ಯಗ್ದರ್ಶನದಿಂದ ಭ್ರಷ್ಟವಾಗುತ್ತಾರೆ. ತಾತ್ಪರ್ಯವೇನಂದರೆ ಈ ಜೀವನು ಇಂದ್ರಿಯ ವಿಷಯ ಕಷಾಯಿಗಳಲ್ಲಿ ಆಶಕ್ತನಾಗಿ ಇಂದ್ರಿಯ ಸಂಯಮ ಮತ್ತು ಪ್ರಾಣಿಸಂಯಮದ ರಕ್ಷಣ ಮಾಡದೆ ಅನೇಕ ಜೀವ ಘಾತಮಾಡುವ ಭಾವನೆಗಳನ್ನು ಉದ್ಭವಿಸಿ ಪಶುಗಳ ಆಚರಣೆಯಂತೆ ಆಚರಿಸಿ ದೀರ್ಘಸಂಸಾರಿಯಾಗಿ ಪಾಪದೊಳಗೆ ದುಃಖದಿಂದ ಭ್ರಮಿಸುವನು.

ಸುಪ್ರಾಪಂ ನ ಪುನಃ ಪುಂಸಾಂ ಭೋಧಿರತ್ನಂ ಭವಾರ್ಣವೆ।
ಹಸ್ತಾ ದಭ್ರಷ್ಟಂ ಯಥಾರತ್ನಂ ಮಹಾಮೂಲ್ಯಂ ಮಹಾರ್ಣವೇಂ॥

ಈ ಭೋಧಿಯೆಂಬ ಸಮ್ಯಗ್ದರ್ಶನ ಜ್ಞಾನ ಚ್ಯಾರಿತ್ರರೂಪಾದ ರತ್ನತ್ರಯ ಇವೇ ಸಂಸಾರರೂಪಿ ಸಮುದ್ರಲ್ಲಿ ಪ್ರಾಪ್ತವಾಗುವದು ಅತ್ಯಂತ ದುರ್ಲಭ ವಿದೆ. ಆದರೆ ಇವು ಸುಲಭವಲ್ಲ ಆದ್ದರಿಂದ ಇವು ಅತ್ಯಂತ ದುರ್ಲಭವಾಗಿರುತ್ತವೆ.

ಈ ಮಾನವ ಜೀವನು ಇವುಗಳನ್ನು ಪ್ರಾಪ್ತಮಾಡಿಕೊಂಡಿದ್ದರೂ ಸಮ್ಯಕ್ತ್ವವನ್ನು ಮಾಡಿಕೊಳ್ಳದೆ ಅಥವಾ ತನ್ನ ಆತ್ಮಕಲ್ಯಾಣದ ಮಾರ್ಗವನ್ನು ಅರಿಯದೆ ಇರುವದು ಒಂದು ಸಮುದ್ರದಲ್ಲಿ ತನ್ನ ಕೈಯಲ್ಲಿದ್ದ ರತ್ನವನ್ನು ಸಮುದ್ರದಲ್ಲಿ ಇವನು ಎಸೆದುಬಿಟ್ಟಂತೆಯೇ ಅವನು ಕಳಕೊಂಡು ಕೂಡ್ರುತ್ತಾನೆ. ಅವನ ಕೈಯಲ್ಲಿ ಇಟ್ಟಿರ್ದ ರತ್ನವನ್ನು ಸಮುದ್ರದಲ್ಲಿ ಎಸೆದ ಮೇಲೆ ಅದು ಪುನಃ ಸಿಕ್ಕುವದು ಹ್ಯಾಗೆ ದುರ್ಲಭವದೆಯೋ ಅದರಂತೆಯೇ

ಸುಲಭಮಿಹ ಸಮಸ್ತಂ ವಸ್ತು ಜಾತಂ ಜಗತ್ಯ।
ಮುರಗ ಸುರನರೇಂದ್ರೈಃ ಪ್ರಾರ್ಥಿತಂ ಚಾಧಿ ಪತ್ಯಮ್॥
ಕುಲಬಲ ಸುಭಗ ತ್ವೋದ್ದಾಮರಾದಿ ಚಾನ್ಯತ್।
ಕಿಮುತ ತದಿದ ಮೇಕಂ ದುರ್ಲಭಂ ಭೋಧಿರತ್ನಂ॥

ಭಾವಾರ್ಥ:—ಈ ಜಗತ್ತಿನಲ್ಲಿ ಸಮಸ್ತ ದ್ರವ್ಯಗಳ ಸಮೂಹ ಸಿಕ್ಕುವದು ದುರ್ಲಭವಿದೆ. ಮತ್ತು ಧರಣೇಂದ್ರ, ನರೇಂದ್ರ, ಸುರೇಂದ್ರರಿಂದ ಪ್ರಾರ್ಥಿಸಲು ಯೋಗ್ಯ ಅಧಿಪತ್ಯತ್ವವೂ ಸುಲಭವಿದೆ. ಯಾಕಂದರೆ ಇವೆಲ್ಲವೂ ಶುಭಾಶುಭ ಕರ್ಮದ ಉದಯದಿಂದ ಸಿಕ್ಕುತ್ತವೆ. ಮತ್ತು ಕುಲ, ಬಲ, ಸುಂದರತೆಯು ಸುಂದರ ಸ್ತ್ರೀಯರ ರೂಪ ಮೊದಲಾದವು ಸಿಗುವದು ಸುಲಭವಿದೆ. ಆದರೆ ಜಗತ್ತಿನಲ್ಲಿ ಅತ್ಯಂತ ದುರ್ಲಭವಾದ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಮತ್ತು ಸಮ್ಯಕ್ಚ್ಯಾರಿತ್ರವೆಂಬ ಬೋಧಿರತ್ನಗಳು ಪ್ರಾಪ್ತವಾಗುವದು ಅತ್ಯಂತ ದುರ್ಲಭವಿದೆ. ಈ ರತ್ನವು ಪ್ರಾಪ್ತವಾಗಬೇಕಾದರೆ ಮನುಷ್ಯ ಸಂಯಮವೇ ಬೇಕು. ಸಂಯಮವಿಲ್ಲದ ಮನುಷ್ಯನು ಪಶುವಿನ ಸಮಾನವೆಂದು ತಿಳಿಯಬೇಕು.

ಇಂಥ ದುರ್ಲಭವಾದ ಮನುಷ್ಯ ಜನ್ಮವನ್ನು ತಾಳಿ ಈ ಮನುಷ್ಯನು ತಕ್ಕಮಟ್ಟಿಗೆ ತನ್ನ ಶಕ್ತಿಗೆ ಅನುಕೂಲವಾಗಿಯಾದರೂ ಸಂಯಮವನ್ನು

ತಾಳದಿದ್ದರೆ ಅವನು ಮನುಷ್ಯ ಜನ್ಮವನ್ನು ತಾಳಿದರೂ ಮನುಷ್ಯನೇ? ಮನುಷ್ಯನಲ್ಲ. ಪಶುವಿನ ಆಚರಣೆಯನ್ನು ಮಾಡುತ್ತಾನೆಂದು ತಿಳಿಯಬೇಕು.

ಈ ಪವಿತ್ರವಾದ ಭಾರತವು ಒಂದು ಪವಿತ್ರವಾದ ಭೂಮಿಯಿದೆ. ಈ ಭೂಮಿಯಲ್ಲಿ ಮಹಾನ್ ಮಹಾನ್ ಪವಿತ್ರಪುರುಷರು ಜನ್ಮ ತಾಳಿ ಸಂಯಮ ಭಾರವನ್ನು ತಾಳಿ ಈ ಭೂಮಿಯನ್ನು ಪವಿತ್ರಗೊಳಿಸಿದ್ದಾರೆ. ಮತ್ತು ಸಂಯಮದ ಪ್ರಭಾವದಿಂದ ತಮ್ಮ ಕೀರ್ತಿಯನ್ನೂ ತಮ್ಮ ಪವಿತ್ರ ಜೀವನವನ್ನೂ ಪವಿತ್ರಗೊಳಿಸಿ ಸಂಯಮ ಮಾರ್ಗದ ಪರಿಪಾಟಿಯನ್ನು ಈಗಿನ ಕಾಲದ ಮಾನವರಿಗೆ ಇತಿಹಾಸರೂಪದಲ್ಲಿ ಸುರಕ್ಷಿತವಾಗಿ ಇಟ್ಟಿದ್ದಾರೆ. ಆದರೆ ನಾವು ಅದನ್ನು ನಮ್ಮ ಮಾನವ ಪರ್ಯಾಯದ ಸಾರ್ಥಕ್ಕಾಗಿ ಅದನ್ನು ಉಪಯೋಗಿಸದೆ ಆ ಮಾನುಭಾವ ಮಹಾತ್ಮಾ ಪುರುಷರ ಸನ್ಮಾರ್ಗದ ವಿಡಂಬನೆಯನ್ನು ಮಾಡಿ ಈ ಪವಿತ್ರ ಭೂಮಿಯನ್ನು ಅಪವಿತ್ರ ಮಾಡುತ್ತೇವೆಂಬ ಭಾವವು--

ದುಷ್ಟ ಮನೋವೃತ್ತಿಯನ್ನು ಬೆಳೆಸುವ ಸಂಸ್ಕಾರಗಳು ಅವರಲ್ಲಿ ಬೆಳೆಯುತ್ತಲೆ ನಡೆದಿವೆ. ಸಂಯಮವನ್ನು ಕೆಡಿಸಿ ಅ-ಸಂಯಮಭಾವನೆ ಉಂಟು ಮಾಡುವ ಸಂಸ್ಕಾರಗಳು ಸಾಲೆಯ ಶಿಕ್ಷಕರಲ್ಲಿಯೇ ಪ್ರಚಲಿತವಾಗಿವೆ. ಹ್ಯಾಗಂದರೆ ಮೊದಲು ಶಿಕ್ಷಕರಲ್ಲಿ ಸಂಯಮ ಭಾವನೆಯ ಅಭಾವ ವಿರುವದರಿಂದ ಅದರಲ್ಲಿಯೇ ನಾನಾ ವ್ಯಸನಗಳು ಇರುವದರಿಂದ ವಿದ್ಯಾರ್ಥಿಗಳಲ್ಲಿ ಸಹಜಿಕವಾಗಿ ಶಿಕ್ಷಕರ ಪ್ರಭಾವ ಬೀಳುತ್ತದೆ. ಬೀಡಿ, ಸಿಗಾರೇಟು, ಚಾಹಾ, ಬೈತಲ ಕೂದಲ ಕಾಯುವದು, ವಿಚಿತ್ರವಾದ ಉಡುಪುಗಳು ಮತ್ತು ಅನೇಕ ಚಿಕ್ಕ ಪುಟ್ಟ ವ್ಯಸನಗಳು, ಶಿಕ್ಷಕರಲ್ಲಿಇದ್ದೇ ಇರುತ್ತವೆ. ಆದರೆ ಮೊದಲಿನ ಕಾಲದಲ್ಲಿ ಶಿಕ್ಷಕರು ಒಂದು ಚಿಕ್ಕ ಪುಟ್ಟ ವ್ಯಸನಗಳಿದ್ದರೂ ಅವು ಕೇವಲ ಪ್ರಚಾರವಾಗದಂತೆ ಮನೆಗಳಲ್ಲಿಯೇ ಪ್ರಚಲಿತವಾಗಿರುತಿದ್ದವು. ಸಾಲೆಯಲ್ಲಿ ಈಗಿನಂತೆ ಆಡಂಬರವಾಗಿ ಇಂಥ ಪರಿಪಾಟಿಗಳು ಕಂಡು ಬರುತ್ತಿದ್ದಿಲ್ಲ; ಮತ್ತು ಇಂಥ ವ್ಯಸನಗಳು ವಿದ್ಯಾರ್ಥಿಗಳಲ್ಲಿ ಕಂಡು ಬಂದರೆ, ಶಿಕ್ಷಕನ ದಂಡನೆಗೆ ವಿದ್ಯಾರ್ಥಿಗಳು ಪಾತ್ರವಾಗಬೇಕಾಗುತ್ತಿತ್ತು. ಆದ್ದರಿಂದ ಇಂಥ ವ್ಯಸನದ ಸಂಸ್ಕಾರಗಳು ವಿದ್ಯಾರ್ಥಿಗಳಲ್ಲಿ ಇಲ್ಲದಿದ್ದರಿಂದ ನಿರ್ವ್ಯಸನಿಗಳಾಗಿ ಪಾಪಕ್ಕೆ ಹೆದರುತ್ತಿದ್ದರು. ಅವರ ಶಿಕ್ಷಣವು ಮತ್ತು ಸಂಯಮವು ಇವೆರಡೂ ವಿದ್ಯಾರ್ಥಿಗಳಲ್ಲಿ ನೆಲೆಸುತ್ತಿದ್ದವು.

ಈ ಕಾಲದಲ್ಲಿ ವಿದ್ಯಾರ್ಥಿಗಳಲ್ಲಿಯೂ ಶಿಕ್ಷಕರಲ್ಲಿಯೂ ಸಮಾನವಾಗಿ ಈ ಮೇಲ್ಕಂಡ ವಿಷಯಗಳು ಕಂಡು ಬರುತ್ತವೆ. ನಾಟಕ, ಸಿನೇಮಾ ಮೊದಲಾದ ವ್ಯಸನಗಳು ಸದ್ಯಕ್ಕೆ ಎಲ್ಲ ಜನರಲ್ಲಿ ಇದ್ದೇ ಇರುತ್ತವೆ. ಸಿನೇಮಾದಲ್ಲಿ ಅನೇಕ ವ್ಯಭಿಚಾರಿ ಹೆಂಗಸರ ಹಾವಭಾವ ಚಿತ್ರದೃಶ್ಯವನ್ನು ನೋಡಿದ ಕೂಡಲೆಯೇ ತರುಣ ತರುಣಿಯರಲ್ಲಿ ಹೀನ ಪರಣತಿಯಲ್ಲಿ ಪರಿಣಾಮದ ಬದಲಾವಣೆಯಾಗಿ ಅವರ ಮನಸ್ಸಿನ ಒಳ್ಳೆಸಂಸ್ಕಾರಗಳು ಇದ್ದರು ಕೂಡ ಹಾಳಾಗಿ ಹೋಗಿ ಸೀಘ್ರದಲ್ಲಿಯೇ ಪಾಪವಾಸನೆಯ ಸಂಸ್ಕಾರಗಳು ಬಿದ್ದು ಬಿಡುತ್ತವೆ. ಈ ನಿಂದ್ಯವಾದ ಸಿನೇಮಾದ ಸಂಸ್ಕಾರಗಳು ಬಿಟ್ಟು ಹೋಗುವದು ತರುಣ–ತರುಣಿಯರ ಹೃದಯದಿಂದ ಬಿಟ್ಟು ಹೋಗುವದು. ಈ ಕಾಲದಲ್ಲಿ ದುಃಸಾಧ್ಯವಾಗಿದೆ. ಇದೇ ಭಾರತವಾಸಿ ತರುಣ–ತರುಣಿಯರ ಉತ್ತಮ ಸಂಯಮ ಭಾವನೆಯನ್ನು ನಾಶಗೊಳಿಸಲು ಕಾರಣವಾಗಿವೆ. ಹೆಣ್ಣು ಮಕ್ಕಳು ಮತು ಗಂಡು ಮಕ್ಕಳನ್ನು ಒಟ್ಟಾಗಿ ಸೇರಿಸಿ ಶಾಲೆಯಲ್ಲಿ ಶಿಕ್ಷಣ ಕೊಡುವ ಪ್ರಣಾಲಿಯಿಂದ ಚಿಕ್ಕಂದಿನಲ್ಲಿಯೇ ಅವರಲ್ಲಿ ವಿಕಾರದ ಪ್ರವೃತ್ತಿಯು ಆಗಿ ಮುಂದೆ ಮುಂದೆ ತಮ್ಮಲ್ಲಿ ಮನಃಸ್ವಾತ್ರ ಬೀರುವ ಯೋಗ್ಯತೆಯನ್ನು ನಾಶಗೊಳಿಸಲು ಕಾರಣವಾಗುತ್ತದೆ. ಆ ವಿಕಾರದ ಭಾವಗಳನ್ನು ಉತ್ಪನ್ನ ಮಾಡುವದಕ್ಕೆ ಸಿಕ್ಕಂತೆ ಆಹಾರ ವಿಹಾರ ಮೊದಲಾದವುಗಳಿಗೆ ಕಾರಣಗಳು ಖಾನಾವಳಿ ಹೊಟೆಲಾದಿಗಳಿವೆ.

ಮೊದಲಿನ ಆ ಭೂಮಿಯ ಪದ್ಧತಿಯು ಸಂಯಮದ ಸಂಯಮಧಾರಿಯಾದ ಮಾನವ ಮನುಷ್ಯನ ಕೀರ್ತಿಯು ಎಲ್ಲ ಕಡೆಯಲ್ಲಿಯೂ ಹಬ್ಬುತ್ತದೆ. ಭೋಗ–ವಿಲಾಸಗಳಲ್ಲಿಯೂ, ಪಂಚೇಂದ್ರಿಯ ವಿಷಯಗಳ ಭೋಗೋಪಭೋಗಗಳಲ್ಲಿಯೂ ಸಂಯಮ ಭಾವದ ಅವಶ್ಯಕತೆ ಇದೆ.

ಭಾರತೀಯ ಸರಕಾರದವರು ಎಲ್ಲ ವಸ್ತುಗಳಲ್ಲಿ ಕಂಟ್ರೋಲವನ್ನು ಇಟ್ಟರು. ಆದರೆ, ಪಂಚೇಂದ್ರಿಯ ವಿಷಯಗಳಲ್ಲಿ ಕಂಟ್ರೋಲದ ಪ್ರತಿಬಂಧವನ್ನು ಮಾಡಲಿಲ್ಲ. ನಮ್ಮ ಇಂದ್ರಿಯ ಗ್ರಾಮಗಳಲ್ಲಿ ನಾವು ನಮ್ಮ ಶಕ್ತಿಯನ್ನರಿದು ಇಂದ್ರಿಯ ವಿಷಯಗಳನ್ನು ಮರ್ಯಾದೆ ಮಾಡಿಕೊಂಡರೆ ಎಷ್ಟೋ ನಮ್ಮ ವಿಷಯ ವಾಸನೆಗಳ ಶಕ್ತಿಯು ಮಂದವಾಗುತ್ತದೆ; ಅರ್ಥಾತ್ ಕಷಾಯಗಳ ದರ್ಸನಾಶವಾಗುತ್ತದೆ. ಮೊದಲಿನ ಸ್ತ್ರೀ–ಪುರುಷರು ಗ್ರಹಸ್ಥಾಶ್ರಮದಲ್ಲಿದ್ದು ಸಂಯಮದ ಅಭ್ಯಾಸಿಗಳಾಗಿದ್ದರಿಂದ, ಅವರ ಸಂಯಮದ

ಕರುಣೆಯಿಂದ ಅವರಿಂದ ಜನಿಸಿದ ಸಂತಾನಗಳಲ್ಲಿಯೂ ಅದೇ ಸಂಸ್ಕಾರ ಕಂಡುಬರುತ್ತಿದ್ದವು. ಮತ್ತು ಆ ಸಂಸ್ಕಾರದಿಂದ ಮುಂದೆ ಸಂತಾನವುದೊಡ್ಡ ದೊಡ್ಡ ಸಂಯಮ ಭಾರವನ್ನು ಹೊತ್ತು ಕರ್ಮಕ್ಷಯಮಾಡಿ ಮೋಕ್ಷ ಪ್ರಾಪ್ತಿ ಮಾಡಿಕೊಂಡವರಿದ್ದಾರೆ.

ಈ ಕಲಿ ಕಾಲದಲ್ಲಿ ಸಂಯಮದ ಅಭಾವವಾದದರಿಂದ ಹುಟ್ಟುವ ಸಂತಾನಗಳೂ ಕೂಡ ನಿರ್ಬಲವಾಗಿ ಹುಟ್ಟಹತ್ತಿರುತ್ತವೆ. ಚಿಕ್ಕಂದಿನಲ್ಲಿಯೇ ಕೆಟ್ಟ ವ್ಯಸನದಲ್ಲಿ ಬಿದ್ದು ಕುಲಾಚಾರ ಪರಿಪಾಟಿಯನ್ನೂ, ನೀತಿಯನ್ನೂ ಉತ್ತಮ ಅಹಿಂಸೆ ಅಥವಾ ಆತ್ಮ ಕಲ್ಯಾಣದ ಪವಿತ್ರ ಮಾರ್ಗನ್ನೂ ತಿರಸ್ಕರಿಸಿ ಪಾಪಾಚಾರದ ಪ್ರಚಾರವನ್ನೂ ಪಾಪಮಾರ್ಗ ಪ್ರಚಾರವನ್ನೂ ಹೆಚ್ಚಿಸಿ ಅಪ ಕೀರ್ತಿಯನ್ನು ಬೀರಿಕೊಳ್ಳುವವರಿದ್ದಾರೆ.

ಸಂತಾನದಲ್ಲಿ ಅಸಂಯಮನ ಭಾವನೆ ನೆಲಿಸುವದಕ್ಕೆ ಕಾರಣವಾವುದೆಂದರೆ, ತಾಯಿ–ತಂದೆಗಳಲ್ಲಿ ಸಂಯಮ ಭಾವನೆ ಇಲ್ಲದಿರುವದೊಂದೇ ಒಂದು ಕಾರಣವಿದೆ. ತಾಯಿ-ತಂದೆಗಳು ಅಸಂಯಮ ಉತ್ಪತ್ತಿಗೆ ಕಾರಣಗಳಾದ ವಸ್ತುಗಳ ಸೇವನೆಯ ವಸ್ತುಗಳ ಸಂಗ್ರಹ, ಅಂದರೆ ಮನೆಯೊಳಗೆ ಅಭಕ್ಷ್ಯಅತಿ ಮೋದಕ ಪದಾರ್ಥಗಳನ್ನು ಸೇವಿಸುಗದು ಅಥವಾ ಹೆಂಡ ಸೇವಿಸುವವರ ಸಂಗತಿ ಅವರ ಮನೆಯಲ್ಲಿ ಹೋಗು ಬರುವದು, ಊಟ ತಿನಸು ಮಾಡುವದು, ಇಂಥ ಸಂಸ್ಕಾರಗಳಿಂದ ಆ ಚಿಕ್ಕ ಚಿಕ್ಕ ಬಾಲಕರ ಮೃದು ಪರಿಣಾಮದಲ್ಲಿ ಕೆಟ್ಟ ಸಂಸ್ಕಾರಗಳ ಪರಿಪಾಟಿ ಬಿದ್ದು ಹೋಗುತ್ತದೆ.

ಮನೆಯೊಳಗೆ ತಾಯಿ–ತಂದೆಗಳಲ್ಲಿ ಧಾರ್ಮಿಕಸಂಸ್ಕಾರ ಇಲ್ಲದಾಗುವದರಿಂದ ಶಿಕ್ಷಣದಲ್ಲಿ ಧಾರ್ಮಿಕ ಸಂಸ್ಕಾರದ ಸಂಬಂಧವು ಬಿಟ್ಟುಹೋಗುವದರಿಂದ ಅಥವಾ ಲೌಕಿಕ ಶಿಕ್ಷಣದಲ್ಲಿ ಕೇವಲ ಹೊಟ್ಟೆ ಹೊದ್ದುಕೊಳ್ಳುವದೊಂದೇ ಶಿಕ್ಷಣ ಪ್ರಣಾಲಿಯು ಪ್ರಚಾಲಿತವಾಗುತ್ತಿರುವದರಿಂದ ಈ ಹೊಸ ಪೀಳಿಗೆ ಬಾಲಕರಲ್ಲಿ ಹೆಚ್ಚಾಗಿ ಬೆಳೆಯುತ್ತಿರುವದು. ಪಾಪರಕ್ಷಣೆಗಾಗಿ ತಾಯಿ–ತಂದೆಗಳು ಮರ್ಯಾದೆ ಪೂರ್ವಕವಾಗಿ ಹೆಣ್ಣು ಮಕ್ಕಳಿಗಾಗಿ ಶಿಕ್ಷಣದ ಪದ್ಧತಿ ಬೇರೆ ರೂಪದಿಂದ ಮನೆಯೊಳಗೆಯೇ ಶಿಕ್ಷಣ ಕೊಡುವ ಪದ್ಧತಿ ಇತ್ತು.

ಗಂಡು ಮಕ್ಕಳಿಗೆ ಯೋಗ್ಯ ಗುರುಗಳ ಸಾನಿಧ್ಯದಲ್ಲಿ ಇಡುವ ಪ್ರಣಾಲಿ ಇದ್ದಿತು. ಆದ್ದರಿಂದ ಸ್ತ್ರೀ ಮತ್ತು ಪುರುಷರಲ್ಲಿ ಯೋಗ್ಯ ಸಂಸ್ಕಾರಗಳು

ಬಿದ್ದದರಿಂದ ತಮ್ಮ ಸಂಯಮದೊಳಗೆ ಹಾನಿಯುಂಟಾಗದಂತೆ ಸ್ವತಃ ಯೋಗ್ಯ ಆಚರಣೆಗಳನ್ನು ಆಚರಿಸಿ ಇನ್ನೊಬ್ಬರನ್ನು ಯೋಗ್ಯ ಆಚರಣೆಗಳ ಕಡೆಗೆ ಹಚ್ಚುವ ಪ್ರಯತ್ನ ಮಾಡುತ್ತಿದ್ದರು. ಆದ್ದರಿಂದ ಈ ಆರ್ಯಭೂಮಿಯ ಶೋಭೆಯು ಇನ್ನೂವರೆಗೆ ಬೆಳೆಯುತ್ತ ಬಂತು. ಈಗ ಈ ಆಚರಣೆಯ ಪ್ರಣಾಲಿಯನ್ನು ನಾಶಗೊಳಿಸಲಿಕ್ಕೆ ಕಾರಣವೆಂದರೆ ಪಶ್ಚಾತ್ ಜನರ ಅರ್ಥಾತ್ ಪರದೇಶಿ ಶಿಕ್ಷಣದ ಪ್ರಣಾಲಿ ಪ್ರಚಲಿತವಾಗಿದ್ದರಿಂದ ಈ ಭಾರತದ ಹೆಣ್ಣು ಮಕ್ಕಳಲ್ಲಿಯ ಪಾತಿವೃತ್ಯ ಧರ್ಮವೂ, ಗಂಡು ಮಕ್ಕಳಲ್ಲಿರುವ ಶೀಲದ ಪರಿಪಾಲನವು ನಷ್ಟವಾಗಿ ಭಾರತದ ಜನರಲ್ಲಿ ಬಂದು ನಿಶಾಚಾರ ಪ್ರವೃತ್ತಿಯುಂಟಾಗಿ ಪಾಪಾಚಾರ ಬೆಳೆಯುತ್ತಲೇ ನಡೆದಿದೆ.

ಈ ಪಾಪಮಯ ನಿಶಾಚಾರ ವೃತ್ತಿಯನ್ನು ತಡೆಯಲು ಅತ್ಯಂತ ದುಃಸಾಧ್ಯವಾಗಿದೆ. ಭಾರತದಲ್ಲಿ ಸ್ತ್ರೀಯರಿಗೆ ಶೀಲ ಮತ್ತು ಸಂಯಮದಿಂದ ಅವರ ಇತಿಹಾಸಗಳು ಜಗತ್ತಿಗೆ ಮಂಗಳವನ್ನು ಉಂಟುಮಾಡುವವಾಗಿದ್ದವು. ನೋಡಿ—

ಭ್ರಹಮಿ ಚಂದನ ಬಾಲಿಕಾ ಭಗವತಿಂ ರಾಜಾಮತಿ ದ್ರೌಪದಿ ।
ಕೌಶಲ್ಯಾಚ ಬ್ರಗಾವತಿ ಸುಲೋಚನಾ ಸೀತಾ ಸುಭದ್ರಾಶಿವಾ ॥
ಕುಂತಿಅನಂತಮತಿ ನಲಸ್ಯ ಲೀಲಾ ದಹಿತಾ ಚುಲಾ ರೇವತಿ ।
ಪದ್ಮಾ ಸುಂದರಿ ಶೀಲ ಪ್ರಭಾವತಿ ಮಹಾಕುರ್ವಂತು ನೋ
ಮಂಗಲಂ ॥

ಸಂಯಮ ಮತ್ತು ಶೀಲದಲ್ಲಿ ಇಂಥ ಸ್ತ್ರೀರತ್ನಗಳು ಹಿಂದೆ ಆಗಿಹೋಗಿದ್ದರಿಂದಲೇ ಈ ಪೃಥ್ವಿಯನ್ನು ಪವಿತ್ರ ಮಾಡುವ ನರ ರತ್ನಗಳಿಗೆ ಜನ್ಮ ಕೊಟ್ಟಿದ್ದಾರೆ. ಆದರೆ ನಮ್ಮ ಭಾರತಿಯ ಮಾನವ ಪ್ರಾಣಿಗಳು ಭಾರತ ಭೂಷಣವನ್ನು ಪರಂಪರೆಯಿಂದ ಪವಿತ್ರವಾಗಿ ರಕ್ಷಣವಾಗಿ ಮಾಡಿಕೊಳ್ಳುತ್ತ ಬಂದಿದ್ದಾರೆ. ಭಾರತಿಯ ತರುಣ ತರುಣಿಯರು ಸಂಯಮ ಮತ್ತು ಶೀಲಗಳ ಪರಿಪಾಲನವನ್ನು ಪರಂಪರೆಯಿಂದ ಮುಂದೆಯೂ ನಡೆದು ಸತ್ಯ ಅಹಿಂಸಾ ಧರ್ಮದ ಬೆಳವಣಿಗೆ ಮತ್ತು ಸಂಪೂರ್ಣ ಪ್ರಾಣಿಗಳ ಮೇಲೆ ದಯೆಯನ್ನು ನಮ್ಮೊಳಗೆ ಜನಿಸಿ, ಸ್ತ್ರೀಯರಲ್ಲಿ ಪಾತಿವೃತ್ಯ ಧರ್ಮವು ಪುರುಷರಲ್ಲಿ ನೀತಿ ಮತ್ತು ಸದಾಚಾರ ಶೀಲ ಮುಂತಾದ ಭಾವನೆಯು ನೆಲಿಸಿದರೆ ಸದಾಚಾರ

ಪೂರ್ವಕ ರಾಷ್ಟ್ರೋನ್ನತಿಯಾಗಿ ಜಗತ್ತಿನ ಮಾನವ ಜನರಲ್ಲಿರ್ದ ಪಾಪಭಾವನೆಗಳು ತೊಳೆದುಹೋಗಿ ಮುಂದೆ ಈ ಸಂಸಾರ ದುಃಖವನ್ನು ನಾಶಗೊಳಿಸಿ ಮತ್ತು ಅನಂತ ಸುಖಕ್ಕೆ ಕಾರಣವಾದ ಮೋಕ್ಷ ಸುಖವನ್ನು ಹೊಂದುವಿರೆಂದು ನಂಬಿದ್ದೇವೆಂದು ಹೇಳಿ ನಮ್ಮ ಪ್ರವಚನವನ್ನು (ಸಂಯಮ ಧರ್ಮ ಬಗ್ಗೆ ಹೇಳಿ) ಪೂರ್ತಿ ಮಾಡುತ್ತೇವೆ.

-: ಇತಿ ಉತ್ತಮ ಸಂಯಮ ಧರ್ಮಾಂಗಾಯನಮಃ :-

೭ ಉತ್ತಮ ತಪಧರ್ಮಃ

ಇಹ ಪಲೋಯ ಸುಹಾಣಂ ಣಿರವೆಕ್ಖೋ ಜೋ ಕರೇದಿ ಸಮಭಾವೋ।
ವಿವಿಹಂ ಕಾಯಕ್ಲೇಶಂ ತಪಧಮ್ಮೋ ನಿಮ್ಮಲೊ ತಸ್ಸ ॥

ಈ ಲೋಕ ಮತ್ತು ಪರಲೋಕದಲ್ಲಿ ಸುಖದ ಅಪೇಕ್ಷೆಯನ್ನಿಡದೆ ತನ್ನೊಳು ಭಾವನೆ ಮಾಡುವದೇನಂದರೆ;—

ಅರಿಮಿತ್ರ ಮಹಲ ಮಶಾನ ಕಂಚನ ಕಾಚ ನಿಂದನ ಥುತಿಕರಣ ।
ಅರ್ಘಾವತಾರಣ ಅಸಿ ಪ್ರಹಾರಣ ಮೇಸದಾ ಸಮತಾ ದರಣ್ ॥

ಶತ್ರು, ಮಿತ್ರ, ಮಹಲ, ಬಂಗಾರ, ಬೆಳ್ಳಿ, ನಿಂದೆ, ಸ್ತುತಿ, ಸುಖ, ದುಃಖ, ಪ್ರಶಂಸೆ ಸುಡಗಾಡು (ಸ್ಮಶಾನ) ಅಥವಾ ಈ ಶರೀರವನ್ನು ಶಸ್ತ್ರದಿಂದ ತುಂಡು ತುಂಡು ಮಾಡಲಿ ಅಥವಾ ಯಾರಾದರೂ ದ್ವೇಷಮಾಡಲಿ, ನಿಂದಿಸಲಿ, ಅಪಮಾನ ಮಾಡಲಿ, ಬೈಯಲಿ, ಸುಡಲಿ, ಬೇಕಾದ ಕಷ್ಟ ಕೊಟ್ಟರೂ ಇದೆಲ್ಲ ನನ್ನ ಸ್ವಭಾವ ಅಲ್ಲ. ಇವೆಲ್ಲ ನನ್ನ ಆತ್ಮನಿಂದ ಬೇರಾಗಿವೆ; ನನ್ನ ಆತ್ಮ ಸಮಸ್ತ ಬಾಹ್ಯ ಪರವಸ್ತುಗಳಿಂದ ಭಿನ್ನವಾಗಿದ್ದಾನೆ; ಇವುಗಳಲ್ಲಿ ನನ್ನ ವಾದದ್ದು ನನ್ನ ಶುದ್ಧಿ ನಿರ್ಮಳ ಚಿತಾನಂದ ಸ್ವ ಸ್ವರೂಪ ಹೊರತಾಗಿ ಉಳಿದವು ಬೇರೆ ಎಂದು ತನೊಳಗೆ ಭಾವಿಸುವದು, ಇದಕ್ಕೆ ಸಮತೆಯೆಂದು ಹೇಳುವರು. ಈ ಸಮತೆ ನಮ್ಮೊಳಗೆ ಜನಿಸಬೇಕಾದರೆ ಬಾಹ್ಯ ಮತ್ತು ಅಂತ ರಂಗ ಕಷಾಯಗಳನ್ನು ತಳ್ಳಬೇಕು. ಇವುಗಳನ್ನು ತಳ್ಳಬೇಕಾದರೆ ನಮ್ಮೊಳು ಮೊದಲು ಇಂದ್ರಿಯ ಸಂಯಮ ಪ್ರಾಣಿ ಸಂಯಮವನ್ನು ಪಾಲಿಸುವ ಪರಿ ಪಾಠಿಯ ಸಾಧನೆ ಬೇಕು. ಸಾಧನೆಯಿಂದ ನಮ್ಮ ಸಂಯಮವು ಬಲವಾದ ಮೇಲೆ ಬಾಹ್ಯ ಮತ್ತು ಅಭ್ಯಂತರ ತಪದ ಸಾಧನೆಯಾಗಿ ಮನಸ್ಸಿನ ರಾಗಾದಿ ಭಾವಗಳು ತೊಳೆದು ನಮ್ಮ ಆತ್ಮನಲ್ಲಿ ನಿಜವಾದ ಸ್ವರೂಪವು ನಮ್ಮ ಅನುಭ ವಕ್ಕೆ ಮೆಲ್ಲಮೆಲ್ಲನೆ ಬರಲು ಆತ್ಮನಲ್ಲಿ ತೀವ್ರ ರುಚಿಯುಂಟಾಗಿ ಬಾಹ್ಯ ತಪಸ್ಸು ಮತ್ತು ಅಭ್ಯಂತರ ತಪದಲ್ಲಿ ಜ್ಞಾನಿಯು ಮಗ್ನನಾಗಿ ಉತ್ತರೋತ್ತರ ಕರ್ಮದ ಹಾನಿಯನ್ನು ಮಾಡುತ್ತಾನೆ.

ಮುಂದೆ ಹನ್ನೆರಡು ತಪದ ಭೇದಗಳನ್ನು ಹೇಳುತ್ತಾರೆಃ

ತಪ ಅಂದರೇನು:– ಮನ ಮತ್ತು ಇಂದ್ರಿಯಗಳ ನಿಗ್ರಹ ಮಾಡುವ ಅನುಷ್ಠಾನಕ್ಕೆ ತಪವೆಂದು ಹೇಳುವರು. ಆ ತಪದಲ್ಲಿ ಎರಡು ಭೇದಗಳಿ

ರುತ್ತವೆ. ಬಾಹ್ಯ ಮತ್ತೊಂದು ಅಂತರಂಗ, ಈ ಎರಡೂ ತಪಗಳಲ್ಲಿ ಕೂಡಿ ಹನ್ನೆರಡು ಭೇದಗಳಿರುತ್ತವೆ.

ಅನಶನಾವನೌದರ್ಯ ವೃತ್ತಿ ಸಂಖ್ಯಾರ ಸೋಜ್ಝಿತೀ |
ವಿವಿಕ್ತಶಯುನಾಸನಂ ಕಾಯಕ್ಲೇಶೊ ಬಹಿಸ್ತಪಃ ||

ಅನಶನ, ಅವಮೊದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತ ಶಯ್ಯಾಸನ ಮತ್ತು ಕಾಯಕ್ಲೇಶಗಳೆಂದು ಇವು ಬಾಹ್ಯತಪ ಇವೆ.

ಅನಶನ ಆಹಾರ ತ್ಯಾಗ ಮಾಡುವದಕ್ಕಾಗಿ ಅನಶನ ತಪವೆಂದು ಹೇಳುವರು. ಅದರ ಎರಡು ಭೇದಗಳಿವೆ. ಒಂದು ಇಚ್ಛೆಸಹಿತ ಮತ್ತೊಂದು ಇಚ್ಛೆರಹಿತ. ಇದರಲ್ಲಿಯೆ ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು, ನಾಲ್ಕು ಅಥವಾ ಐದು ತಿಂಗಳು ಅಥವಾ ಹೆಚ್ಚು ಹೆಚ್ಚು ಆರು ತಿಂಗಳ ವರೆಗೆ ಆಹಾರವನ್ನು ತೊರೆಯುವದು. ಇದು ಸೌಕಾಂಕ್ಷಾ ಅನಶನವೆಂದು ಹೇಳುವರು. ಇದೇ ರೀತಿ ಸರ್ವತೋ ಭದ್ರ, ಸಿಂಹನಿಃಕ್ರಿಡಿತ ಮತ್ತು ಏಕಾಂತರ ಮೊದಲಾದವುಗಳಿಗೆ ವ್ರತಕಾಂಕ್ಷಾ ಎಂಬ ಅನಶನ ಭೇದಗಳಿರುತ್ತವೆ.

ಕಾಂಕ್ಷಾರಹಿತ ಅನಶನ:—

ನಿಕಾಂಕ್ಷೋಽ ಸೌ ಭವೇದ್ಭಕ್ತ ಪ್ರತ್ಯಾನೆಂಗಿನೀ ಮೃತಿಃ |
ಪ್ರಾಯೋಪಗಮನೆಷ್ವಾಯುರಂತ ಸನ್ಯಾಸ ಕರ್ಮಸು ||

ಪ್ರಾಯೋಗಮನ ಸನ್ಯಾಸಮರಣದಲ್ಲಿ ಅಥವಾ ಆಯು ಅವಸಾನದಲ್ಲಿ ಸಂನ್ಯಾಸ ಧರಿಸುವ ವೇಳೆಯಲ್ಲಿ ಆಹಾರವನ್ನು ತೊರೆದಾಗ ಪುನಃ ಆಹಾರದ ಇಚ್ಛೆಯು ಆಗುವದಿಲ್ಲ. ಇದರ ಸಲುವಾಗಿ ಇದಕ್ಕೆ ನಿಃಕಾಂಕ್ಷ ಅನಶನವೆಂದು ಹೇಳುವರು. ಈ ಅನಶನವೆಂಬ ತಪದಲ್ಲಿ ಲಾಭ, ಸತ್ಕಾರ ಮೊದಲಾದ ಅಪೇಕ್ಷೆಯನ್ನು ಇಡದೆ ಮಾತ್ರ ಶರೀರದ ದರ್ಪವಿಕಾರಾದಿ ನಾಶಗೊಳಿಸುವ ಗೋಸ್ಕರವಾಗಿ ಮತ್ತು ಇಂದ್ರಿಯ ಅಥವಾ ಪ್ರಾಣ ಸಂಯಮ ಈ ಎರಡು ಪ್ರಕಾರವಾದ ಸಂಯಮವನ್ನು ಸಿದ್ಧಿಗೊಳಿಸುವಗೋಸ್ಕರ ಆಚರಿಸಬೇಕೆಂದು ಹೇಳಿದರು.

ಅವಮೋದರ್ಯ ತಪ:—

ಗ್ರಾಸ ಹೀನ ನಿಜಾಹಾರಾದ್ಯೂನಾಹಾರಾಶನ ವ್ರತವಃ |
ತಪಃ ಸ್ಯಾದವ ಮೌದರ್ಯಮಕ್ಷಕಕ್ಷದವಾನಲಃ ||

ತಾನು ತಕ್ಕೊಳ್ಳತಕ್ಕ ಆಹಾರದಲ್ಲಿ ಒಂದು ತುತ್ತು, ಎರಡು ತುತ್ತು, ನಾಲ್ಕು ತುತ್ತು, ಹತ್ತು ತುತ್ತು, ಇಪ್ಪತ್ತು ತುತ್ತು ಆಹಾರ ಕಡಿಮೆ ಮಾಡುವದು ಅವಮೋದರ್ಯ ವ್ರತವಿದೆ. ಈ ತಪವನ್ನು ಇಂದ್ರಿಯ ರೂಪಿ ಮಹಾ ಕಾಡನ್ನು ಸುಡುವಗೋಸ್ಕರ ಇಂದ್ರಿಯಗಳನ್ನು ಅಧೀನಪಡಿಸುವಗೋಸ್ಕರ ಈ ತಪವು ದಾವಾನಲದಂತಿದೆ. ಈ ಅವಮೋದರ್ಯ ತಪವು ಉಪವಾಸದಿಂದ ಉತ್ಪನ್ನವಾಗುವ ಪರಿಗ್ರಹವನ್ನು ದೂರ ಮಾಡುವದಾಗಿದೆ. ಇದರಿಂದ ಧ್ಯಾನ ಮತ್ತು ಅಧ್ಯಯನ ಮತ್ತು ಸ್ವಾಧ್ಯಾಯಗಳ ಸಿದ್ಧಿಯಾಗುತ್ತದೆ. ಮತ್ತು ನಿದ್ರಾದಿ ಪೀಡೆಗಳ ವಿಜಯವಾಗುತ್ತದೆ. ಇದಕ್ಕೋಸ್ಕರ ಈ ತಪಶ್ಚರ್ಯವನ್ನು ಅಗತ್ಯವಾಗಿ ಮಾಡಬೇಕು.

ವೃತ್ತಿಪರ ಸಂಖ್ಯಾನ ತಪ:—

ವೃತ್ತಿರ್ವಾಟಗ್ರಹಾಽ ಹಾರ ಪಾತ್ರದಾತೃಷು ವರ್ತನಮ್ ।
ಸದೆಖ್ಯಾ ತನ್ನಿಯಮೋ ವೃತ್ತಿಪರಿ ಸಂಖ್ಯಾನಿಜೇಚ್ಛಯಾ ॥

ವೃತ್ತಿಪರಿ ಸಂಖ್ಯಾನ

ವೃತ್ತಿರ್ವಾಟ ಗೃಹಾಽ ಹಾರಪಾತ್ರದಾತೃಷು ವರ್ತನಂ ।
ಸಂಖ್ಯಾ ತನ್ನಿಯಮೊವೃತ್ತಿಪರಿ ಸಂಖ್ಯಾ ನಿಜೆಚ್ಛಯಾ ॥

ಓಣಿ, ಮನೆ, ಆಹಾರ, ಪಾತ್ರ ಮತ್ತು ದಾತಾ ಮೊದಲಾದವುಗಳಲ್ಲಿ ಪ್ರವೃತ್ತಿಮಾಡುವದಕ್ಕೆ ವೃತ್ತಿಯೆಂದು ಹೇಳುವರು, ಅಥವಾ ನಿಯಮ ಮಾಡುವದಕ್ಕೆ ಸಂಖ್ಯಾಎಂದು ಹೇಳುವರು. ತನ್ನ ಇಚ್ಛಾನುಸಾರವಾಗಿ ಓಣಿ, ಮನೆ, ಆಹಾರ, ಪಾತ್ರ, ದಾತಾ ಮೊದಲಾದವರ ನಿಯಮ ಮಾಡುವದಕ್ಕೆ ವೃತ್ತಿಪರಿಸಂಖ್ಯಾನವೆಂದು ಹೇಳುವರು. ಈ ದಿವಸ ಎರಡು ಅಥವಾ ನಾಲ್ಕು ಓಣಿಗಳಲ್ಲಿ ಆಹಾರ ದೊರೆತರೆ ಅಥವಾ ನಾಲ್ಕು ಮನೆಗಳಲ್ಲಿ ದೊರೆತರೇ ನಾನು ಆಹಾರ ಗ್ರಹಿಸುವೆನು ಇಲ್ಲವಾದರೆ ಗ್ರಹಿಸಲಾರೆನು, ಅಥವಾ ಈ ದಿವಸ ಕೈಗೆ ಮೆತ್ತತಕ್ಕಂಥ ಜಿಗಟು ಆಹಾರ ಕೊಳ್ಳುವೆ, ಇಲ್ಲದಿದ್ದರೆ ಆಹಾರ ಕೊಳ್ಳಲಿಕ್ಕಿಲ್ಲ. ಈ ಬೆಳ್ಳಿಯ ಪಾತ್ರೆಯಲ್ಲಿ ಆಹಾರ ಸಿಕ್ಕರೆ ಕೊಳ್ಳುವೆ, ಇಲ್ಲದಿದ್ದರೆ ಇಲ್ಲ. ಅಥವಾ ಸೌಭಾಗ್ಯವತಿ ಅಥವಾ ಕುಮಾರಿ ಕನ್ನಿಕೆ ಅಥವಾ ಪುರುಷರು ನಾಲ್ಕುಜನ ಪುರುಷ. ಅಥವಾ ಇಬ್ಬರು ಸ್ತ್ರೀಯರು ಅಥವಾ ಮತ್ತಾವ ರೀತಿಯಾಗಿ ಬೇರೆ ಬೇರೆ ರೀತಿಯಿಂದ ಇಂಥ ವಸ್ತುಗಳು ಸಿಕ್ಕರೆ

ನಾನು ಆಹಾರ ಕೊಳ್ಳುವೆ ಇಲ್ಲದಿದ್ದರೆ ನಾನು ಕೊಳ್ಳಲಿಕ್ಕಿಲ್ಲವೆಂದು ಈ ರೀತಿ ನಿಯಮ ಧರಿಸಿ ಆಹಾರ ಮಾಡುವದಕ್ಕೆ ವೃತ್ತಿಪರಿಸಂಖ್ಯಾನ ತಪವೆಂದು ಹೇಳುವರು. ಇಂಥ ನಿಯಮಗಳು ಮಾಡುವ ಪ್ರಯೋಜನವೇನಂದರೆ, ಧ್ಯಾನ, ಸ್ವಾಧ್ಯಾಯ ಮೊದಲಾದವುಗಳ ನಿಮಿತ್ತವಾಗಿ ಅಥವಾ ಶರೀರವನ್ನು ತಪ ಸಂಯಮದ ಸಾಧನಕ್ಕಾಗೆಂದು ಅಥವಾ ಆಹಾರ ಮೇಲಿನ ಇಚ್ಛೆಯನ್ನು ದೂರಮಾಡುದಕ್ಕೋಸ್ಕರ ಅಥವಾ ಪರಾಧೀನ ವೃತ್ತಿಯನ್ನು ದೂರಮಾಡು ವದಕ್ಕೋಸ್ಕರ ಈ ವೃತ್ತಿಪರಿ ಸಂಖ್ಯಾನವ ತಪವನ್ನು ಸಾಧುಗಳು ಮಾಡು ತ್ತಾರೆ.

ರಸಪರಿತ್ಯಾಗತಪ

ದಧಿಕ್ಷೀರಾಽಽಜ್ಯ ತೈಲಾದೇಃ ಪರಿಹಾರೊ ರಸಸ್ಯಯಃ ।
ತಪೋರಸ ಪರಿತ್ಯಾಗೋ ಮಧುರಾದಿ ರಸಸ್ಯವಾ ॥

ಮೊಸರು, ಹಾಲು, ತುಪ್ಪ, ಎಣ್ಣೆ ಮೊದಲಾದ ರಸಗಳನ್ನು ತೊರೆಯುು ವದು, ಅಥವಾ ಉಪ್ಪು, ಖಾರ, ಹುಳಿ, ಕಹಿಪದಾರ್ಥ ಮೊದಲಾದ ರಸವನ್ನು ರಸವಸ್ತುಗಳನ್ನು ತೊರೆಯುುವದಿದು ರಸಪರಿತ್ಯಾಗ ತಪವಿದೆ. ಈ ರಸಗಳನ್ನು ತೊರೆಯಲು ಕಾರಣವೇನಂದರೆ ವಿಕಾರಮಯ ಇಂದ್ರಿಗಳನ್ನು ತನ್ನ ಸ್ವಾಧೀನ ಪಡೆಸುವ ಸಲುವಾಗಿ ಈ ರಸಪರಿತ್ಯಾಗನೆಂಬ ಹೆಸರಿನ ತಪವನ್ನು ಮಾಡುತ್ತಾ ರೆ.

।। ಕಾಯಕ್ಲೇಶ ತಪಭಾವವು ।।

ಸುಖೋಪ ಲಾಲಿತಃ ಕಾಯೊನಾಲಂ ಸದ್ಧ್ಯಾನ ಸಿದ್ಧಯೆ ।
ತದ್ದೇಹದಮನಂ ಕಾಯಕ್ಲೇಶಾಃ ಕ್ಲೇಶೈರ್ಮತೆಚಿತೈಃ ॥

ಒಂದು ನಾವು ಈ ಶರೀರಬ ಲಾಲನೆ ಪಾಲನೆಯನ್ನು ಸುಖಪೂರ್ವಕ ವಾಗಿ ಮಾಡಿದರೆ ಅದು ಪುನಃ ಇದರಿಂದ ಶ್ರೇಷ್ಠ ಧ್ಯಾನದ ಸಿದ್ಧಿಯು ಎಂದೂ ಆಗಲಿಕ್ಕೆ ಶಕ್ಯವಿಲ್ಲವೆಂದು ತಿಳಿದು ಶ್ರೀಭಗವಾನವೀತರಾದ ಅರಂತದೇವರು ಹೇಳಿದ ಮಾರ್ಗದಂತೆ ಉಚಿತವಾದ ಕಾಯಕ್ಲೇಶಗಳಿಂದ ಈ ಶರೀರವನ್ನು ದಹನ ಮಾಡುವದಕ್ಕೆ ಕಾಯಕ್ಲೇಶ ತಪನೆಂದು ಹೇಳುತ್ತಾರೆ.

೧ ವಿವಿಕ್ತ ಶಯ್ಯಾಸನ ತಪ

ವೀರ ಸ್ವಸ್ತಿಕ ವಜ್ರಹಸ್ತಿ ಶುಂಡಾ ಸನಾದಯಃ ।
ಯುತ್ಸರ್ಗಃ ಶವಗೋದಂಡಚಾಪ ಶಯ್ಯಾದಯಶ್ಚತೆ ॥

ವೀರಾಸನ, ಸ್ವಸ್ತಿಕಾಸನ, ವಜ್ರಾಸನ, ಕಮಲಾಸನ, ಹಸ್ತಿಸುಂಡಾಸನ ಅಂದರೆ ಆನೆಯ ಸೊಂಡೆಯಂತೆ ಆಸನವನ್ನು ಹಾಕಿ ಕೂಡ್ರುವದು. ಉತ್ಸರ್ಗ ಅಂದರೆ ಶರೀರದ ಮಮತ್ವವನ್ನು ತೊರೆದುನಿಂತು ತಪ ಮಾಡುವದು. ಮೃತಕಾಸನವೆಂದರೆ– ಮೃತಕ ಹೆಣ್ಣಿನ ಸಮಾನ ಉದ್ದಕ್ಕೆ ಮಲಗಿ ಧ್ಯಾನಮಾಡುವದು. ಹಸುವು ಕೂತಂತೆ ಕೂತು ಧ್ಯಾನಿಸುವದು. ಇದು ಗವಾಸನವಿದೆ. ದಂಡಾಸನವೆಂದರೆ ಧನುಷ್ಯಾಕಾರ ಆಸನವು. ಶಯ್ಯಾಸನ ಅಂದರೆ ಒಂದು ಮಗ್ಗಲ ಮಲಗಿಕೊಂಡು ಧ್ಯಾನಿಸುವದು. ಇಂಥ ಎಷ್ಟೋ ಬೇರೆ ಬೇರೆ ಕಠಿಣ ಆಸನಗಳನ್ನು ಹಾಕಿ ಧ್ಯಾನಿಸುವಕ್ಕೆ ಕಾಯವಿವಿಕ್ತ ಶಯ್ಯಾಸನ ವೆಂದು ಹೇಳುವರು.

ಇನ್ನು ಅಭ್ಯಂತರ ತಪದ ವರ್ಣನೆ ಮಾಡುತ್ತಾರೆ

ತತ್ಪ್ರಾಯಶ್ಚಿತ್ತಂ ವಿನಯೊ ವೈಯಾವೃತ್ಯಂ ಜಗನ್ನುತಮ್ ।
ಸ್ವಾಧ್ಯಾಯೋ ಭವೇದ್ವ್ಯುತ್ಸರ್ಗೋಧ್ಯಾನಂ ಚಾಭ್ಯಂತರಂ ತಪಃ॥

ಪ್ರಾಯಶ್ಚಿತ್ತ ಮತ್ತು ವಿನಯಗಳಿಗೆ ಜಗತ್ತಿನ ಎಲ್ಲ ಜನರು ನಮಸ್ಕಾರ ಮಾಡುತ್ತಾರೆ. ಅಂಥ ವಯ್ಯಾವೃತ್ಯ ಸ್ವಾಧ್ಯಾಯ, ಉತ್ಸರ್ಗ ಮತ್ತು ಧ್ಯಾನವೆಂಬಿವು ಆರು ವಿಧವಾದ ಅಂತರಂಗದ ತಪಗಳಿವೆ.

ಪ್ರಾಯಶ್ಚಿತ್ತದ ಸ್ವರೂಪಗಳು.

ಯಾವದರಿಂದ ಮೊದಲಿನ ಪಾಪಗಳು ನಷ್ಟವಾಗುತ್ತವೆಯೋ ಅದಕ್ಕೆ ಪ್ರಾಯಶ್ಚಿತ್ತ ವೆನ್ನುವರು. ಅಥವಾ ಪ್ರಾಯಶ್ಚಿತ ಶಬ್ದದ ಅರ್ಥವು ದೋಷ ಪಾಯಃ ಅಥವಾ ಮನುಷ್ಯವೆಂದಾಗುವದು. ಆ ಮನುಷ್ಯನ ಕಾರ್ಯಗಳಿಗೆ ಚಿತ್ತವೆಂದು ಹೇಳುವರು. ಆ ಚಿತ್ತವನ್ನು ಅಥವಾ ಆ ಮನುಷ್ಯನ ಚಿತ್ತವನ್ನು ಅಥವಾ ಕಾರ್ಯವನ್ನು ಹರಣ ಮಾಡಿ ನಿರ್ಮಲ ಮಾಡುವದಕ್ಕೆ ಪ್ರಾಯಶ್ಚಿತ್ತವೆಂದು ಹೇಳುವರು.

ಪ್ರಾಯಶ್ಚಿತ್ತದ ಭೇದಗಳನ್ನು ಹೇಳುತ್ತಾರೆ.—ಆಲೋಚನಾ ಪ್ರತಿಕ್ರಮಣ ತದುಭಯ, ವಿವೇಕ ಉತ್ಸರ್ಗ ತಪ ಛೇದ ಮೂಲ ಪರಿಹಾರ ಮತ್ತು ದರ್ಶನ ಇವು ಪ್ರಾಯಶ್ಚಿತ್ತದ ಹತ್ತು ಭೇದಗಳಿವೆ. ಇವುಗಳಲ್ಲಿ ಹೇಳಿರುವಲ್ಲಿ ಯಾವದರಲ್ಲಿಯಾದರೂ ವ್ರತದಲ್ಲಿ ದೋಷ ತಪ್ಪಿದರೆ ಗುರುಗಳಿಗೆ ಅದನ್ನು ಹೇಳುವದು ನಿವೇದನೆ ಮಾಡುವದು ಮತ್ತು ಆತ್ಮ ಶುದ್ಧಿಯನ್ನು ಮಾಡಿ

ಕೊಳ್ಳುವದಕ್ಕೆ ಆಲೋಚನೆಯೆಂದು ಹೇಳವರು. ಯಾರು ಶ್ರುತಜ್ಞಾನದ ರಹಸ್ಯ ವನ್ನು ಚನ್ನಾಗಿ ತಿಳಿಯುತ್ತಾರೆಯೋ ಯಾರ ಹೃದಯ ಪ್ರವತ್ತಿಯು ಅತ್ಯಂತ ಶಾಂತವಾಗಿದೆಯೋ ಅಥವಾ ಯಾರು ಅಪರಿಶ್ರಾವಿ ಅಂದರೆ ಹೇಳಿದ ದೋಷ ಗಳನ್ನು ಹೊರಗೆ ಎಂದೂ ಪ್ರಕಟ ಮಾಡದವರಿಗೆ ಆಚಾರ್ಯರೆಂದು ಹೇಳು ತ್ತಾರೆ. ಇಂಥ ಆಚಾರ್ಯರು ಯಾವ ಸಮಯದಲ್ಲಿ ಯಾವದೊಂದು ಪ್ರಸಂ ಶನಿಯ ಏಕಾಂತ ಸ್ಥಾನದಲ್ಲಿ ಕುಳಿತಾಗ ವಿನಯ ಪೂರ್ವಕವಾಗಿ ಅವರ ಸಮೀಪಕ್ಕೆ ಹೋಗಿ ಕರಗಳನ್ನು ಜೋಡಿಸಿ ಅವರ ಮಗ್ಗುಲ್ಲಿ ಕೂತುಕೊಳ್ಳ ಬೇಕು. ಪುನಃ ಅಪರಾಧಿ ಬಾಲಕನಂತೆ ಕುಟಿಲತೆಯನ್ನು ಬಿಡದೆ ಅಥವಾ ಮಾಯಾಚ್ಯಾರವಿಲ್ಲದೆ ತನ್ನ ಮಾಡಿದ ಅಪರಾಧಗಳನ್ನು ನಿವೇದನೆ ಮಾಡ ಬೇಕು. ಈ ಪ್ರಕಾರ ಮಾಡುವದಿದು ಆಲೋಚನದವಿಶುದ್ಧಿಗಾಗಿದೆ. ಆಲೋ ಚನದ ಹತ್ತು ದೋಷಗಳನ್ನು ಹೇಳುತ್ತಾರೆ.

ಆಕಂಪಿತ, ಅನುಮಾಪಿತ, ದೃಷ್ಟ, ಬಾದರ, ಸೂಕ್ಷ್ಮ, ವರ್ಣ ಶಬ್ದ ಕುಲಿತ ಬಹು ಅವ್ಯಕ್ತ ಮತ್ತು ತತ್ಸೇವಿತ ಈ ರೀತಿ ಆಲೋಚನದ ಹತ್ತು ಭೇದಗಳಿವೆ. ತನ್ನ ಆತ್ಮನಹಿತವನ್ನು ಮಾಡಿಕೊಳ್ಳುವ ಸಾಧುಗಳು ಅಥವಾ ಮುನಿಗಳು ಅಥವಾ ಉತ್ತಮ ಶ್ರಾವಕರು ಆಲೋಚನೆಯನ್ನು ಮಾಡುವ ವೇಳೆಯಲ್ಲಿ ಈ ಹತ್ತು ದೋಷಗಳನ್ನು ತೊರೆಯಬೇಕು. ಯಾಕಂದರೆ ಉತ್ತಮ ಪುರುಷರು ಯಾವತ್ತು ಮಾಯಾಚ್ಯಾರ ರಹಿತರಾಗಿ ಕೇವಳ ಪರಲೋಕವನ್ನು ಸಿದ್ಧಗೊಳಿಸುತ್ತಾರೆ.

೧. ಅಕಂಪಿತ ದೋಷವನ್ನು ಹೇಳುವರು.-ಯಾವದೊಂದು ರೀತಿಯಿಂದಾ ದರೂ ನನಗೆ ಸ್ವಲ್ಪವೇ ಪ್ರಾಯಶ್ಚಿತ್ತವನ್ನು ಕೊಡರೆಂಬ ಭಾವನೆಯಿಂದ ಅಂಜಿ ಗಾಬರಿಯಾಗಿ ಯಾವನೊಬ್ಬನು ಆಚಾರ್ಯರಿಗೆ ಮೊದಲೇ ಪಿಂಚಿ ಶಾಸ್ತ್ರ ಮೊದಲಾದ ಉಪಕರಣಗಳನ್ನು ಕೊಟ್ಟು ತನ್ನ ಅಪರಾಧಗಳನ್ನು ಹೇಳುವದು ಇದಕ್ಕೆ ಅಕಂಪಿತ ದೋಷವೆನ್ನುವರು.

೨. ಅನುಮಾಪಿತದೋಷಃ—ನಾನು ರೋಗಿ ಇದ್ದೇನೆ ಕ್ಲೇಶವನ್ನು ಸಹನ ಮಾಡುವ ಶಕ್ತಿಯಿಲ್ಲಾ ನನಗೆ ಒಂದು ವೇಳೆ ಸ್ವಲ್ಪ ಪ್ರಾಯಶ್ಚಿತ್ತ ಕೊಟ್ಟರೇನೆ ನಾನು ಮಾಡಿದ ಅಪರಾಧಗಳನ್ನು ಅವರ ಮುಂದೆ ಹೇಳೇನು— ಈ ಪ್ರಕಾರ ಹೇಳುವದು ಅನುಮಾಪಿತ ದೋಷವೆನ್ನುವರು.

೩. **ದೃಷ್ಟದೋಷಗಳನ್ನು ಹೇಳುವರು:**– ಯಾವ ತಾನು ಮಾಡಿದ ದೋಷಗಳನ್ನು ಇನ್ನೊಬ್ಬರು ನೋಡಿದ್ದಾರೆಯೋ ಅಷ್ಟೇನೆ ಗುರುಗಳ ಹತ್ತರ ಹೇಳುವರು. ಗುರುಗಳಲ್ಲಿ ಹೇಳುವದನ್ನು ಶೇಷವಾಗಿಟ್ಟು ಬಚ್ಚಿಟ್ಟುಕೊಳ್ಳುವರು.

೪. **ಬದರ:**— ದೊಡ್ಡ ದೋಷಗಳನ್ನು ಮುಚ್ಚಿಟ್ಟುಕೊಳ್ಳುತ್ತ ಸಣ್ಣ ದೋಷಗಳನ್ನೇ ಹೇಳುವದು ಬಂದರದೋಷವೆನ್ನುವರು.

೫. **ಸೂಕ್ಷ್ಮದೋಷ:**— ಈ ಮುನಿಯು ಸೂಕ್ಷ್ಮ ದೋಷಗಳನ್ನು ಸಹ ಶುದ್ಧ ಮಾಡಿಕೊಳ್ಳುತ್ತಾನೆ. ಎಂದು ಈ ರೀತಿ ತನ್ನ ಪ್ರಸಿದ್ಧಿಯ ಗೋಸ್ಕರ ಸೂಕ್ಷ್ಮ ದೋಷಗಳನ್ನು ಮುಚ್ಚಿಕೊಳ್ಳುವರು. ಮತ್ತು ಸೂಕ್ಷ್ಮ ದೋಷಗಳನ್ನು ಹೇಳುವರು. ಇದಕ್ಕೆ ಸೂಕ್ಷ್ಮದೋಷವೆನ್ನುವರು.

೬. **ಛನ್ನದೋಷ:**— ಲಜ್ಜಾ ಅಥವಾ ಭಯ ಮೊದಲಾದವುಗಳ ಕಾರಣಾ ತನ್ನ ದೋಷಗಳನ್ನು ಮುಚ್ಚಿಕೊಳ್ಳುವಗೋಸ್ಕರ ಇಂಥಾ ದೋಷಗಳು ಆದಮೇಲೆ ಇದಕ್ಕೆ ಏನು ಪ್ರಾಯಶ್ಚಿತ್ತವಿದೆಯೋ ಈ ರೀತಿ ಆಚಾರ್ಯರನ್ನು ಕೇಳುವದು ಛನ್ನವೆಂಬ ಹೆಸರಿನ ದೋಷವಾಗುವದು.

೭. **ಶಬ್ದಕುಲಿತ ದೋಷ:**— ಯಾವದೊಂದು ಪಾಕ್ಷಿಕ ಅಥವಾ ಮಾಸಿಕ ಮೊದಲಾದವುಗಳ ಆಲೋಚನದ ವೇಳೆಯಲ್ಲಿ ಎಲ್ಲ ಮುನಿಗಳು ಕೂಡಿಕೊಂಡು ಆಲೋಚನೆಯನ್ನೇ ಮಾಡಹತ್ತಿದರೆ ಮತ್ತು ಆ ವೇಳೆಯಲ್ಲಿ ಎಲ್ಲರ ಶಬ್ದಗಳು ಜೋರಾಗಿ ಹೊರಡಹತ್ತಿರುವ ಆ ಸಮಯದಲ್ಲಿ ಲಜ್ಜೆ ಮೊದಲಾದ ತಮ್ಮ ದೋಷವನ್ನು ನಿವೇದನೆ ಮಾಡುವದು. ಇದಕ್ಕೆ ಶಬ್ದಕುಶಲ ದೋಷ ಎಂದು ಹೇಳುತ್ತಾರೆ.

೮. **ಬಹುದೋಷವೆಂದರೆ:**— ತನ್ನ ಹೃದಯದಲ್ಲಿ ಸ್ವಲ್ಪ ಪ್ರಾಯಶ್ಚಿತ್ತವನ್ನು ಗ್ರಹಣಮಾಡುವ ಇಚ್ಛೆಯಿಂದ ಈ ಅಪರಾಧದಗೋಸ್ಕರ ಈ ಪ್ರಾಯಶ್ಚಿತ್ತವು ಯೋಗ್ಯವದೆಯೋ ? ಇಲ್ಲವೋ ? ಈ ರೀತಿ ಅನೇಕ ಆಚಾರ್ಯರನ್ನು ಕೇಳುವರು. ಮತ್ತು ಎಷ್ಟರವರೆಗೆ ಕೇಳುತ್ತಿಗುವರೋ ಅಷ್ಟರವರೆಗೆ ಯಾರಾದರೂ ಆಚಾರ್ಯರು ಸ್ವಲ್ಪ ಪ್ರಾಯಶ್ಚಿತ್ತವನ್ನು ಹೇಳುವದಿಲ್ಲವೋ ಅಷ್ಟರವರೆಗೆ ತನಗೆ ಪ್ರಾಯಶ್ಚಿತ್ತವನ್ನು ತಗೊಳ್ಳುವದಿಲ್ಲ. ಇದಕ್ಕೆ ಬಹುದೋಷ ವೆನ್ನುವರು.

೯. ಅವ್ಯಕ್ತದೋಷ:— ಲಜ್ಜಾ ಅಥವಾ ಭಯದಿಂದ ಅಥವಾ ಅನ್ಯ ಯಾವದೊಂದು ಬೇರೆ ಕಾರಣದಿಂದ ಅಥವಾ ತನ್ನಂತೆ ಜ್ಞಾನ ಮತ್ತು ತಪದಿಂದ ತನ್ನಕ್ಕಿಂತ ಚಿಕ್ಕ ಮುನಿಗಳ ಹತ್ತರ ಹೋಗಿ ಆಲೋಚನೆ ಮಾಡುವದು ಇದಕ್ಕೆ ಅವ್ಯಕ್ತದೋಷ ವೆನ್ನುವರು.

೧೦. ತತ್ಸೇವಿತದೋಷ:— ಈ ಅಪರಾಧಗಳು ನನ್ನಂತೆ ಇವನಲ್ಲಿಯೂ ಇವೆ. ಅವನಿಗೆ ಕೊಟ್ಟ ಅಪರಾಧವೇ ನನ್ನಲ್ಲಿ ಇರುತ್ತವೆ. ಇದೇ ಪ್ರಾಯಶ್ಚಿತ್ತವಿದೆ. ಈ ರೀತಿಯಾಗಿ ಆಚಾರ್ಯರ ಮುಂದೆ ತಮ್ಮ ಅಪರಾಧಗಳನ್ನು ಹೇಳುವದು. ಇದಕ್ಕೆ ತತ್ಸೇವಿತದೋಷ ವೆನ್ನುವರು.

ಈ ಪ್ರಕಾರ ದೋಷಗಳನ್ನು ಇಟ್ಟುಕೊಂಡು ಆಲೋಚನೆ ಮಾಡುವವನ ತಪಶ್ಚರ್ಯವು ವ್ಯರ್ಥವೆಂದು ಹೇಳಿರುವರು. ಯಾರಿಗೆ ಕರ್ಮನಿರ್ಜರೆಯನ್ನು ಮಾಡಿ ಸಂಸಾರದಿಂದ ಪಾರಾಗಿ ಹೋಗುವದು ಇದೆಯೋ ಅವರು ದೋಷರಹಿತ ಆಲೋಚನೆಯನ್ನು ಅವಶ್ಯವಾಗಿ ಮಾಡಬೇಕೆಂದು ಹೇಳುವರು.

ಪ್ರತಿಕ್ರಮಣ ಸ್ವರೂಪವು

ಯಾವ ಮುನಿಗಳು ಒಬ್ಬರೇ ಇದ್ದಾಗ ಅಥವಾ ವಿಹಾರ ಮಾಡುವಾಗ ಚಾರಿತ್ರದಲ್ಲಿ ಯಾವದೊಂದು ಸ್ವಲ್ಪ ದೋಷವಾಗಿದ್ದಾಗ ಈ ನನ್ನ ಪಾಪಗಳು ಮತ್ತೆ ಯಾವಾಗಲೂ ಇಂಥ ಅಪರಾಧಗಳು ಇನ್ನು ಮುಂದೆ ನಾನು ಮಾಡಲಿಕ್ಕಿಲ್ಲಾ. ಈ ರೀತಿ ಹತ್ತಿದ ದೋಷಗಳಿಗೋಸ್ಕರ ಪಶ್ಚಾತಾಪವನ್ನು ಮಾಡುವದಕ್ಕೆ ಪ್ರತಿಕ್ರಮಣದೋಷ ವೆನ್ನುತ್ತಾರೆ.

ತದುಭಯ ವೆಂದರೇನು ಹೇಳುತ್ತಾರೆ.

ಯಾವ ಸಮಯದಲ್ಲಿ ಯಾರಾದರೂ ಸಾಧುಗಳಿಗೆ ಅಥವಾ ಮುನಿಗಳಿಗೆ ದುಷ್ಟ ಸ್ವಪ್ನಗಳು ಬಿದ್ದಾಗ ಅಥವಾ ಯಾವದೊಂದು ಇನ್ನೊಂದು ತರದ ಚಿಂತನೆಗಳು ಉತ್ಪನ್ನವಾದರೆ ಅಥವಾ ಇನ್ನೊಂದು ಯಾವದಾದರೂ ದೋಷವು ತಟ್ಟದರೆ ಆ ಮುನಿಗಳು ಆ ದೋಷ ಪರಿಪಾರಕ್ಕೋಸ್ಕರ ಆಲೋಚನ ಪೂರ್ವಕ ಆಚಾರ್ಯರ ಸನ್ಮುಖ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಾರೆ. ಈ ರೀತಿ ಮಾಡುವದಿದು ತದುಭಯ ಪ್ರಾಯಃಶ್ಚಿತ್ತವೆಂದು ಹೇಳುತ್ತಾರೆ. ಯಾವ ಮುನಿಗಳು ಯಾವದೊಂದು ದ್ರವ್ಯಕ್ಷೇತ್ರಕಾಲ ಮೊದಲಾದವುಗಳ ಸಂಬಂಧದಿಂದ ಹತ್ತಿದ ದೋಷಗಳನ್ನು ದೂರ ಮಾಡುವದರಲ್ಲಿ ಅಸ

ಮರ್ಥರಿರುತ್ತಾರೆಯೋ ಆ ದ್ರವ್ಯದ ಮತ್ತು ಕ್ಷೇತ್ರದ ಸಮ್ಮಂಧದಿಂದ ಅಥವಾ ಯಾವದೊಂಗು ಕಾಲದ ಸಂಬಂಧದಿಂದ ಉತ್ಪನ್ನವಾಗುವ ದೋಷಗಳನ್ನು ದೂರ ಮಾಡುವದಕ್ಕೆ ಅಸಮರ್ಥವಾಗಿರುತ್ತವೆಯೋ ಅಂಥ ಸಮಯದಲ್ಲಿ ಆಚಾರ್ಯರು ಅವನ ಆ ದ್ರವ್ಯಗಳ ತ್ಯಾಗ ಮಾಡಿಸುತ್ತಾರೆ. ಆ ಕ್ಷೇತ್ರದ ಬಗ್ಗೆಯೂ ತ್ಯಾಗ ಮಾಡಿಸುತ್ತಾರೆ. ಮತ್ತು ಕಾಲದ್ದೂ ತ್ಯಾಗ ಮಾಡಿ ಸುತ್ತಾರೆ. ಈ ರೀತಿ ದ್ರವ್ಯ ಮೊದಲಾದವುಗಳನ್ನು ತ್ಯಾಗ ಮಾಡಿಸುವದು ವಿವೇಕ ವೆಂಬ ಹೆಸರಿನ ಪ್ರಾಯಶ್ಚಿತ್ತವಿದೆ. ಅಥವಾ ಯಾವ ಮುನಿಗಳು ಅಥವಾ ಸಾದುಗಳು ಯಾವದೊಂದು ಪ್ರಮಾಣದಿಂದ ಯಾವದೊಂದು ಅಪ್ರಾ ಸುಕ ಪದಾರ್ಥವನ್ನು ಸೇವನೆ ಮಾಡಿದ್ದಾದರೆ ಅಥವಾ ಯಾವದೊಂದು, ತೊರೆದ ಪ್ರಾಶುಕ ಪದಾರ್ಥವನ್ನು ಸೇವನೆ ಮಾಡಿದ್ದರೆ ಮತ್ತು ತೊರೆದ ಪದಾರ್ಥವನ್ನು ತಿಂದೆಸು ಎಂದು ಸ್ಮರಣವಾದಲ್ಲಿ ಅದನ್ನು ತೊರೆಯುವದೇ ವಿವೇಕನಾಮ ಪ್ರಾಯಶ್ಚಿತ್ತವದೆ.

ಕಾಯೋರ್ತ್ಸರ್ಗ:– ಅಂತರ ಮುಹೂರ್ತ ಅಥವಾ ಇದರಿಂದ ಹೆಚ್ಚು ಸಮಯದ ವರೆಗೆ ಶರೀರದ ಮಮತ್ವವನ್ನು ತ್ಯಾಗ ಮಾಡುವದಕ್ಕಾಗಿ ಉತ್ಸರ್ಗ ವೆಂದು ಹೇಳುವರು. ಅಥವಾ ಅಂತರಮುಹೂರ್ತವರೆಗೆ ಅಥವಾ ಇದಕ್ಕೆ ಹೆಚ್ಚು ಕಾಲ ಉತ್ತಮ ಧ್ಯಾನ ಮಾಡುವದಕ್ಕೆ ಉತ್ಸರ್ಗವೆನ್ನುವರು. ಈ ಉತ್ಸರ್ಗವೆಂಬ ಪ್ರಾಯಶ್ಚಿತ್ತವನ್ನು ಮಲಮೂತ್ರಾದಿಗಳನ್ನು ತ್ಯಾಗ ಮಾಡಿದ ಮೇಲೆಯೂ, ಇದನ್ನು ಮಾಡಲ್ಪಡುತ್ತದೆ. ಈ ಪ್ರಕಾರವಾಗಿ ಸಂಕ್ಷಿಪ್ತವಾಗಿ ಪ್ರಾಯಶ್ಚಿತ್ತ ತಪದ ವರ್ಣನೆಯನ್ನು ಮಾಡಲಾಯಿತು.

ಮುಂದೆ ವಿನಯ ತಪದ ಸ್ವರೂಪವನ್ನು ಹೇಳುತ್ತಾರೆ:––

ಕಷಾಯ ಮತ್ತು ಇಂದ್ರಿಯಗಳನ್ನು ಸ್ವಾಧೀನ ಪಡಿಸಿಕೊಳ್ಳುವದಕ್ಕೆ ವಿನಯ ವೆನ್ನುವರು. ಮತ್ತು ಪಂಚಪರಮೆಷ್ಟಿ ರತ್ನತ್ರಯಧಾರಕ ಯೋಗ್ಯ ಪುರುಷರಲ್ಲಿ ಯಥಾಯೋಗ್ಯ ನಮ್ರವಾಗಿ ವಿನಯ ಮಾಡುವರು ಇದಕ್ಕೆ ವಿನಯತಪ ವೆನ್ನುವರು. (ವಿನಯದ ಭೇದಗಳು)

ದರ್ಶನವಿನಯ ಸಮ್ಯಕ್ ಜ್ಞಾನವಿನಯ ಸಮ್ಯಕ್ ಚ್ಯಾರಿತ್ರವಿನಯ ಮತ್ತು ಸಮ್ಯಕ್ ತಪವಿನಯ ಮತ್ತು ಉಪಚಾರವಿನಯ ಎಂದು ವಿನಯ ತಪಗಳಲ್ಲಿ ಐದು ಭೇದಗಳಿರುತ್ತವೆ. ಅದರಲ್ಲಿಯೂ ಶಂಕಾದಿ ಮೊದಲಾದ ಎಂಟು ದೋಷಗಳನ್ನು ತ್ಯಾಗಮಾಡುವದು ವಿನಯವೆಂಬ ಹೆಸರಿನ ತಪವಿರು

ವದು. ಇವುಗಳಲ್ಲಿ ಬರುವ ಶಂಕಾದಿ ಮೊದಲಾದ ಎಂಟು ದೋಷಗಳನ್ನು ತೊರೆಯಬೇಕು. ಶಂಕಾಕಾಂಕ್ಷಾ ಜುಗುಪ್ಸಾ ಅನ್ಯ ದೃಷ್ಟಿಪ್ರಶಂಸೆ ಮತ್ತು ಅನ್ಯದೃಷ್ಟಿ ಸ್ತುತಿ ಮೊದಲಾದ ಎಂಟು ದೋಷಗಳು ಇರುತ್ತವೆ.

(೧) ಶ್ರೀಭಗವಾನ್ ಜಿನೇಂದ್ರದೇವರು ಹೇಳಿದ ಧರ್ಮವೇ ಸತ್ಯವಾಗಿ ರುತ್ತದೆಯೋ ಹೇಗೆ? ಈ ರೀತಿ ಸಂಶಯ ಮಾಡುವದು ಶಂಕಾಯೆಂಬ ದೋಷವದೆ.

(೨) ದಾನ ಪೂಜಾ ಮೊದಲಾದ ಧರ್ಮಕಾರ್ಯಗಳನ್ನು ಮಾಡಿ ಅದರಿಂದ ಯಾವದೊಂದು ಭೋಗಾದಿ ಫಲದ ಇಚ್ಛೆಮಾಡುವದು ಕಾಂಕ್ಷಾ ಯೆಂಬದೋಷವು.

(೩) ಜಿನಮುನಿ ಮೊದಲಾದವರ ಮೇಲಿನ ಶರೀರಾದಿಗಳನ್ನು ನೋಡಿ ಗ್ಲಾನಿಮಾಡುವದು ಜುಗುಪ್ಸೆ ಎನ್ನುವರು.

(೪) ಅನ್ಯ (ಮಿಥ್ಯಾ)ಮತಿಗಳ ಪ್ರಶಂಸೆಯನ್ನು ಮಾಡುವದು ಅನ್ಯ ದೃಷ್ಟಿ ಪ್ರಶಂಸಾ ದೋಷವದೆ.

(೫) ಮತ್ತು ಅನ್ಯಮಿಥ್ಯಾದೃಷ್ಟಿಗಳ ಸ್ತುತಿಮೊದಲಾದವುಗಳನ್ನು ಮಾಡುವದು ಅನ್ಯದೃಷ್ಟಿಸ್ತುತಿರುತ್ತದೆ.

ಇದರೊಳಗೆ ಶಂಕಾ ಕಾಂಕ್ಷಾ ಮತ್ತು ಜಿಗುಪ್ಸಾ ಇವು ಮೂರು ದೋಷ ಗಳಿವೆ. ಮತ್ತು ಮೂಢದೃಷ್ಟಿ ಅನುಉಪಗುಹನ ಅಸ್ಥಿತಿಕರಣ ಅವಾತ್ಸಲ್ಯ ಮತ್ತು ಅ ಪ್ರಭಾವನಾ ಈ ಐದು ದೊಷಗಳು ಅನ್ಯದೃಷ್ಟಿ ಪ್ರಶಂಶೆ ಮತ್ತು ಅನ್ಯದೃಷ್ಟಿ ಸ್ತವ ಇವೆಲ್ಲವುಗಳು ಅಂತರ್ಭೂತವಾಗಿರುತ್ತವೆ. ಆದ್ದರಿಂದ ಇವುಗಳನ್ನು ಯಾವತ್ತು ತ್ಯಾಗಮಾಡಬೇಕಾಗುತ್ತದೆ. ಇದಕ್ಕೆ ದರ್ಶನವಿನಯ ವೆನ್ನುವರು.

ಮುಂದೆ ಜ್ಞಾನವಿನಯ

ದ್ರವ್ಯಕ್ಷೇತ್ರ ಮೊದಲಾದವುಗಳ ಶುದ್ಧತೆಯನ್ನಿಡುವದು ಮತ್ತು ವಸ್ತು ಗಳ ಪರಿಮಾಣ ಮಾಡುವದು ಸ್ವಾಧ್ಯಾಯಗೋಸ್ಕರ ಯಾವದೊಂದು ಪದಾ ರ್ಥವನ್ನು ಬಿಡುವದು. ಅಂದರೆ ನಾನು ಎಲ್ಲಿಯವರೆಗೆ ಪಾಠಗಳನ್ನು ಓದುವ ದಿಲ್ಲವೋ ಅಲ್ಲಿಯವರೆಗೆ ನಾನು ಯಾವದೊಂದು ವಸ್ತುವನ್ನು ಗ್ರಹಿಸಲಿಕ್ಕಿಲ್ಲ

ವೆಂದು ತ್ಯಾಗಮಾಡುವದಕ್ಕೆ ಅವಗ್ರಹ ಎನ್ನುವರು. ಶ್ರುತಜ್ಞಾನದ ತಿಳುವಳಿಕೆಯುಳ್ಳವರನ್ನು ಅತಿಶಯವಾಗಿ ಅಜ್ಞಾನದ ತಿರಸ್ಕಾರವನ್ನು ಮಾಡಕೂಡದು. ಆಯು ಶೀಲ ಮತ್ತು ಶ್ರುತಜ್ಞಾನದಿಂದ ಶೂನ್ಯ ಅಥವಾ ಅಧಿಕವಾದ ಉಪಾಧ್ಯಯರುಗಳನ್ನು ಪ್ರಶಂಸೆ ಮಾಡುವದು. ತನ್ನ ಜ್ಞಾನವನ್ನು ಮುಚ್ಚದೆ ತನ್ನ ಮತ್ತು ಉಪಾಧ್ಯಾಯ ಮೊದಲಾದ ಗುರುಗಳಿಂದ ಕಲಿತ ಜ್ಞಾನವನ್ನು ಮೆಚ್ಚುವದು. ಯಾಕಂದರೆ ಗುರುಗಳಿಂದ ಕಲಿತ ಅಥವಾ ತನ್ನ ಜ್ಞಾನವನ್ನು ಮುಚ್ಚುವದು ಜ್ಞಾನವರಣಿ ಕರ್ಮದ ಬಂಧನಕ್ಕೆ ಕಾರಣವಾಗಿದೆ. ಈ ರೀತಿ ಸ್ವರ ಅಕ್ಷರ ಮತ್ತು ಪದರೂಪ ಗ್ರಂಥವಲ್ಲಿ ಮತ್ತು ಅವುಗಳ ಅರ್ಥದಲ್ಲಿ ನ್ಯೂನ್ಯಾಧಿಕವಾಗಿ ಅಧ್ಯಯನ ಮಾಡುವದು ಅಥವಾ ಮಾಡಿಸುವದು ಇವೆಲ್ಲ ಜ್ಞಾನವಿನಯ ದೋಷಗಳಿವೆ. ಈ ರೀತಿ ದೋಷಗಳನ್ನು ತೊರೆದು ವಿನಯ ಮಾಡುವದು ಸಮ್ಯಕ್ ಜ್ಞಾನಕ್ಕೆ ಕಾರಣವಿದೆ. ಮತ್ತು ಸ್ವರ್ಗ ಮೋಕ್ಷಕ್ಕೂ ಕಾರಣವಾಗಿರುತ್ತದೆ.

ಮುಂದೆ ತಪವಿನಯನ್ನು ಹೇಳುತ್ತಾರೆ.

ಆರು ಅವಶ್ಯಕ ಕ್ರಿಯಗಳಲ್ಲಿ ಲೀನವಾಗುವದೂ ಅನೇಕ ಪ್ರಕಾರದ ಉತ್ತಮ ಗುಣಗಳನ್ನು ಉನ್ನತ ಮಾಡುವದು ನಾನಾಪ್ರಕಾರದಿಂದ ತಪಶ್ಚರ್ಯವನ್ನು ಮಾಡುವದು ತಪಶ್ಚರ್ಯ ಮಾಡತಕ್ಕಂಥ ತಪಶ್ವಿಗಳನ್ನು ಕಂಡು ಕೇಳಿ ಹೃದಯದಲ್ಲಿ ಸಂತೋಷ ಮಾನಿಸುವದು ಇವೆಲ್ಲವುಗಳಿಗೆ ಮುನಿಗಳ ತಪವಿನಯವೆನ್ನುತ್ತಾರೆ.

ಚ್ಯಾರಿತ್ರ ವಿನಯುವನ್ನು ಹೇಳುತ್ತಾರೆ

ಚ್ಯಾರಿತ್ರವನ್ನು ಧಾರಣ ಮಾಡುವಂಥ ಸಾಧುಗಳ ಭಕ್ತಿಯನ್ನು ಮಾಡುವದು. ಇನ್ನೊಬ್ಬ ಚ್ಯಾರಿತ್ರಧಾರಿಗಳಾದ ಮುನಿಗಳ ನಿಂದೆಯನ್ನು ಮಾಡದಿರುವದು. ಮತ್ತು ಪರಿಷಹಗಳನ್ನೆ ಗೆಲ್ಲುವದರಲ್ಲಿ ಉಪಸರ್ಗಗಳನ್ನು ವಹಿಸುದರಲ್ಲಿ ಯಾವತ್ತು ಉದ್ಯಮುವಾಗಿರುವದು. ಇದಕ್ಕೆ ಮುನಿಗಳ ಚ್ಯಾರಿತ್ರ ವಿನಯುವೆಂದು ಹೇಳುತ್ತಾರೆ.

ಉಪಚ್ಯಾರವಿನಯುವೇನಂದರೆ

ಉಪಚ್ಯಾರ ವಿನಯುವನ್ನು ಧಾರಣಮಾಡುವದು ಗುಣಿಜನರಹತ್ತರ ಹೋಗಿ ಯಥಾಯೋಗ್ಯವಾಗಿ ಅವರ ಉಪಚ್ಯಾರ ಮಾಡುವದು. ಇದರಲ್ಲಿ

ಎರಡು ಭೇಧಗಳಿವೆ. ಒಂದು ಪ್ರತ್ಯಕ್ಷ ಮತ್ತೊಂದು ಪರೋಕ್ಷ. ಪ್ರತ್ಯಕ್ಷ ಉಪಚ್ಯಾರ ವಿನಯವನ್ನು ಹೇಳುತ್ತಾರೆ. ಆಚ್ಯಾರ್ಯರು ಬಂದದ್ದನ್ನು ನೋಡಿ ಎದ್ದು ನಿಲ್ಲುವದು ಮತ್ತು ಅವರಿಗೆ ನಮಸ್ಕಾರ ಮಾಡುವದು ಅವರು ಕೂತ ಮೇಲೆ ಅವರಿಗಿಂತ ಕೆಳಗೆ ಕೂತುಕೊಳ್ಳುವದು. ಆಚ್ಯಾರ್ಯರು ಕುಳಿತಿರುವ ಶಯನ ಮತ್ತು ಉಚ್ಚಾಸನ ಮೇಲೆ ಅಥವಾ ಅವರ ಯಾವದೇ ಆಸನದ ಮೇಲೆ ಕೂತುಕೊಳ್ಳಕೂಡದು. ಇದು ಪ್ರತ್ಯಕ್ಷ ವಿನಯವು. ಇದರಂತೆ ಉಪಾಧ್ಯಾಯ, ಪ್ರವರ್ತಕ, ಸ್ಥವಿರ, ಮತ್ತು ಗಣಧರ, ಮುಂತಾದ ಮುನಿಗಳು ಹೊರಟರೆ ಅವರ ಹಿಂದಿನಿಂದ ಗಮನಮಾಡುವದು ಅವರು ಮಾತಾಡಿದನಂತರ ಆವರ ಅನುಕೂಲತೆ ಪ್ರಕಾರ ಮಾತಾಡುವದು. ಮತ್ತು ಅವರ ದರ್ಶನ ಮಾಡಿದನಂತರ ಅಥವಾ ಅವರು ಮಾತಾಡಿದನಂತರ ಕೇಳಿ ಆನಂದ ಮಾನಿಸಿ ಅವರ ವಿನಯ ಮಾಡುವದು ಇದು ಪ್ರತ್ಯಕ್ಷ ವಿನಯವು.

ಇನ್ನು ಪರೋಕ್ಷ ವಿನಯವನ್ನು ಹೇಳುತ್ತಾರೆ. ಗಣನಾಯಕರಾದ ಆಚ್ಯಾರ್ಯರು ಪರೋಕ್ಷವಿಲ್ಲದಿದ್ದರೆ ಮೋಕ್ಷದ ಕಾರಣಭೂತವಾದ ಅವರ ಬುದ್ಧಿಯಲ್ಲಿ ಬಂದ ಪದಾರ್ಥಗಳನ್ನು ಪ್ರಗಟ ಮಾಡುವದೂ ಮತ್ತು ಅವರು ಹೇಳಿದ ಶಾಸ್ತ್ರವನ್ನು ಹೆಚ್ಚಾಗಿ ಪ್ರಗಟಮಾಡುವದೂ ಅವರ ಕೀರ್ತಿಯು ಹೆಚ್ಚಾಗಿ ಪ್ರಗಟವಾಗುವಂತೆ ಬೆಳಗಿಸುವದೂ ಮತ್ತು ಅವರ ಆಜ್ಞೆಯನ್ನು ಪಾಲಿಸುವದೂ ಮತ್ತು ಅವರಿಗೆ ನಮಸ್ಕಾರ ಮಾಡುವದೂ ಅವರಿಗೆ ಅನುಕೂಲವಾಗಿ ನಡೆಯುವದೂ ಇವೇ ನೊದಲಾದವುಗಳು ಪರೋಕ್ಷ ಉಪಚ್ಯಾರ ವಿನಯವೆಂದೆನ್ನುವರು.

(ಇನ್ನು ಮುಂದೆ ವಯ್ಯಾವೃತ ತಪವನ್ನು ಹೇಳುತ್ತಾರೆ)

ಆಚ್ಯಾರ್ಯ, ಉಪಧ್ಯಾಯ, ತಪಶ್ವಿ, ಶೈಕ್ಷ, ಗ್ಲಾನ, ಗಣ, ಕುಲ, ಯತಿ, ಮತ್ತು ಮನೊಜ್ಞ. ಈ ಪ್ರಕಾರ ಹತ್ತುಪ್ರಕಾರದ ಮುನಿಗಳಿರುತ್ತಾರೆ. ಈ ಹತ್ತು ಪ್ರಕಾರದ ಮುನಿಗಳಿಗೆ ಅವರಲ್ಲಿ ಭಾದೆಬಂದ ಅವಸಕದಲ್ಲಿ ಅಥವಾ ರೋಗಾದಿಗಳು ಬಂದಾಗ ಅವರ ಸೇವೆ ಅಥವಾ ಶುಶ್ರೂಶಾ ಮಾಡುವದು. ಇದರ ವಿಸ್ತಾರವನ್ನು ಅನ್ಯ ಗ್ರಂಥದಲ್ಲಿ ನೋಡಬಹುದು.

ಮುಂದೆ ಸ್ವಾಧ್ಯಾಯ ಸ್ವರೂಪವನ್ನು ಹೇಳುತ್ತಾರೆ.

ತನ್ನ ಆತ್ಮ ಹಿತವನ್ನು ಮಾಡಿಕೊಳ್ಳುವವನು ಯಾವ ವಚನದಿಂದ ಅಧ್ಯಯನ ಮಾಡುತ್ತಾನೆಯೋ ಪಠಣ ಮಾಡುತ್ತಾನೆಯೋ ಅದರ ಅರ್ಥವನ್ನು

ತಿಳಿದುಕೊಂಡು ಗ್ರಹಣ ಮಾಡುತ್ತಾನೆಯೋ ಇದಕ್ಕೆ ಸ್ವಾಧ್ಯಾಯವೆಂದು ಹೇಳುತ್ತಾರೆ. ಈ ಸ್ವಾಧ್ಯಾಯವೆಂಬ ತಪವು ಎಲ್ಲ ತಪಗಳಲ್ಲಿ ಶ್ರೇಷ್ಠವಾದದ್ದು. ಹನ್ನೆರಡು ತಪಗಳಲ್ಲಿ ಈ ಸ್ವಾಧ್ಯಾಯವು ಶ್ರೇಷ್ಠವಾದ ತಪವು. ವಾಚನಾ ಪ್ರಚ್ಛನಾ ಅನುಪ್ರೇಕ್ಷಾ ಆಮ್ನಾಯ ಮತ್ತು ಧರ್ಮೋಪದೇಶ ಇವು ಸ್ವಾಧ್ಯಾಯ ತಪದ ಭೇದಗಳಿರುತ್ತವೆ. ಆದ್ದರಿಂದ ಆತ್ಮ ಕಲ್ಯಾಣ ಮಾಡಿಕೊಳ್ಳುವ ಭವ್ಯ ಜನರು ಸ್ವಾಧ್ಯಾಯವನ್ನು ಅವಶ್ಯವಾಗಿ ಮಾಡಬೇಕೆಂದು ಹೇಳುತ್ತಾರೆ.

ಮುಂದೆ ಉತ್ಸರ್ಗ ತಪವನ್ನು ಹೇಳುತ್ತಾರೆ.

ಅಂತರಂಗ ಮತ್ತು ಬಹಿರಂಗ ಪರಿಗ್ರಹವನ್ನು ತೊರೆಯುವದು ಮತ್ತು ಶರೀರದಿಂದ ಮಮತ್ವವನ್ನು ತೊರೆಯುವದು ಇದು ಮುನಿಗಳ ಉತ್ಸರ್ಗವೆಂಬ ತಪ ವಿರುತ್ತದೆ. ಈ ಉತ್ಸರ್ಗವೆಂಬ ತಪವು ಉತ್ತಮ ತಪವು. ಉತ್ತಮ ಧ್ಯಾನದ ಉತ್ಕೃಷ್ಟ ಸಿದ್ಧಿಗೆ ಕಾರಣವಿದೆ. ಆಸ್ದರಿಂದ ಯಾರಿಗೆ ಆತ್ಮ ಕಲ್ಯಾಣ ಮಾಡಿಕೊಳ್ಳುವ ಇಚ್ಛೆಯಿದೆಯೋ ಅವರು ಶರೀರ ಮಮತ್ವವನ್ನು ತೊರೆದು ಧ್ಯಾನದಲ್ಲಿ ಲೀನವಾಗುವದೇ ಕರ್ಮನಿರ್ಜರೆಗೆ ಕಾರಣವಾಗುವದು. ಈ ರೀತಿ ತಪಗಳನ್ನು ಮಾಡಬೇಕು.

ಧ್ಯಾನ ತಪ ಸ್ವರೂಪವನ್ನು ಹೇಳುತ್ತಾರೆ.

ಅಂತರ ಮೂಹರ್ತದವರೆಗೆ ಅನ್ಯ ಎಲ್ಲ ಚಿಂತನೆಗಳನ್ನು ಮನ ವಚನ ಕಾಯ ಪೂರ್ವಕವಾಗಿ ತೊರೆದು ತನ್ನ ಮನವನ್ನು ಯಾವದೊಂದು ಪದಾರ್ಥ ದಲ್ಲಿ ಇರಿಸಿ ಏಕಾಗ್ರವಾಗಿ ಆತ್ಮನ ನಿರೀಕ್ಷಣ ಮಾಡುವದು ಉತ್ತಮ ಧ್ಯಾನ ವೆಂಬ ಉತ್ತಮ ತಪವೆಂದು ಹೇಳುತ್ತಾರೆ. ಈ ಧ್ಯಾನ ವೆಂಬ ತಪವು ಸ್ವರ್ಗ ಮತ್ತು ಮೋಕ್ಷವನ್ನು ಸಾಕ್ಷಾತ್‌ನಾಗಿ ಮಾಡಿಕೊಡುವದಾಗಿದೆ. ಈ ಪ್ರಕಾರ ತಿಳಿದು ಭವ್ಯವರು ಪ್ರಾಣಿಸಂಯಮಪೂರ್ವಕ ಕಷಾಯಗಳನ್ನು ತೊರೆದು ತಕ್ಕ ಮಟ್ಟಿಗೆ ಧ್ಯಾನ ತಪದ ಅಭ್ಯಾಸವನ್ನು ಮಾಡುವವನು ಆಯು ಅವ ಸಾನದಲ್ಲಿ ಎಷ್ಟೋ ಬಾಧೆಗಳು ಆದರೂ ಕೂಡ ಭಾದೆಗೆ ಹೆದರದೆ ಶರೀರವನ್ನು ತೊರೆದು ಉತ್ತಮ ಸ್ವರ್ಗಾದಿ ಗತಿಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಆದ್ದರಿಂದ (ಇಚ್ಛಾನಿರೋಧ ತಪಸಾ ನಿಜ್ಜರಾಚ್) ಅರ್ಥಾತ್ ಯಾವ ರೀತಿ ಬಂಗಾರ ಮೊದಲಾದ ಪದಾರ್ಥಗಳ ಶುದ್ಧಿಯು ಕಾಸಿ ಕುಟ್ಟುವದರಿಂದ ಹ್ಯಾಗೆ ಆಗುತ್ತದೆಯೋ ಹಾಗೆ ಆತ್ಮನ ಶುದ್ಧಿಯೂ ಕೂಡಾ ಇಚ್ಛೇಯ ನಿರೋಧವನ್ನು ಮಾಡಿದರೆ ಆಗುತ್ತದೆ. ಇಚ್ಛಾಪೂರ್ವಕವಾಗಿ ಭೋಗೋಪ

ಭೋಗರೂಪ ಪದಾರ್ಥಗಳನ್ನು ಗ್ರಹಣ ಮಾಡುವದರಿಂದ ಅದರಲ್ಲಿಯೇ ರತ ವಾಗುವದರಿಂದ ಅನೇಕ ಪ್ರಕಾರದ ಶಾರೀರಿಕ, ಮಾನಸಿಕ ರೋಗಗಳು ಬೆಳೆ ಯುತ್ತವೆ. ಮತ್ತು ಅದರ ಸಂಬಂಧವಾಗಿ ಅನೇಕ ವೇದನೆಗಳೂ ಸಹ ಆಗು ತ್ತವೆ. ಇಚ್ಛೆಯೇ ಸಂಸಾರಕ್ಕೆ ಮೂಲ ಕಾರಣವಾಗಿದೆ. ಸಂಸಾರವು ದುಃಖಕ್ಕೆ ಕಾರಣವಾಗಿದೆ.

ಶಪದನುಃ :—

ಶರೀರದಲ್ಲಿ ಮಹತ್ವರೂಪವಾದ ಇಚ್ಛೆಯಾಗುವದರಿಂದರಿಂದ ಶರೀರದಲ್ಲಿ ಕಂಟಕ ಮೊದಲಾದವುಗಳು ಆಗುವದರಿಂದ ಜ್ವರ ಬರುವದರಿಂದ ಚಳಿ ಉಷ್ಣತೆ ಯಿಂದಾ ಹಸಿವು ಬಾಯಾರಿಕೆಯಿಂದಾ ಶರೀರದಲ್ಲಿ ಅನೇಕ ವ್ಯಥೆಗಳಾಗುತ್ತವೆ. ಇದರ ಕಾರಣವೇ ಶರೀರಮಮತ್ವ ಮತ್ತು ಇಚ್ಛೆಯು ಕಾರಣಾ ಈದನ್ನು ರಕ್ಷಿಸ ಬೇಕೆಂದು ಯಾವಾಗ ಮಮತ್ವ ಬುದ್ಧಿಯು ಉಂಟಾಗುತ್ತದೆಯೋ ಆಗ್ಗೆ ಆತ್ಮಾನ ಸಂಬಂಧಿಸಲ್ಪಟ್ಟವುಗಳು ಸಾಗುತ್ತವೆ. ಆದರೆ ನಾವು ನಿಜವಾಗಿ ವಿಚಾ ರಿಸಿ ನೋಡಿದರೆ ಇವು ಆತ್ಮಾನ ಧರ್ಮಗಳಲ್ಲ ಇವು ಆತ್ಮಾನ ಪರಉಪಯೋಗ ದಿಂದ ಆಗುವ ಪರ ಪರಣತಿಗಳು ಇರುತ್ತವೆ. ಯಾವಾಗ ಆತ್ಮಾನು ತನ್ನ ಸ್ವಭಾವ ಪರಣತಿಯನ್ನು ಬಿಟ್ಟು ಮಿಥ್ಯಾ ಪರಣತಿಯಲ್ಲಿ ಪರಣಮಿಸುವನೋ ಆಗ ತನ್ನ ನಿಜವಾದ ಸ್ವರೂಪವನ್ನು ಮರೆತು ಪರವೇ ನಾನೆಂದು ಅನ್ನುವ ಬುದ್ಧಿಯನ್ನು ಮಾಡಿ ಜಡವಾದ ಪರ ಪರಣತಿಯಲ್ಲಿ ಪರಿಣಮಿಸಿ ಅಂತವಿಲ್ಲದ ಸಂಸಾರದ ಪರಣತಿಗೆ ಎಡೆಯಾಗುತ್ತಾನೆ. ಆದ್ದರಿಂದ ಇವನ್ನೆಲ್ಲ ಜ್ಞಾನಿಗಳು ತಮ್ಮಲ್ಲಿ ತಾವಾಗಿಯೇ ತಮ್ಮಿಂದ ಅರಿದು ಸ್ವಪರ ಭೇದವನ್ನು ಮಾಡಿಕೊಂಡು ಪರವನ್ನು ತೆಗೆದು ನನ್ನಾತ್ಮಾ ನಿಜವಾಗಿ ಪರಸ್ವರೂಪವಲ್ಲವೆಂದು ತಿಳಿದು ನನ್ನಾತ್ಮಾನು ಅಖಂಡ ಜ್ಞಾನದರ್ಶನ ಮೊದಲಾದ ಸುಖ–ಸಂಪತ್ತಿಯುಳ್ಳವ ನಾಗಿದ್ದಾನೆ. ಆದರೂ ನಾನು ಪರವಸ್ತುವಿನ ಸಂಬಂಧದಿಂದ ನಾನೇ ಪರ ಬುದ್ಧಯಿಂದ ಪ್ರಭಾವನೆಯನ್ನು ಮಾಡಿಕೊಡು ಈ ಸಂಸಾರದಲ್ಲಿ ಜಡರೂಪ ವುಳ್ಳವನಾಗಿ ತಿರುಗುತ್ತಿರುತ್ತೇನೆ.— ಇದನ್ನರಿದು ಭವ್ಯ ಜೀವರು ಮೇಲೆ ಹೇಳಿದ ಪ್ರಕಾರ ಹನ್ನೆರಡು ವಿಧವಾದ ತಪದ ಭಾವಗಳನ್ನು ಚನ್ನಾಗಿ ತನ್ನಲ್ಲಿ ಅರಿತುಕೊಂಡು ಆಚರಿಸಿದರೆ ಅವನು ಸ್ವಲ್ಪ ದಿವಸಗಳಲ್ಲಿಯೇ ಸಂಪೂರ್ಣವಾಗಿ ಕರ್ಮನಿರ್ಜರೆಯನ್ನು ಮಾಡಿ ಮೋಕ್ಷ ಪದವನ್ನು ಪಡೆಯುತ್ತಾನೆಂದು ಭಾವವು.

—: ಇತಿ ಓಂ ಹ್ರೀಂ ತಪ ಧರ್ಮಾಯನಮಃ :—

೮ ಉತ್ತಮ ತ್ಯಾಗಧರ್ಮಃ

ತ್ಯಜತೀತಿ ತ್ಯಾಗಃ—

ತೊರೆಯುವದಕ್ಕೆ ತ್ಯಾಗವೆಂದು ಹೇಳುತ್ತಾರೆ. ಯಾವ ದಾನದಲ್ಲಿ ತನ್ನ ಮಾನ ಕೀರ್ತಿಯ ಅಪೇಕ್ಷೆಯಿಲ್ಲವೋ ಅದಕ್ಕೆ ದಾನವೆಂದು ಹೇಳುತ್ತಾರೆ. ರಾಗದ್ವೇಷ ಮೊದಲಾದ ಭಾವನೆ ಅಥವಾ ಲೋಭಿಕಷಾಯಗಳನ್ನು ಮನ ವಚನ ಕಾಯಗಳಿಂದ ತೊರೆಯುವುದೇ ದಾನವು, ಈ ಕಷಾಯಗಳನ್ನು ದೂರ ಮಾಡಬೇಕಾದರೆ ಹೊರಗಿನ ಪರವಸ್ತುಗಳ ಮಮತ್ವ ಭಾವವನ್ನು ತೊರೆಯುವದೇ ಉತ್ತಮ ತ್ಯಾಗವಿದೆ. ತ್ಯಾಗ ಮಾಡುವ ಹೇತು ಏನೆಂಬುದನ್ನು ಉಮಾ ಸ್ವಾಮಿಗಳು ಹೀಗೆ ಹೇಳುತ್ತಾರೆ.

" **ಅನುಗ್ರಹಾರ್ಥಂ ಸ್ವಸ್ಯಾತಿ ಸರ್ಗೋದಾನಂ** " ಅರ್ಥಾತ್ ಅನುಗ್ರಹ ಸಲುವಾಗಿ ಮಮತ್ವ ಭಾವವನ್ನು ತೊರೆಯುವದೇ ತ್ಯಾಗ. ನಿಜವಾಗಿ ವಿಚಾರಿಸಿದರೆ ದಾನ ಕೊಡುವ ಆ ವಸ್ತುವನ್ನು ಯಾವ ರೂಪದಲ್ಲಿ ಕೊಡುವರೋ ಅದು ಮುಖ್ಯ. ಕೊಟ್ಟ ಮೇಲೆ ಪುನಃ ಆ ವಸ್ತುವಿನಲ್ಲಿ ಮಮತ್ವ ಭಾವವು ಉಂಟಾಗದಂತೆ ಕೊಡುವದೇ ತ್ಯಾಗವು. ನಾವು ದಾನ ಕೊಡುವಾಗ ಯಾವದೊಂದು ಅಪೇಕ್ಷೆಯನ್ನು ಮನಸ್ಸಿನಲ್ಲಿ ನಿದಾನ ಮಾಡಿಕೊಂಡು ದಾನ ಕೊಟ್ಟರೆ ಮುಂದೆ ನಮಗೆ ಅದರ ಫಲ ಸಿಕ್ಕದಿದ್ದರೆ ಮನಸ್ಸಿನಲ್ಲಿ ಅರ್ತ ರೌದ್ರ ಪರಿಣಾಮವಾಗುವ ಸಂಭವವುಂಟು. ಅದು ಪಾಪ ಬಂಧಕ್ಕೆ ಕಾರಣವಾಗಿ ದೀರ್ಘ ಸಂಸಾರದಲ್ಲಿ ಪುನಃ ಪರಿಭ್ರಮಣ ಮಾಡಬೇಕಾದೀತು. ದಾನಿಧರ್ಮಾತ್ಮರು ಸ್ವಪರ ಹಿತದ ಸಲುವಾಗಿ ತ್ಯಾಗದ ಸದ್ಭಾವನೆಯಿಂದ ಮಾಡುವದೇ ದಾನವು- ಎಂದು ಶ್ರೀ. ಜಿನೇಂದ್ರ ದೇವರು ಹೇಳಿರುತ್ತಾರೆ. ದಾನವು ಎರಡು ವಿಧವಾಗಿದೆ. ಅಂತರಂಗದಾನ ಮತ್ತೊಂದು ಬಹಿರಂಗದಾನ. ಅಂತರಂಗ ದಾನವೆಂದರೆ; ಯಾವುದರಲ್ಲಿ ತನ್ನ ಆತ್ಮನನ್ನು ಅನಾದಿಕಾಲದಿಂದ ಬೆನ್ನಟ್ಟಿ ಬಂದ ಮೋಹ ರಾಗದ್ವೇಷ ಮಮತ್ವಾದಿ ಭಾವಗಳಿಂದ ಬಿಡುಗಡೆ ಮಾಡುವ ನಿಮಿತ್ತವಿದೆಯೋ, ಆತ್ಮನನ್ನು ನಿರ್ಬಂಧ ಮಾಡುವ ಸಲುವಾಗಿ ಯಾವ ದಾನವನ್ನು ಕೊಡಲಾಗಿದೆಯೋ ಅದಕ್ಕೆ ಅಂತರಂಗದಾನವೆಂದು, ಹೇಳಿದರು. ಬಾಹ್ಯದಾನವೆಂದರೆ, ಯಾವುದರಲ್ಲಿ ಈನ್ನೊಂದು ಜೀವನ ಉಪಕಾರಕ್ಕೆಂದು ಅವರವರ ಅವಶ್ಯಕತಾನುಸಾರವಾಗಿ ಆಹಾರ, ಔಷಧ, ಶಾಸ್ತ್ರ ಮತ್ತು ಅಭಯ

ಈ ನಾಲ್ಕು ಪ್ರಕಾರದ ದಾನಗಳನ್ನು ಕೊಡಲಾಗುವದೋ ಅದು ಬಾಹ್ಯದಾನ. ಅದಲ್ಲದೆ ಇನ್ನೂ ಬೇರೆ ಭಕ್ತಿದಾನ, ಕರುಣಾದಾನ, ಕೀರ್ತಿದಾನ, ಸಮದಾನ ಮೊದಲಾದ ದಾನಗಳಿವೆ. ಇದರಲ್ಲಿ ಕಡೆಯ ಸಮದಾನ ಮತ್ತು ಕೀರ್ತಿದಾನ ಈ ಎರಡರಲ್ಲಿ ಕೇವಲ ಲೌಕಿಕ ಮತ್ತು ವ್ಯವಹಾರಕ್ಕೋಸ್ಕರವೇ ಈ ದಾನ ಕೊಡುವದಾಗಿದೆ, ಇದರಲ್ಲಿ ಪರಮಾರ್ಥದ ಅಂಶಮಾತ್ರವೂ ಅಲ್ಲ.

ಮೊದಲಿನ ಈ ಎರಡು ದಾನಗಳು ಶ್ರೇಷ್ಠವಾಗಿವೆ. ಭಕ್ತಿದಾನವನ್ನು ಶ್ರೇಷ್ಟ ಸಂಯಮ ಚಾರಿತ್ರಧಾರಿಯಾದ ಮುನಿಗಳಿಗೆ ಮತ್ತು ಸಾಧರ್ಮಿ ಸಮ್ಯಗ್‌ದೃಷ್ಟಿ ಶ್ರಾವಕ, ವ್ರತಿ ಜನಗಳಿಗೆ ಸ್ವಪರ ಕಲ್ಯಾಣದ ಸಲುವಾಗಿ ಅಥವಾ ಸಂಯಮ ಸಾಧನಕ್ಕಾಗೆಂದು ಭಕ್ತಿಯಿಂದ ಕೊಡುವ ಈ ದಾನವು ಭಕ್ತಿದಾನ ಅಥವಾ ಸತ್ಪಾತ್ರದಾನವೆಂದು ಹೇಳುವರು. ಈ ದಾನವು ಮನುಷ್ಯನಿಗೆ ಸ್ವರ್ಗ-ಮೋಕ್ಷಾದಿಗಳಿಗೆ ಕಾರಣವಾಗಿ ಸಂಸಾರದಿಂದ ಬಿಡುಗಡೆ ಮಾಡಲು ಕಾರಣವಾಗುತ್ತದೆ.

ಇದರೊಳಗೆ ಕರುಣಾದಾನವೆಂಬುದು ಹೊಟ್ಟೆಗಿಲ್ಲದೆ ಹೀನ ದುಃಖಿ ಜನರಿಗೆ ಕರುಣೆಯಿಂದ ಅನ್ನದಾನವನ್ನು ಕೊಡುವದು ಕರುಣಾದಾನವೆಂದು ಹೇಳುವರು. ಇವು ಎರಡು ವಿಧವಾಗಿವೆ. ಒಂದು ಸುದಾನ ಮತ್ತೊಂದು ಕುದಾನ ಸುದಾನವೆಂದರೆ ಭಕ್ತಿಯಿಂದ ಸಂಯಮ ಮುನಿಗಳಿಗೆ ಚಾರಿತ್ರ ಮತ್ತು ಅವರ ಸಂಯಮದ ರಕ್ಷಣೆಯಾಗಿ ಚಾರಿತ್ರ ವೃದ್ಧಿಗೆಂದು ಕೊಡಲಾಗುವದು.

ಸಮದಾನ, ಸಮಾನ ಜಾತಿಯಲ್ಲಿ ಕನ್ಯಾದಾನ ಕೊಡುವದು ತಗೊಳ್ಳುವದು ಅಂದರೆ, ಗೃಹಸ್ಥಾಚಾರ್ಯ ಮೊದಲಾದ ವರಗಳಿಗೆ ಧರ್ಮದ ವೃದ್ಧಿಗೆಂದು ಕನ್ಯಾದಾನಾದಿಗಳನ್ನು ಕೊಡುವದು, ತಗೊಳ್ಳುವದಿದು ಸಮದಾನವಾಗಿದೆ.

ಕುದಾನ ಅಂದರೆ ತನ್ನ ಲೌಕಿಕ ಕೀರ್ತಿಯ ಸಲುವಾಗಿ ಪಾತ್ರ ಅಪಾತ್ರದ ವಿಚಾರವನ್ನು ಮಾಡದೆ ಕೇವಲ ವಿಷಯ ಕಷಾಯಗಳನ್ನು ವೃದ್ಧಿಗೊಳಿಸುವ ವಸ್ತುಗಳನ್ನು ಕೊಡುವದು; ಅಂದರೆ ಆಕಳು, ಆನೆ, ಕುದುರೆ, ಎಮ್ಮೆ, ಚಕ್ಕಡಿ, ದುಡ್ಡು, ಮನೆ, ಹೊಲ ಮೊದಲಾದವುಗಳನ್ನು ಕೊಡುವದಿದು ಕೀರ್ತಿ ದಾನವಿದೆ.

ಆದರೆ ಇಂಥ ದಾನಗಳು ಕೇವಲ ಲೋಕ ಕೀರ್ತಿಗಾಗಿ ಕೊಡುವದಾಗಿವೆ. ಇವು ಪಾಪಾಸ್ರವಕ್ಕೆ ಕಾರಣವೆಂದು ತಿಳಿಯಬೇಕು.

ಹಿಂದೆ ಹೇಳಿದ ಆಹಾರ, ಶಾಸ್ತ್ರ, ಅಭಯ, ಔಷಧ ಈ ನಾಲ್ಕು ದಾನಗಳು ಸ್ವಪರ ಕಲ್ಯಾಣದ ನಿಮಿತ್ಯಗಳಾಗಿವೆ. ಈ ನಾಲ್ಕು ದಾನಗಳನ್ನು ದ್ರವ್ಯಕ್ಷೇತ್ರಕಾಲದ ಅಪೇಕ್ಷೆಯಿಂದ ಕೊಡಲಾಗಿದೆ. ರೋಗಿ ಜನರ ರೋಗ ನಿವೃತ್ತಿಗಾಗಿ ಸಿಂಯಮದ ರಕ್ಷಣೆಗಾಗಿ ಔಷಧ ದಾನ ಕೊಡುವದಾಗಿದೆ. ಆಹಾರದಾನ ಸಮಯದಲ್ಲಿ ಸಂಯಮದ ರಕ್ಷಣೆಗಾಗಿ ಈ ಆಹಾರವು ಶರೀರ ಸಾಧನವಿದೆಯೆಂದರಿದು ಆಹಾರದಾನ ಕೊಡಲಾಗಿದೆ. ಯಾರಾದರೂ ಸಾಧರ್ಮಿ ಜನರು ಅಥವಾ ಮುನಿಗಳು ಧರ್ಮಾಚರಣೆಯಲ್ಲಿ ಭಯಪಡು ಪ್ರಸಂಗದಲ್ಲಿಅವರಿಗೆ ಅಭಯ ಕೊಡುವದು ಮತ್ತು ಭೂತದಯಾ, ಸರ್ವ ಸೂಕ್ಷ್ಮ ಜೀವಿಗಳ ರಕ್ಷಣೆಗಾಗಿ ನವಿಲಗರಿಯ ಪಿಂಛಿಯನ್ನು ಜೀವ ರಕ್ಷಣೆ ಗಾಗಿ ಕಟ್ಟಿ ಕೊಡುವದೂ ಅಭಯದಾನವಾಗಿದೆ. ಈ ನಾಲ್ಕೂ ಧಾನಗಳು ಪರಂಪರೆಯಿಂದ ಮೋಕ್ಷಕ್ಕೆ ಸಾಧನೆನಳಿವೆ. ಎಂದು ಅರಿದು ಭವ್ಯಶ್ರಾವಕ ಜನರು ಪಾತ್ರಾಪಾತ್ರವನ್ನರಿದು ದಾನ ಕೊಡುವದೇ ತನ್ನ ಮತ್ತು ಇನ್ನೊಬ್ಬರ ಕಲ್ಯಾಣದ ಮಾರ್ಗವೆಂದರಿಯಬೇಕು.

ಆದರೆ ಈಗಿನ ಕಾಲದಲ್ಲಿ ಬಹಳವಾಗಿ ಎಷ್ಟೋ ಜನರು ಕೇವಳ ತಮ್ಮ ಹೆಸರು ಅಥವಾ ಜಗತ್ತಿನಲ್ಲಿ ಕೀರ್ತಿ ಹರಡಬೇಕೆಂದು, ಮಾನ ಕಷಾಯಕ್ಕೆ ಬಲಿ ಬಿದ್ದು ದಾನ ಕೊಡುವವರಿದ್ದಾರೆ; ಮಾನ ಕಷಾಯ ವಶದಿಂದ ದಾನ ಮಾಡುವವರು ಮುಂದಿನ ಗತಿಯಲ್ಲಿ ಆನೆಯಾಗಿ ಹುಟ್ಟುವರೆಂದು ಓರ್ವ ಹಿಂದಿ ಭಾಷೆಯ ಕವಿಯು ಹೇಳುತ್ತಾನೆ.

ಮಾನ ಬಡಾಯಿ ಕರಣೆ ಜೇಧನ ಖರ್ಚೆ ಮೂಡ।
ಮರಕರ ಹಾತಿ ಹೋವೆಂಗೆ ಧರತೀ ಕಲಕೆ ಸೂಂಡ ॥

ಮಾನ ಕಷಾಯಕ್ಕೆ ಬಲಿಬಿದ್ದು ದಾನ ಕೊಡುವ ಮಾನವನು ಸತ್ತು ಮುಂದೆ ಆನೆಯಾಗಿ ಹುಟ್ಟಿ ತನ್ನ ಸೊಂಡೆಯನ್ನು ಸದಾ ಭೂಮಿಗೆ ತಿಕ್ಕುವವ ನಾಗುತ್ತಾನೆಂದು ಹೇಳುತ್ತಾರೆ.

ದಾನವೆಂದರೆ ವಿಷಯಗಳನ್ನು ತೊರೆದು ನಿಜಾತ್ಮನ ಭಾವನೆಯ ಸಾಧನೆ ಮಾಡುವದೆಂಬರ್ಥವು. ಧರ್ಮವೆಂದರೆ ಆತ್ಮನ ಸ್ವಭಾವವಾಗಿದೆ. ಆದ್ದರಿಂದ ಜ್ಞಾನಿ ಜನರು ಬಹಿರಂಗದ ವಿಷಯ ವಾಸನೆಗಳನ್ನು ಮನ–ವಚನ-ಕಾಯ ತ್ರಿಕರಣ ಶುದ್ಧಿಯಿಂದ ತೊಳದು ತಮ್ಮ ಆತ್ಮನ ನಿಜ ಭಾವದಲ್ಲಿ ರತವಾಗಿರು ವದೇ ಉತ್ತಮ ತ್ಯಾಗ ಭಾವನೆ.

ಭಗವಾನ್ ವೀತರಾಗ ಶ್ರೀ ಮಹಾವೀರ ಸ್ವಾಮಿಗಳು ಹೇಳುವದೇನಂದರೆ:—

"ಸದ್ಯಕ್ಕೆ ಸಂಪೂರ್ಣ ವಿಶ್ವವು ವಿಷಯ ಕಷಾಯಗಳಲ್ಲಿ ಬೆಂದು ನಡೆದಿದೆ." ಇದೇರೀತಿ ಪತಂಜಲಿಯೂ ತನ್ನ ಯೋಗ್ಯ ಸೂತ್ರದಲ್ಲಿಹೇಳುತ್ತಾನೇನೆಂದರೆ, ಬುದ್ಧಿವಾನ್ ಮಾನವರಿಗೆ ಅವರ ಚಿತ್ತವನ್ನು ಧನಸಂಪತ್ತಿ ಮೊದಲಾದ ಭೌತಿಕ ವಸ್ತುಗಳು ಬೆಂಕಿಯಂತೆ ಸುಡುತ್ತವೆ. ಇದೇರೀತಿ ಕಬೀರದಾಸನು ಹೇಳುತ್ತಾನೇನೆಂದರೆ- ಈ ಸಂಸಾರದಲ್ಲಿ ಎಲ್ಲರೂ ತಮ್ಮ ತಮ್ಮ ವಿಷಯ ರೂಪಿ ಅಗ್ನಿಯಲ್ಲಿ ಬೆಂದುಹೋಗುತ್ತಿದ್ದಾರೆ. ವಿಷಯ ಮತ್ತು ಕಷಾಯದ ಈ ಅಗ್ನಿಯಲ್ಲಿ ಬೆಂದುಹೋಗುತ್ತಿರುವ ಎಷ್ಟೋ ಮನುಷ್ಯರು ಹೀಗೆ ಯೋಚನೆ ಮಾಡುತ್ತಾರೇನಂದರೆ, ನಾವು ಲಗ್ನವಾಗಿ ಸ್ತ್ರೀಯರನ್ನು ಪಡೆದು ಶಾಂತಿಯನ್ನು ಪ್ರಾಪ್ತಮಾಡಿಕೊಂಡೇವೆಂದೂ, ಎಷ್ಟೋ ಜನ ದುಡ್ಡಿನಿಂದ ಶಾಂತಿ ಸಿಕ್ಕೀತೆಂದೂ ಇಚ್ಛಿಸುತ್ತಾರೆ. ವಿದ್ಯಾರ್ಥಿಗಳು ಪರೀಕ್ಷೆ ಪಾಸಾಗಿ ಸರ್ಟಿಫಿಕೇಟನ್ನು ಪಡಕೊಂಡು ಶಾಂತಿ ಪಡೆಯಬೇಕೆಂದು ಇಚ್ಛಿಸುವರು. ಚಿಕ್ಕ ಅಧಿಕಾರಿಗಳು ನಮಗೆ ದೊಡ್ಡ ಅಧಿಕಾರಸ್ಥಳ ದೊರೆತರೆ ಶಾಂತಿಸಿಕ್ಕಿತೆಂದೂ ಇಚ್ಛಿಸುವರು. ಆದರೆ ಇದೇ ರೀತಿ ಒಂದು ವೇಳೆ ಅವರ ಆಶೆ ಲಭಿಸಿದರೂ ಅವರಿಗೆ ಶಾಂತಿ ಸಿಗುವದಿಲ್ಲ. ಪುನಃ ಹಿಂದಿನಂತೆಯೇ ತಮ್ಮ ವಿಷಯ ಕಷಾಯವೆಂಬ ಅಗ್ನಿಯಲ್ಲಿ ಸುಡುತ್ತಲೇ ಇರುತ್ತಾರೆ. ಓರ್ವ ಮನುಷ್ಯನು ತಾನು ಸ್ವತಃ ಅಗ್ನಿಯಲ್ಲಿ ಬೆಂದುಹೋಗುತ್ತಿದ್ದಾನೆ, ಅವನು ಇನ್ನೊಬ್ಬನು ಬೆಂಕಿಯಲ್ಲಿ ಸುಡುತ್ತಿದ್ದವನನ್ನು ಹ್ಯಾಗೆ ರಕ್ಷಣೆ ಮಾಡುವನು? ಸುಡುತ್ತಿರ್ದ ಬೆಂಕಿಯಿಂದ ಈ ಜೀವವನ್ನು ರಕ್ಷಣೆ ಮಾಡಬೇಕಾದರೆ ಮಹಾ ತ್ಯಾಗಿಪುರುಷರೇ ಬೇಕೆಂಬರ್ಥವು.

ತ್ಯಾಗವೇ ಜಗತ್ತಿನಲ್ಲಿ ಶ್ರೇಷ್ಠವಾಗಿದೆ. ದೊಡ್ಡದೊಡ್ಡ ರಾಜ ಮಹಾರಾಜರೂ ಕೂಡ ಸಂಸಾರವನ್ನು ತ್ಯಾಗಮಾಡುವದರಿಂದಲೇ ಶ್ರೇಷ್ಠವಾದ ಸುಖ ಮತ್ತು ಶಾಂತಿಯನ್ನು ಕೊಡತಕ್ಕಂಥ ಮೋಕ್ಷವನ್ನು ಪ್ರಾಪ್ತಮಾಡಿಕೊಂಡಿದ್ದಾರೆ. ತ್ಯಾಗದಿಂದಲೇ ಇನ್ನೂವರೆಗೆ ಅವರ ಇತಿಹಾಸವು ನಮ್ಮಂಥ ಸಂಸಾರಿ ಮಾನವರಲ್ಲಿ ತ್ಯಾಗಧರ್ಮವನ್ನು ತೋರಿಸಿಕೊಡುವದಕ್ಕೆ ಕನ್ನಡಿಯಂತೆ ಸಾದರ್ಶವಾಗಿ ಇಟ್ಟದ್ದಾರೆ. ಈಗಲೂಕೂಡ ಜಗತ್ತಿನಲ್ಲಿ ತ್ಯಾಗಿಜನರಲ್ಲಿಯೇ ಮಹತ್ವವು ಕಂಡುಬರುತ್ತದೆ. ತ್ಯಾಗಿ ಮನುಷ್ಯನ ಕೀರ್ತಿಯು ಇಹಲೋಕ ಮತ್ತು ಪರಲೋಕಗಳಲ್ಲಿ ಪರಂಪರಾಗತವಾಗಿರುತ್ತದೆ. ತ್ಯಾಗಧರ್ಮವೇ ಜಗತ್ತಿನಲ್ಲಿ ಶ್ರೇಷ್ಠವಾಗಿರುತ್ತದೆ, ಮನುಷ್ಯಜನ್ಮದಲ್ಲಿ ಎಲ್ಲವಸ್ತು

ಗಳು ಮನುಷ್ಯನಿಗೆ ಅನುಕೂಲವಾಗಿ ದೊರೆಯಬೇಕಾದರೆ ಅವು ಪೂರ್ವ ಪುಣ್ಯದ ಫಲಗಳಾಗಿರುತ್ತವೆ. ಇವೆಲ್ಲಕ್ಕೂ ತ್ಯಾಗವೇ ಕಾರಣವಾಗಿರುತ್ತದೆ.

ಔಷಧಂ ಶಕುನಂ ಮಂತ್ರಾಃ। ನಕ್ಷತ್ರಂ ಗೃಹದೇವತಾ ॥
ಭಾಗ್ಯಕಾಲೇ ಪಸೀದಂತೀ। ಅಭಾಗ್ಯಮಾತಿ ವಿಕ್ರಿನೂ ॥
ಕರ್ಮಣೋಯಿ ಪ್ರದಾನತ್ವಂ। ಕಿಂಕುರ್ವಂತಿ ಶುಭಾಗ್ರಹಾ ॥
ವಶಿಷ್ಠಂ ದತ್ತಲಗ್ನೋಪಿ। ರಾಮಂ ಪ್ರವರ್ಜಿತೋವನೆ ॥

ಔಷಧ, ಶುಕುನ, ಮಂತ್ರ, ತಂತ್ರ, ನಕ್ಷತ್ರ, ಗ್ರಹ, ಮತ್ತು ದೇವರು ಇವೆಲ್ಲವೂ ಪುಣ್ಯವಿದ್ದರೆ ಮಾತ್ರ ಮನುಷ್ಯರ ಭಾಗ್ಯಸ್ಥಾನದಲ್ಲಿ ಇರುತ್ತವೆ. ಮತ್ತು ಬೇಡಿದಂತೆ ಸಂಸಾರಸುಖವನ್ನು ಕೊಡುತ್ತವೆ. ಹಿಂದಿನ ಜನ್ಮದಲ್ಲಿ ಮಾಡಿದ ದಾನವೇ ಮಾತ್ರ ಇದಕ್ಕೆ ಮುಖ್ಯ ಕಾರಣವಾಗಿದೆ. ಯಾವನು ಹಿಂದಿನ ಮತ್ತು ಈಗಿನ ಜನ್ಮದಲ್ಲಿ ತ್ಯಾಗದ ಅಭ್ಯಾಸ ಇಲ್ಲದಿರುವನೋ ಅವನಲ್ಲಿದ್ದ ದ್ರವ್ಯದ ಉಪಯೋಗವನ್ನು ಅವನು ಮಾಡಿಕೊಳ್ಳದೆ ಇನ್ನೊಬ್ಬರೇ ಉಪಯೋಗಿಸುತ್ತಾರೆ. ಇದು ಹಿಂದಿನ ಜನ್ಮದಲ್ಲಿ ದಾನಮಾಡದಿರುವ ಫಲವಾಗಿದೆ. ಅವನು ಯಾವದನ್ನು ಮಾಡಿದರೂ ಕೂಡ ಸಂಸಾರದಲ್ಲಿ ತಕ್ಕ ಪ್ರಾಪ್ತಿಯು ಆಗುವದಿಲ್ಲ. ಮನುಷ್ಯನಿಗೆ ದಾನವೇ ಶ್ರೇಷ್ಠವಾಗಿರುತ್ತದೆ. ದಾನವಿಲ್ಲದ ಮನುಷ್ಯನು ಎಲ್ಲ ಜನರಿಂದ ನಿಂದೆಗೆ ಪಾತ್ರನಾಗುತ್ತಾನೆ. ಅಲ್ಲದೆ ಅನೇಕ ಸಂಕಟಗಳಿಗೆ ಒಳಗಾಗುತ್ತಾನೆ. ಇಂಥ ಉದಾರಣೆಗಳನ್ನು ನೀವು ಹಲವು ಕಂಡಿರಬಹುದು. ದಾನಧರ್ಮವಿಲ್ಲದ ಮನುಷ್ಯನನ್ನು ಎಲ್ಲರೂ ಹೀಯಾಳಿಸುತ್ತಾರೆ. ಆದ್ದರಿಂದ ನಮ್ಮ ಪುಣ್ಯಕ್ಕೆ ಕಾರಣವಾಗಬೇಕಾದರೆ, ದಾನವೇ ಶ್ರೇಷ್ಠವಾಗಿದೆ. ಮತ್ತು ಜಗತ್ತನ್ನು ವಶೀಕರಣ ಮಾಡಿಕೊಳ್ಳಬೇಕಾದರೆ, ದಾನವು ಒಂದು ಮಂತ್ರದೋಪಾದಿಯಲ್ಲಿದೆ. ಪುಣ್ಯಹೀನ ಮನುಷ್ಯನು ಕರ್ಮದ ಉದಯವಾದಾಗ ಬೇಕಾದಂಥ ಕರ್ಮವನ್ನು ಮಾಡಿದರೂ ಕೂಡ ಅದು ವಿಪರೀತವೇ ಆಗುತ್ತದೆ, ಯಾಕಂದರೆ ಜಗತ್ತಿನಲ್ಲಿ ರಾಮುಚಂದ್ರನ ಇತಿಹಾಸವು ಮಹತ್ವಪೂರ್ಣವಾಗಿದೆ. ಮತ್ತು ರಾಮುಚಂದ್ರನು ತದ್ಭವ ಮೋಕ್ಷಗಾಮಿಯಾಗಿದ್ದರೂ ಕೂಡ ಅವನನ್ನೂ ಸಹ ಕರ್ಮವು ಬಿಡಲಿಲ್ಲ. ರಾಮುಚಂದ್ರನಿಗೆ ರಾಜಾಭಿಷೇಕ ಮಾಡಬೇಕೆಂದು ವಶಿಷ್ಠಋಷಿಯು ರಾಜ್ಯಾರೋಹಣದ ಒಳ್ಳೇ ಮುಹೂರ್ತವನ್ನು ತೆಗೆದುಕೊಡುತ್ತಾನೆ. ಅದು ಕೂಡ ಅಶುಭಕರ್ಮದ ಉದಯವಾದಾಗ ರಾಜಪೀಠದ ಮೇಲೆ ಕೂಡ್ರಗೊಡದೆ

ವನವಾಸದ ಕಡೆಗೆ ಎಳೆದೊಯ್ದಿತು. ಆದ್ದರಿಂದ ಈ ಪಾಪ–ಪುಣ್ಯಗಳುಉಂಟಾಗಲಿಕ್ಕೆ ಕಾರಣಗಳು ಯಾವವೆಂದರೆ ಇಂದ್ರಿಯಜನ್ಯ ಭೋಗವೇ ಕಾರಣವಾಗಿದೆ. ಮನುಷ್ಯನು ಇದನ್ನು ತೊರೆಯುವ ಅಭ್ಯಾಸ ಮಾಡದಿದ್ದರೆ ಜಗತ್ತಿನಲ್ಲಿ ಸುಖ ಮತ್ತು ಶಾಂತಿ ಯಾವಾಗಲೂ ದೊರೆಯುವದೇ ಇಲ್ಲವೆಂದು ತಿಳಿಯಬೇಕು.

ನೀತಿಕಾರರು ಹೇಳುವದೇನಂದರೆ

ಪ್ರಶಾನ ವಿದ್ಯಾನ ತಪೋನದಾನಂ। ನಜ್ಞಾಪಿ ಶೀಲೋ ನಿಗಸೋಽಪಿ ಧರ್ಮಃ ॥

ತೇಮೃತ್ಯ ಲೋಕೆ ಭೂಮಿಭಾರ ಭೂತಾ। ಮನುಷ್ಯ ರೂಪೇನ ಮೃಗಾಶ್ಚರಂತಿಃ ॥

ಮನುಷ್ಯ ಜನ್ಮವು ಪ್ರಾಪ್ತವಾದಮೇಲೆ ಯಾವ ಮನುಷ್ಯನಲ್ಲಿ ವಿದ್ಯಾ, ತಪ, ದಾನ, ಶೀಲ, ಮತ್ತು ಧರ್ಮ ಮೊದಲಾದವುಗಳು ಆ ಮನುಷ್ಯನಲ್ಲಿ ಇಲ್ಲದಿದ್ದರೆ ಆ ಮನುಷ್ಯನು ಪೃಥ್ವಿಯ ಮೇಲೆ ಭಾರಭೂತವೆಂದು ತಿಳಿಯಬೇಕು. ಈ ದಾನದ ವಿಷಯದಲ್ಲಿ ರಾಜ ಮತ್ತು ಮಂತ್ರಿಗಳ ಒಂದು ದೃಷ್ಟಾಂತವಿದೆ.

ಆಪದಾರ್ಥೆ ಧರ್ಮಂ ರಕ್ಷೆ। ಭಾಗ್ಯವಾನಂ ಕ್ವಪದಾ।
ಕದಾಽಪಿ ಕುಪಿತೋ ದೇವಾ। ಸಂಚಿತೋಽಪಿ ವಿನಶ್ಯತೆ॥

ಒಬ್ಬ ರಾಜನು ದಾನದಲ್ಲಿ ಶೂರನಿದ್ದನು. ಯಾರು ಬಂದರೂ ಅವರಿಗೆ ಯಾವಾಗಲೂ ದಾನ ಕೊಡುತ್ತಿದ್ದನು. ಯಾರನ್ನೂ ಬರಿಗೈಯಿಂದ ಹಿಂದೆ ಕಳಿಸುತ್ತಿದ್ದಿಲ್ಲ. ಈ ರೀತಿ ಎಷ್ಟೋ ದಿವಸ ನಡೆದು ಬಂದಿತ್ತು. ರಾಜನು ತನ್ನ ಗಾದಿಯ ಮೇಲೆ ಸ್ವತಃ ತಾನು ಕೂಡ್ರದೆ ಎರಡನೇ ಯೋಗ್ಯ ಅಧಿಕಾರಿಗಳನ್ನು ಕೂಡ್ರಿಸುವನು. ಒಮ್ಮೆ ಮಂತ್ರಿಯು ಈ ರೀತಿ ದಾನ ಕೊಡುದನ್ನು ನೋಡಿ ಅಂದದ್ದೇನಂದರೆ:— ನೀವು ಈ ರೀತಿ ಧನವನ್ನು ವ್ಯಯಮಾಡುತ್ತ ಹೋದರೆ ನಮ್ಮ ಭಂಡಾರವು ತೀರಿ ಹೋದೀತು! ಇದಕ್ಕೆ ಮಂತ್ರಿಯು ಹೇಳುತ್ತಾನೆ.

೧. (ಆ ಪದಾರ್ಥಂ, ಧನಂ ರಕ್ಷೇತ್) ಎಲೈ ರಾಜನೆ, ಸಿಕ್ಕಸಿಕ್ಕಂತೆ ಧನವನ್ನು ಬೇಡಿದವರಿಗೆ ಕೊಡುತ್ತಾ ಹೋದರೆ ದೊಡ್ಡ ಆಪತ್ತು ಬಂದ ವೇಳೆ

ಯಲ್ಲಿ ಬಹಳ ತೊಂದರೆ ಆದೀತು ! ಆದ್ದರಿಂದ ಧನವನ್ನೂ ಅಥವಾ ಬಂಗಾರ ವನ್ನೂ ರಕ್ಷಿಸಿಡುವದು ನಮ್ಮ ಕರ್ತವ್ಯವು. ಎಂದು ಮಂತ್ರಿಯ ಅಂದದ್ದು ಕೇಳಿ ರಾಜನು ಹೀಗೆ ಅನ್ನುತ್ತಾನೆ.ಃ—

೨. (ಭಾಗ್ಯವಾನಂ ಕ್ವಚ್ಚಾಪದಾಃ) ೨. ಭಾಗ್ಯವಾನ ಮನುಷ್ಯನಿಗೆ ಆಪತ್ತು ಎಲ್ಲಿಂದ ಬರುವದು ? ಈ ಮಾತಿಗೆ ಪ್ರಧಾನಿಯು ಅಂದದ್ದೇನಂದರೆ ! ಕದಾಪಿ ಕುಪಿತೋ ದೈವಾ; ಒಂದು ವೇಳೆ ದೈವವು ಕುಪಿತವಾದರೆ ?

ರಾಜನು ಹೇಳುತ್ತಾನೆಃ— ಸಂಚಿತೋಪಿ ವಿನಶ್ಯತೆ

ಆದ್ದರಿಂದ ದೈವವು ಕುಪಿತವಾಗದ ಮೊದಲೇ ಸತ್ಪಾತ್ರ ದಾನದಲ್ಲಿ ಅಥವಾ ಶುಭ ಕಾರ್ಯದಲ್ಲಿ ಈ ಧನವನ್ನು ವ್ಯಯ ಮಾಡುವದೇ ಸಾರ್ಥಕ. ಈಗ ನಮಗೆ ಈ ಸಂಪತ್ತಿಯು ಸಿಗಬೇಕಾದರೆ ಹಿಂದಿನ ಜನ್ಮದಲ್ಲಿ ದಾನ ಮಾಡಿದ ಶುಭ ಫಲವಾಗಿದೆ. ಇದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಇದರ ಬಗ್ಗೆ ನೀತಿಕಾರರು ಹೇಳುವದೇನಂದರೆಃ—

ವಾತಾವಿಭ್ರಮ ಮಿದಂ ವಸುದಾದಿ ಪತ್ಯ ।
ಮಾಯಾತ ಮಾತ್ರ ಮಧುರೋ ವಿಷಯೋಪ ಭೋಗಃ ॥
ಪ್ರಾಣಾ ಸ್ತ್ರೀಣಾಗ್ರ ಜಲಬಿಂದು ನರಾಸಮಾಣಾಮ್ ।
ಧರ್ಮಾ ಸಖಾ ಪರಮಹೋ ಪರಲೋಕ ಮಾನೆ ॥

ಗಾಳಿಯು ಬಿಟ್ಟ ಕೂಡಲೆ ಯಾವ ರೀತಿ ಮೋಡವು ಹೇಗೆ ಒಂದೇ ಕ್ಷಣದಲ್ಲಿ ನಷ್ಟವಾಗುವದೋ ಹಾಗೆ ಈ ರಾಜ ವೈಭವವೂ, ಸೈನ್ಯವೂ, ಭಂಡಾ ರವೂ, ರಾಜಪಾರ್ಟವೂ ನಷ್ಟವಾಗುವವು. ಇವು ಮನುಷ್ಯನಿಗೆ ವಿಭ್ರಮ ಮಾಡ ತಕ್ಕಂಥವುಗಳು. ಇವು ಶುಭ ಕರ್ಮಗಳು ತೀರಿದ ಕೂಡಲೆ ಕ್ಷಣದಲ್ಲಿಯೇ ನಷ್ಟವಾಗುವಂಥವು.

ಮಧುರವಾದ ವಿಷಯಭೋಗ ಮೊದಲಾದವುಗಳು ಮಾಯಮಾತ್ರ ವಾಗಿವೆ. ಈ ಪ್ರಾಣಕ್ಕೆ ಪ್ರಿಯವಾಗಿರುವಂಥ ಸ್ತ್ರೀಯರೂ, ಪುತ್ರರೂ ಪುಣ್ಯ ತೀರಿದ ಮೇಲೆ, ಅಶುಭ ಕರ್ಮದ ಗಾಳಿಯು ಬೀಸುತ್ತಲೇ, ಕಮಲಪತ್ರದ ಮೇಲಿನ ಬಿಂದುಗಳಂತೆ ಕ್ಷಣದಲ್ಲಿಯೇ ಉರುಳಿ ಹೋಗುತ್ತವೆ. ಆದರೆ ಈ ಜೀವನಿಗೆ ಉಪಕಾರವನ್ನು ಮಾಡಿ ಕಡೆಗೆ ಸುಖ ಮತ್ತು ಶಾಂತಿಯನ್ನು ಕೊಟ್ಟು ಈ ಸಂಸಾರರೂಪಿ ಸಮುದ್ರದಿಂದ ದಾಟಿಸುವದಕ್ಕೆ ನಾವಿನಂತೆ ಆಗಿ

ರುವ ಧರ್ಮರೂಪಿ ಸಖನೇ ಸಹಾಯ ಮಾಡುತ್ತಾನೆ. ಆದ್ದರಿಂದ ಧರ್ಮವೇ ಈ ಜೀವನಿಗೆ ಸರ್ವಸ್ವ. ಈ ಮನುಷ್ಯ ಜನ್ಮದ ಸಾರ್ಥಕವನ್ನೂ, ಮತ್ತು ಧನದ ಸಾರ್ಥಕವನ್ನೂ, ಆಯುಷ್ಯದ ಸಾರ್ಥಕವನ್ನೂ, ಮತ್ತು ಮನಸ್ಸಿನ ಸಾರ್ಥಕವನ್ನೂ ಈ ಮನುಷ್ಯನು ಧರ್ಮದಿಂದಲೇ ಮಾಡಿಕೊಳ್ಳಬೇಕೆಂಬ ಭಾವವು.

ಇದಕ್ಕೋಸ್ಕರ ರತ್ನಾಕರ ಕವಿಯು ಹೀಗೆ ಹೇಳುತ್ತಾನೆ:—

ತನುವಂ ಸಂಘದ ಸೇವೆಯೊಳು ಮನಮಾತ್ಮಧ್ಯಾನದೊಳ್ ।
ಧನಂದಾನ ಸುಪೂಜೆಯೊಳ್ ದಿನಮುಂ ಆರ್ಹದ್ಧರ್ಮ ಕಾರ್ಯಪ್ರವ ॥
ರ್ತನೆಯೊಳ್ ಪರ್ವನೊಲ್ದು ನೋಂಪಿಗಳೊಳಿರ್ಪಾಯುಷ್ಯಮುಂ
ಮೋಕ್ಷಚಿಂ ॥
ತನೆಯೊಳ್ ತೀರ್ಚುವ ಮದ್ ಗ್ರಹಸ್ಥನನಘಂ ರತ್ನಾಕರಾಧೀಶ್ವರಾ।

ರತ್ನಾಕರಾಧೀಶ್ವರನೇ!— ಈ ಶರೀರವನ್ನು ಋಷಿ ಮೊದಲಾದವರ ಸಂಘ ಸೇವೆಯಲ್ಲಿಯೂ, ಮನಸ್ಸನ್ನು ಆತ್ಮಧ್ಯಾನದ ಅಭ್ಯಾಸದಲ್ಲಿಯೂ, ದ್ರವ್ಯವನ್ನು ಶ್ರೇಷ್ಟವಾದ ದಾನ ಪೂಜೆಗಳಲ್ಲಿಯೂ, ದಿವಸವನ್ನು ಜಿನಧರ್ಮ ಕಾರ್ಯದ ಪ್ರವರ್ತನೆಗಳಲ್ಲಿಯೂ, ಪರ್ವತಿಥಿಯನ್ನು ಪ್ರೀತಿಸಿ ನೋಂಪಿಗಳ ಗಳಲ್ಲಿಯೂ, ಇರುವ ಆಯುಷ್ಯವನ್ನು ಮುಕ್ತಿಯ ಚಿಂತನೆಯಲ್ಲಿಯೂ ಕಳೆ ಯುವ ಉತ್ತಮ ಗ್ರಹಸ್ಥನು ಪಾಪರಹಿತನಾಗುವನು. ಪಾಪರಹಿತನಾಗಿ ಮುಂದೆ ಸ್ವರ್ಗಮೋಕ್ಷ ಪ್ರಾಪ್ತಮಾಡಿಕೊಳ್ಳುವ ಪುಣ್ಯಾನುಬಂಧಿ ಪುಣ್ಯ ಸಂಚಯವನ್ನು ಮಾಡಿಕೊಳ್ಳುತ್ತಾನೆ.

ಧನದ ಲೋಭದಿಂದ ಮನುಷ್ಯನಲ್ಲಿ ಆಗುವ ಹಾನಿಯ ಕುರಿತು ಭೋಜ ಪ್ರಬಂಧದಲ್ಲಿ ನೀತಿಕಾರರು ಈ ರೀತಿಯಾಗಿ ಹೇಳುತ್ತಾರೆ.

ಒಂದು ದಿವಸ ಭೋಜರಾಜನು ದರಬಾರದಲ್ಲಿ ಕುಳಿತಿರುವಾಗ ಒಂದು ಜೇನಹುಳವು ಅವನ ಕೈಯ ಮೇಲೆ ಕುಳಿತು ತನ್ನ ಎರಡೂ ಕೈಗಳನ್ನು ಒಂದ ಕ್ಕೊಂದು ತಿಕ್ಕಿಕೊಳುತ್ತದೆ. ಅದನ್ನು ಭೋಜರಾಜನು ನೋಡಿ ಮಂತ್ರಿ ಯನ್ನು ಉದ್ದೇಶಿಸಿ ಹೇಳುವದೇನಂದರೆ, ‘ ಎಲೈ ಮಂತ್ರಿಯೇ ಈ ಹುಳವು ಎರಡೂ ಕೈಗಳನ್ನು ಯಾಕೆ ತಿಕ್ಕಿಕೊಳ್ಳುತ್ತದೆ ? ’ ಅದಕ್ಕೆ ಮಂತ್ರಿ ಅಂದದ್ದು:-

ಎಲೈ ರಾಜನೆ ಈ ನೊಣವು ನಿನ್ನನ್ನೇ ಉದ್ದೇಶಿಸಿಯೇ ಈ ರೀತಿಯಾಗಿ ಹೇಳುತ್ತದೆ. ನೋಡಿರಿ:—

ದೇಯಂ ಭೋಜ ಧನಂ ಧನಂ ಸುಕೃತಿಭಿರ್ನ ಸಂಚಿತವ್ಯಂ ಕದಾ ।
ಶ್ರೀ ಕರ್ಣಸ್ಯ ಬಲೇಶ್ಚ ವಿಕ್ರಮ ಪತೇರದ್ಯಾಪಿ ಕೀರ್ತಿಸ್ಥಿತಃ ॥

ಅಸ್ಮಾಕಂ ಮಧುದಾನ ಭೋಗ ರಹಿತಂ ನಷ್ಟಂ ಚಿರಾತ ಸಂಚಿತಂ।
ನಿರ್ವಾಣಾದತಿ ಪಾಣಿಪಾದ ಯುಗಲಂ ಘರ್ಷತ್ಯ ಹೋ ಮಕ್ಷಿಕಾ ||

ಭಾವಾರ್ಥ:— (ಒಂದಾನೊಂದು ದಿವಸ ಭೋಜರಾಜನು ಸಭೆಯಲ್ಲಿ ಕುಳಿತಿರುವಾಗ ಆ ರಾಜನ ಕೈಯ ಮೇಲೆ ಒಂದು ಜೇನ ನೊಣವು ಒಂದು ಕುಳಿತು ತನ್ನ ಕೈಗಳನ್ನು ಒಂದಕ್ಕೊಂದು ತಿಕ್ಕಿಕೊಳ್ಳಹತ್ತಿತು. ಅದೇ ವೇಳೆಯಲ್ಲಿ ರಾಜನು ನೋಡಿ ಒಬ್ಬ ಪಂಡಿತನನ್ನು ಕರೆದು ಕೇಳಿದ್ದೇನಂದರೆ ಈ ರೀತಿ ಮಾಡುವ ಉದ್ದೇಶವೇನು ? ಆಗ ಈ ಮಾತಿಗೆ ಪಂಡಿತನು ಹೇಳುವದೇನಂದರೆ) ಎಲೈ ಭೋಜರಾಜನೇ, ಈ ನೊಣವು ಈ ರೀತಿಯಾಗಿ ತಮಗೆ ಸೂಚಿಸುತ್ತದೆ. ನಿಮ್ಮ ಹತ್ತರ ಪುಣ್ಯ ಉದಯದಿಂದ ಸಾಕಷ್ಟು ದ್ರವ್ಯವು ಭಂಡಾರದಲ್ಲಿ ತುಂಬಿ ಹೋಗಿದೆ. ಆ ದ್ರವ್ಯವನ್ನು ದಾನಧರ್ಮಗಳಲ್ಲಿ ವ್ಯಯ ಮಾಡಿರಿ. ಮತ್ತು ನೀವು ಇದಕ್ಕೆ ಇಂದು ನಾಳಿನ್ನ ಬೇಡಿರಿ. ದಾನ ಕೊಡುವದರಿಂದಲೇ ಈ ವರೆಗೆ ಜಗತ್ತಿನಲ್ಲಿ ವಿಕ್ರಮ ಮೊದಲಾದ ರಾಜರ ಕೀರ್ತಿಯು ಶಾಶ್ವತವಾಗಿ ಉಳಿದಿದೆ. ಇದನ್ನು ತಿಳಿದು ನೀವು ಒಂದು ವೇಳೆ ದಾನ ಮಾಡದಿದ್ದರೆ ನನ್ನಂತೆಯೇ ನಿನ್ನ ಗತಿಯಾದರೂ ಮುಂದೆ ಆದೀತು !

ಆ ನೊಣವು ಈ ರೀತಿಯಾಗಿ ಅಂದದ್ದು:- ನಾನು ನಿನ್ನಂತೆಯೇ ದೊಡ್ಡ ರಾಜನಾಗಿ ದ್ರವ್ಯಲೋಭಿಯಾಗಿದ್ದೆನು. ನಾನು ಆ ದ್ರವ್ಯದ ಆಶೆಯಿಂದ ದಾನ ಧರ್ಮಗಳನ್ನು, ಪೂಜೆಗಳನ್ನು, ಅತಿಥಿ ಸತ್ಕಾರವನ್ನು ಮಾಡದೆ ಅದನ್ನು ರಾತ್ರಂದಿವಸ ರಕ್ಷಿಸುತ್ತಿದ್ದೆನು. ಆದರೆ, ಒಂದಾನೊಂದು ದಿವಸ ದಾಳಿಗಾರರು ಬಂದು ನನ್ನನ್ನು ಒಳ್ಳೆ ಏಟು ಹಾಕಿ ಜರ್ಜರಿತ ಮಾಡಿ ದ್ರವ್ಯವನ್ನು ಕದ್ದುಕೊಂಡು ಹೋದರು. ನನಗೆ ಆ ಸಂಪತ್ತಿನ ಮೋಹವು ಹೆಚ್ಚಾಗಿದ್ದುದರಿಂದ ಅದರ ವಿಯೋಗದಿಂದ ಆರ್ತ-ರೌದ್ರ ಧ್ಯಾನವಾಗಿ ಸತ್ತು ಅತ್ಯಂತ ನಿಂದ್ಯಪರ್ಯಾಯಗಳಲ್ಲಿ ಜನಿಸುತ್ತ ನಿಂದ್ಯವಾದ ಈ ಜೇನಹುಳದ ಪರ್ಯಾಯದಲ್ಲಿ ಜನಿಸಿದೆನು ಹಿಂದಿನಂತೆಯೇ ಇಲ್ಲಿಯೂ ಕೂಡಾ ನನ್ನ ಭಾಂಧವರೆಲ್ಲ ಕೂಡಿ ಆ ಗೂಡನ್ನು ಕಟ್ಟಿ ಚಿಕ್ಕ ಚಿಕ್ಕ ಮಕ್ಕಳನ್ನು ಹೆತ್ತು ಆ ಗೂಡಿನಲ್ಲಿ ಇಟ್ಟು ಆ ಮಕ್ಕಳ ಸಲುವಾಗಿ ನಾವು ಎಷ್ಟೋ ಹೂ ಮತ್ತು ವನಸ್ಪತಿಗಳ ಮೇಲೆ ಕೂತು ಎಷ್ಟೋ ಸ್ವಾದಿಷ್ಟವಾದ ರಸಗಳನ್ನು ತಂದು ತುಂಬಿದೆವು. ಅದಕ್ಕೆ ಆ ರಸವನ್ನು ನಮ್ಮ ಮಕ್ಕಳಿಗೆ ಉಪಯೋಗ ಮಾಡದೆ ಮತ್ತೂ ನಾವೂ ಉಪಯೋಗಿಸದೆ ಅದನ್ನು ಮೋಹದಿಂದ ರಕ್ಷಿಸುತ್ತಿರುವಾಗ ಒಬ್ಬ

ಬೇಡನು ಬಂದು ನಮ್ಮನ್ನು ಹೊಡೆದು, ಜಾಡಿಸಿ, ನಮ್ಮ ಚಿಕ್ಕ ಚಿಕ್ಕ ಮಕ್ಕಳನ್ನು ಕೊಂದು, ಆ ಗೂಡಿನಲ್ಲಿ ಮಡಿಗಿಟ್ಟ ರಸವನ್ನು ತೆಗೆದುಕೊಂಡು ಹೋದನು. ಆ ಮೋಹದಿಂದ ನಾವು ಕೂಡಾ ಹಿಂದಿನಂತೆಯೇ ಈಗಾದರೂ ನಮ್ಮ ಕೈಯನ್ನು ತಿಕ್ಕುತ್ತ ಪಶ್ಚಾತ್ತಾಪ ಪಡೆಯಬೇಕಾಯಿತು. ಆದ್ದರಿಂದ ಎಲೈ ಭೋಜರಾಜನೇ ಈ ನಿನ್ನ ಪೂರ್ವ ಪುಣ್ಯದಿಂದ ಸೂಚಿತವಾದ ದ್ರವ್ಯವನ್ನು ಈ ರೀತಿಯಾಗಿ ಸ್ವಪರ ಕಲ್ಯಾಣಕ್ಕಾಗಿ ಉಪಯೋಗಿಸಿಕೊಳ್ಳದಿದ್ದರೆ ನಮ್ಮಂತೆಯೇ ನಿನ್ನ ಗತಿಯೂ ಕೂಡಾ ಆದೀತು - ಎಂದು ಈ ರೀತಿ ನೊಣವು ಹೇಳುತ್ತದೆ. ಈ ಮಾತನ್ನು ಕೇಳಿ ಭೋಜರಾಜನು ತನ್ನ ಪೂರ್ವಾರ್ಜಿತ ಪುಣ್ಯದಿಂದ ಸಂಚಿತವಾದ ಧನವನ್ನು ಸ್ವಪರ ಕಲ್ಯಾಣಾರ್ಥವಾಗಿ ಉಪಯೋಗ ಮಾಡುವವನಾದನು. ಹೇಳುವ ತಾತ್ಪರ್ಯವೇನಂದರೆ, ಮನುಷ್ಯನು ಸಂಸಾರದಲ್ಲಿ ತನಗೆ ಶಾಂತಿ ಮತ್ತು ಸುಖವನ್ನು ಪಡೆಯುವ ಇಚ್ಛೆಯುಳ್ಳವರಾಗಿದ್ದಗೆ, ವಿಷಯ ಕಷಾಯಗಳ ಉತ್ಪತ್ತಿಗೆ ಮತ್ತು ಸಂಸಾರ ದುಃಖಕ್ಕೆ ಕಾರಣವಾಗುವ ಭೋಗದ ಇಚ್ಛೆಯನ್ನು ತ್ಯಾಗ ಮಾಡುವ ಅಭ್ಯಾಸ ಉಳ್ಳವನಾಗಿರಬೇಕು. ಈ ರೀತಿಯಾಗಿ ತಿಳಿದು ಎಲ್ಲರೂ ಭೋಗದ ಇಚ್ಛೆಯನ್ನೂ ಮತ್ತು ಲೋಭದ ಇಚ್ಛೆಯನ್ನೂ, ತೊರೆದು ನಿಮ್ಮ ಮತ್ತು ಪರಕಲ್ಯಾಣಕಾರ್ಯಕ್ಕೆ ಉದ್ಯುಕ್ತರಾಗಬೇಕೆಂದು ಭಾವವು.

ಇದರ ಬಗ್ಗೆ ಒಬ್ಬ ಹಿಂದೀ ಕವಿಯು ಹೇಳುವದೇನಂದರೆ:—

ದಾನ ಚಾರ ಪರಕಾರ, ಚಾರ ಸಂಘ ಕೋ ದೀಜಿಯೆ ।
ಧನ ಬಿಜಲೀ ಉನಹಾರ । ನರಭವ ಲಾಹೋ ಲೀಜಿಯೆ ॥
ಉತ್ತಮ ತ್ಯಾಗಕಹೋ ಜಗಸಾರಾ । ಔಷಧಿ ಶಾಸ್ತ್ರ ಅಭಯ ಆಹಾರ ।
ನಿಶ್ಚಯ ರಾಗದ್ವೇಷ ನಿವಾರೆ । ಜ್ಞಾತಾ ದೋನೊ ದಾನ ಸಮ್ಹಾರೆ ॥
ದೋನೋ ಸಮ್ಹಾರೆ ಕೂಪ ಜಲಸಮ । ದ್ರವ್ಯ ಘರಮೆ ಪರಣಾಯಾ ।
ನಿಜ ಹಾಥ ದೀಜೆ ಸಫಲೀಜೆ । ಖಾಯ ಖೋಯಾ ವಹಗಯಾ ॥
ಧನ ಸಾಧು ಶಾಸ್ತ್ರ ಅಭಯ ದಿವ್ಯಯಾ । ತ್ಯಾಗ ರಾಗ ವಿರೋಧಕೊ ॥
ಬಿನದಾನ ಶ್ರಾವಕ ಸಾಧುದೋನೋ ಲಹೆ ನಾಹಿ ಬೋಧಕೊ ॥

:— ಇತಿ ಓಂ ಹ್ರೀಂ ಉತ್ತಮ ತ್ಯಾಗಧರ್ಮಾಂಗಾಯನಮಃ :—

೯ ಉತ್ತಮ ಆಕಿಂಚನ್ಯ ಧರ್ಮಃ

ಆಕಿಂಚನ್ಯವೆಂದರೆ ನಿರ್ಮಳ ನಿಜಾತ್ಮನ ಸ್ವರೂಪವು. ಈ ಸ್ವಸ್ವರೂಪವು ಪ್ರತಿಯೊಂದು ಮಾನವನ ಸ್ವಧರ್ಮವಾಗಿದೆ. ಮತ್ತು ಇದರ ವಿಪರೀತವಾಗಿ ಸಂಸಾರದಲ್ಲಿ ಕಾಣುವದೆಲ್ಲವೂ ಪರ ಸ್ವಭಾವವು. ಅಥವಾ ಪರಧರ್ಮವಾಗಿದೆ. ತನ್ನ ನಿಜವಾದ ಮೂಲ ಸ್ವಭಾವವನ್ನು ತಿಳಿಯದೆ ಮೂಢ ಮಾನವ ಪ್ರಾಣಿಯು ಪರ ಸ್ವಭಾವಕ್ಕೆ ತನ್ನ ಸ್ವಸ್ವಭಾವ ಅಥವಾ ಸ್ವಧರ್ಮವೆಂದು ತಿಳಿದು ಪರವಸ್ತುವಿನ ಮೋಹದಿಂದ ಈ ಪಂಚಪರಾವರ್ತನವೆಂಬ (ಐದು) ಸಂಸಾರಗಳಲ್ಲಿ ಸುತ್ತುತ್ತ ಆಳವಾದ ದುಃಖ ದುರ್ಗವನ್ನು ಭೋಗಿಸುತ್ತಾನೆ. ಪರಸ್ವಭಾವವನ್ನು ಬಿಟ್ಟು ತನ್ನ ಸ್ವಭಾವದಲ್ಲಿ ಬಂದ ಹೊರತು ಈ ಜೀವನಿಗೆ ಸುಖಶಾಂತಿಯು ಸಿಗಲಾರದು. ಸುಖಶಾಂತಿ ಎಂದರೆ ತನ್ನ ನಿಜವಾದ ಸ್ವಭಾವ. ಕಿಂಚಿತ್ ಮಾತ್ರ ಪರವಸ್ತುವಿನ ಆಶೆ ಮಾಡದೆ ತನ್ನ ಜ್ಞಾನದರ್ಶನದಿಂದ ಮಾಡಿದ ಆತ್ಮನ ಚೈತನ್ಯ ಸ್ವರೂಪದಲ್ಲಿ ಲೀನವಾಗಿರುವದೂ, ಕಿಂಚಿತ್ ಮಾತ್ರ ಶರೀರಾದಿ ಅಥವಾ ಶರೀರ ಸಂಬಂಧವಾಗಿರುವ ಭೋಗಾದಿ ಪರವಸ್ತುಗಳು ನನ್ನವಲ್ಲವೆಂದು ಇವುಗಳ ಮೇಲೆ ಮೂರ್ಛೆಯಿಲ್ಲದೆ ಇರುವದೂ, ಇದಕ್ಕೆ ಅಕಿಂಚನ್ಯ ಅಥವಾ ಆತ್ಮನ ನಿಜಧರ್ಮವೆಂದು ಹೇಳುವರು!

“ ನ ಕಿಂಚಿನಃ ಇತಿ ಆಕಿಂಚಿನಂ ತಸ್ಯ ಭಾವಃ ಅಕಿಂಚನ್ಯ: ”

ಅರ್ಥಾತ್ ಕಿಂಚಿತ್ ಮಾತ್ರ ಪರಿಗ್ರಹವಿಲ್ಲದೆ ಇರುವದು ಅಕಿಂಚಿನ್ಯ ಅರ್ಥಾತ್ ಅ ಪರಿಗ್ರಹ. ಆದ್ದರಿಂದ ಈ ಉತ್ತಮ ಶಬ್ದವು ಅಕಿಂಚಿನ್ಯ ಧರ್ಮಕ್ಕೆ ವಿಶೇಷಣವಾಗಿದೆ. ಕೇವಲ ಜಗಕ್ಕೆ ತೋರಿಸುವ ಸಲುವಾಗಿ ಹೊರಗಿನ ಬಾಹ್ಯ ಪದಾರ್ಥವನ್ನು ತೊರೆಯುವದರಿಂದ ಅಪರಿಗ್ರಹವೆಂದು ಹೇಳುವದಿಲ್ಲ; ಆದರೆ ಅಂತರಂಗದಲ್ಲಿರುವ ಲೋಭ ಮೊದಲಾದ ಕಷಾಯುಗಳನ್ನು ಮನಃ ಪೂರ್ವಕ ತೊರೆದು ಆ ಮೇಲೆ ಬಾಹ್ಯ ಪರಿಗ್ರಹಗಳನ್ನು ತೊರೆಯುವದಕ್ಕೆ ಅಪರಿಗ್ರಹವೆಂದು ಹೇಳುತ್ತಾರೆ. ಅಂತರಂಗ ಪರಿಗ್ರಹವೇ ದೊಡ್ಡ ಪರಿಗ್ರಹ. ಈ ಅಂತರಂಗ ಪರಿಗ್ರಹದ ಮೋಹದಿಂದಲೇ ಈ ಜೀವಾತ್ಮರು ಎಣಿಕೆಯಿಲ್ಲದ ಯೋನಿಗಳನ್ನು ಧರಿಸಿ ಅನಾದಿಕಾಲದಿಂದ ಈ ಸಂಸಾರ ಚಕ್ರದಲ್ಲಿ ಪರಿಭ್ರಮಣ ಮಾಡುತ್ತಿದ್ದಾರೆ. ಈ ಪರಿಗ್ರಹದ ಸಲುವಾಗಿಯೇ ಮಹಾಭಾರತದ ರಚನೆಯಾಗಿದೆ; ಮತ್ತು ರಾಮಾಯಣದ ರಚನೆಯಾಗಿದೆ.

ಈ ಪರಿಗ್ರಹವು ಅನೇಕ ನೀಚಯೋನಿಗೆ ಕಾರಣವಾಗಿದೆ. ಈ ಪರಿಗ್ರಹವೇ ಜನ್ಮ ಮರಣಕ್ಕೆ ಕಾರಣವಾಗಿದೆ. ಪರಿಗ್ರಹದ ಸಲುವಾಗಿಯೇ ಕೌರವರು ಮತ್ತು ಪಾಂಡವರ ಕಾಳಗವಾಗಿ ಪಾಂಡವರಿಗೆ ವನವಾಸವನ್ನು ಭೋಗಿಸಬೇಕಾಯಿತು, ಪರಿಗ್ರಹದ ಮೂರ್ಛೆಯಿಂದ ಈ ಜೀವಾತ್ಮನು ಪ್ರಾಣವನ್ನು ತೊರೆದು ಅತ್ಯಂತ ತೀವ್ರ ನಿಂದ್ಯವಾದ ಸರ್ಪ ಮೊದಲಾದ ಗತಿಗಳನ್ನು ಧರಿಸಿ ಅನೇಕ ದುಃಖಗಳನ್ನು ಭೋಗಿಸಬೇಕಾಯಿತು; ಈ ಸಂಸಾರದಲ್ಲಿ ಪರಿಗ್ರಹವೇ ಜೀವನಿಗೆ ಈ ಜೀವನಿಗೆ ಒಂದು ದೊಡ್ಡ ಪಿಶಾಚಿಯಂತಿದೆ; ಆದ್ದರಿಂದ ಬುದ್ಧಿವಾನರಾದ ಮಾನವರು ಅಪರಿಗ್ರಹದ ಭಾವದಿಂದಿರುವುದೇ ಸಂಸಾರ ದುಃಖನಾಶಕ್ಕೆ ಕಾರಣವಾಗಿದೆ.

ಈ ಪರಿಗ್ರಹದ ಬಗ್ಗೆ ಸಂತ ತುಕಾರಾಮರು ಹೇಳುತ್ತಾರೆ

“ ತುಕಾಮ್ಹಣೆ ಧನಃ ಆಮ್ಹಾ ಗೋಮಾಂಸಾ ಸಮಾನ ” ಅರ್ಥಾತ್ ಈ ಪರಿಗ್ರಹವು ನಮಗೆ ಹಸುವಿನ ಮಾಂಸದಂತಿದೆಯೆಂದು ತನ್ನ ಅಭಂಗದಲ್ಲಿ ಹೇಳಿದ್ದಾನೆ. ಆದ್ದರಿಂದ ಆತ್ಮ ಸುಖವನ್ನು ಇಚ್ಛಿಸುವವರು ಅಪರಿಗ್ರಹ ವ್ರತವನ್ನು ತಮ್ಮ ಶಕ್ತಿಗೆ ತಕ್ಕಷ್ಟು ಕೈಕೊಂಡು ಪರಿಪಾಲನೆ ಮಾಡಬೇಕೆಂಬ ಭಾವಾರ್ಥವಿದೆ.

ಈ ಪರಿಗ್ರಹವು ಪರಲೋಕದಲ್ಲಿ ನಮಗೆ ಶರಣವಾಗುವದಲ್ಲ, ಅಂಧಕಾರದಲ್ಲಿ ಯಾವ ರೀತಿ ದೀಪವು ಆರಿಹೋದರೆ ಮಾರ್ಗವು ಕಾಣುವದಿಲ್ಲವೋ ಅದೇರೀತಿ ಪೌದ್ಗಲಿಕ ವಸ್ತುಗಳ ಮೋಹಾಂಧಕಾರದಲ್ಲಿ ಧರ್ಮಮಾರ್ಗ ಅಥವಾ ನ್ಯಾಯಮಾರ್ಗ ಕಾಣುವುದು ಅಥವಾ ಕಾಣದೆ ಇರುವದು ಇವೆರಡೂ ಸಮಾನವಾಗಿವೆ; ಮಮತ್ವದ ತ್ಯಾಗದಿಂದಲೇ ಧರ್ಮ ಮಾರ್ಗವು ಮತ್ತು ಎಲ್ಲ ಜೀವಗಳ ಮೇಲೆ ಉಪಕಾರಮಾಡುವ ದಯಾಮಯ ಧರ್ಮದ ಮಾರ್ಗವೂ ಆಚರಣರೂಪದಲ್ಲಿ ಕಂಡುಬರುತ್ತದೆ.

ಪರಿಗ್ರಹವು ಎಲ್ಲ ಪಾಪಗಳ ಉತ್ಪತ್ತಿಗೆ ಮೂಲಕಾರಣವಾಗಿದೆ. ಎಷ್ಟರವರೆಗೆ ಜೀವದಲ್ಲಿ ಪರಿಗ್ರಹದ ಭಾವನೆ ಇದೆಯೋ ಅಲ್ಲಿಯವರೆಗೆ ಜೀವನಿಗೆ ತನ್ನ ಸ್ವಸ್ವಭಾವ ಧರ್ಮದ ನಿಜವಾದ ಮಾರ್ಗವು ತಿಳಿಯಲು ಶಕ್ಯವಿಲ್ಲ; ಮತ್ತು ಎಷ್ಟರವರೆಗೆ ಪರಿಗ್ರಹದ ಮೇಲೆ ನಿಯಂತ್ರಣವನ್ನು ನಾವು ಇಡುವದಿಲ್ಲವೋ ಅಷ್ಟರ ವರೆಗೆ ನಮ್ಮಲ್ಲಿ ಹೊರಗಿನಿಂದ ಬಂದು ಅಂಟುವ ಪಾಪ

ವಾಸನೆಗಳು ಕಡಿಮೆಯಾಗುವದಿಲ್ಲ ಪರಿಗ್ರಹದ ಸಂಗ್ರಹಕಾರರೂ ಅಥವಾ ಪುಂಜಿಪತಿಗಳೂ ಪಾಪೋತ್ಪತ್ತಿಗೆ ಜನಕರಂತೆ ಇದ್ದಾರೆ. ಒಂದು ಸಣ್ಣ ಇರಿವೆ ಅಥವಾ ಸಣ್ಣ ಹುಳವೊದಲಾಗಿ ಮನುಷ್ಯಪ್ರಾಣಿಯವರೆಗೆ ಎಲ್ಲ ಪ್ರಾಣಿಗಳು ಈ ಪರಿಗ್ರಹ ಸಂಗ್ರಹ ಮಾಡುವದರಲ್ಲಿ ಸಲ್ಲಗ್ನವಾಗಿವೆ.

ಒಂದು ವೇಳೆ ಯಾವನೇ ಮಾನವನು ಸಣ್ಣ ದೊಡ್ಡ ವ್ರತಗಳನ್ನು ತಕ್ಕೊಂಡಿದ್ದರೂ ಕೂಡ ಸಂಗ್ರಹವೃತ್ತಿಗೆ ಅರ್ಥಾತ್ ಪರಿಗ್ರಹದಮೇಲೆ ಎಷ್ಟರವರೆಗೆ ನಿಮಂತ್ರಣ ಅಥವಾ ಮರ್ಯಾದೆ ಮಾಡಿಕೊಳ್ಳುವದಿಲ್ಲವೋ ಅಷ್ಟರ ವರೆಗೆ ಅವನಿಗೆ ನಿಜವಾದ ಆತ್ಮವಿಕಾಸದ ಮಾರ್ಗವು ದೊರೆಯುವದು ಅತ್ಯಂತ ದುರ್ಲಭವಿದೆ.

ಎಲ್ಲ ಪಾಪಗಳಲ್ಲಿ ಈ ಪರಿಗ್ರಹವು ಒಂದು ದೊಡ್ಡ ಪಾಪವಿದೆ; ಮತ್ತು ಎಲ್ಲ ಪಾಪಫಲಗಳಲ್ಲಿ ದೊಡ್ಡ ಪಾಪಫಲವನ್ನು ಕೊಡುವದಾಗಿದೆ. ಮತ್ತು ಆ ಪಾಪಫಲವನ್ನು ಸ್ವಂತವಾಗಿ ತಾನೇ ಭೋಗಿಸಬೇಕಾಗುವದು. ಪಾಪದ ಸೇವನೆ ಮಾಡುವವನು ಪಾಪಫಲದ ಭಾರವನ್ನು ತಾನೆ ಹೊತ್ತುಕೊಂಡು ಸಂಸಾರದಲ್ಲಿ ಭ್ರಮಣಮಾಡಬೇಕಾಗುವದು. ತಾನು ಸಾಯುವ ವೇಳೆಯಲ್ಲಿ ಆರ್ತಧ್ಯಾನದಿಂದ ಪರಿಗ್ರಹವನ್ನು ಹಿಂದೆ ತನ್ನ ಮಕ್ಕಳಿಗೆ ಬಿಟ್ಟುಹೋದರೂ ಅದು ಮಕ್ಕಳಿಗೆ ಪಾಪದ ಭಾಗವನ್ನೇ ಬಿಟ್ಟುಹೋದನೆಂದು ತಿಳಿಯಬೇಕು. ಶಂಕರಾಚಾರ್ಯರು ಪರಿಗ್ರಹದ ಬಗ್ಗೆ ಹೇಳುತ್ತಾರೆ.–'**ಅರ್ಥಮನರ್ಥಂ ಭಾವಯ ನಿತ್ಯಂ**' ಈ ಸಂಪತ್ತಿಯು ಅರ್ಥಾತ್ ಈ ಅರ್ಥವು ವಿಚಾರ ಮಾಡಿ ನೋಡಿದರೆ ಅನರ್ಥಕ್ಕೆ ಕಾರಣವಾಗಿದೆ. ಶಾಸ್ತ್ರಕಾರರು ಈ ಸಂಪತ್ತಿಯ ವಿಷಯದ ಬಗ್ಗೆ ಬಹಳೇ ಅನರ್ಥವೆಂದು ಹೇಳಿದ್ದಾರೆ. ಆದರೂ ಈ ಮಾನವಪ್ರಾಣಿಯು ಈ ಅನರ್ಥ ಪ್ರಧಾನಯುಗದಲ್ಲಿ ಈ ದುಡ್ಡು ಅಥವಾ ಸಂಪತ್ತಿಯೇ ತಮ್ಮ ನಿಜವಾದ ಪ್ರಾಣವೆಂದು ತಿಳಿದಿದ್ದಾರೆ, ತನ್ನ ಯಾರಾದರೂ ನಿಕಟವರ್ತಿಯಾದ ಬಾಂಧವರು ಮರಣಹೊಂದಿದರೆ ಅವರ ದುಃಖವು ಹೆಚ್ಚು ಹೆಚ್ಚು ಆರುತಿಂಗಳವರೆಗೆ ಇರುತ್ತದೆ; ಆ ಮೇಲೆ ಅದನ್ನು ಮರೆತುಬಿಡುತ್ತಾರೆ. ಆದರೆ ಹಣವನ್ನು ಕಳೆದುಕೊಂಡರೆ ಅದರ ಬಗ್ಗೆ ಆಗುವ ದುಃಖವು ಜನ್ಮ ಜನ್ಮಾಂತರದಲ್ಲಿಯೂ ಮರೆಯುವದಿಲ್ಲ. ಮನುಷ್ಯರಲ್ಲಿ ಹಣಕ್ಕೋಸ್ಕರ ಎಷ್ಟು ಪ್ರಬಲವಾದ ಇಚ್ಛೆಯಿದೆಯೋ ಅಷ್ಟು ಇಚ್ಛೆ ಮತ್ತೊಂದು ವಸ್ತುವಿನಲ್ಲಿ ಇಲ್ಲ,. ಅಥವಾ ಆಗುವದಿಲ್ಲ.

ಆದ್ದರಿಂದ ಋಷಿಗಳು ಅಥವಾ ಮಹಾಯೋಗಿಗಳು ವಿಚಾರಮಾಡಿ ಹೇಳಿದ್ದೇನಂದರೆ:—

" ಆಯೇ ದುಃಖಂ ವ್ಯಯ ದುಃಖಂ ಹಾದುಃಖಂ ಧನಸಂಚಯಃ, "

ಎಂದು ಈ ಪರಿಗ್ರಹಕ್ಕೆ ಹೇಸಿ ಅಪರಿಗ್ರಹವಾದ ವಸ್ತು ಸ್ವೀಕರಿಸಿ ನಿಜ ಸುಖಿಗಳಾದರು. ಓರ್ವ ಧರ್ಮ ಗುರುಗಳು ಒಂದು ಕಾಗದ ಮೇಲೆ ಈಶ್ವರ ವೆಂಬ ಶಬ್ದವನ್ನು ಬರೆದು ಒಬ್ಬ ಸಾವುಕಾರನಿಗೆ ಕೇಳಿದ್ದೇನಂದರೆ:— ಈ ಕಾಗದ ಮೇಲೆ ಬರೆದದ್ದೇನಿದೆ? ಎಂದು. ಆಗ ಶ್ರೀಮಂತನು ಹೇಳುವದೇನಂ ದರೆ, ' ಈಶ್ವರ ' ಮರಳಿ ಧರ್ಮ ಗುರುಗಳು ಆ ಈಶ್ವರ ವೆಂಬ ಶಬ್ದದ ಮೇಲೆ ಒಂದು ಬಂಗಾರದ ಸಿಕ್ಕೆಯನ್ನು ಇಟ್ಟು ಕೇಳಿದ್ದೇನಂದರೆ, ಏನಯ್ಯಾ ಈಗ ನಿನಗೆ ಈಶ್ವರ ಕಾಣುತ್ತಾನೇನು ? ಶ್ರೀಮಂತನಂದದ್ದು:—ಕಾಣುವದಿಲ್ಲ.

ಧರ್ಮ ಗುರುಗಳು ಶ್ರೀಮಂತನಿಗೆ ಎಲೆ ಸಾವುಕಾರನೆ, ಈ ವೇಳೆಯಲ್ಲಿ ಈಶ್ವರನ ಮೇಲೆ ಈ ಬಂಗಾರದ ಆವರಣ ಬಂದಿದೆ. ಇದರಿಂದ ಮನುಷ್ಯನಿಗೆ ಈಶ್ವರನ ದರ್ಶನವಾಗುವದಿಲ್ಲ. ಹೇಳುವ ತಾತ್ಪರ್ಯವೇನಂದರೆ, ಸತ್ಯದ ಪ್ರಾಪ್ತಿ ಅಥವಾ ನಿಜವಾದ ಸ್ವಭಾವ ಸುಖದ ಅಪರಿಗ್ರಹ ಆಕಿಂಚನ್ಯವೆಂಬ ಆತ್ಮಧರ್ಮದ ಪ್ರಾಪ್ತಿಯು ಆಗುವದಿಲ್ಲ, ಪರಿಗ್ರಹದ ಮೂರ್ಛೆಯೇ ಇದಕ್ಕೆ ಕಾರಣವಾಗಿದೆ. ಯಾವ ರೀತಿ ವ್ಯಸನಿಯ ಮನುಷ್ಯನೂ ವ್ಯಸನದಲ್ಲಿ ಮದಾಂಧನಾಗಿರುತ್ತಾನೆಯೋ, ಅದೇ ರೀತಿ ಪರಿಗ್ರಹದ ವ್ಯಸನಿಯೂ ಯಾವತ್ತೂ ಧನದ ಮದದಲ್ಲಿ, ನಿಶೆಯಲ್ಲಿ ಮಗ್ನನಾಗಿರುತ್ತಾನೆ.

ಇಂಥ ಪರಿಸ್ಥಿತಿಯಲ್ಲಿ ಅವನಿಗೆ ಸತ್ಯಮಾರ್ಗದ ಪ್ರತೀತಿಯು ಹ್ಯಾಗೆ ಆದೀತು ?

ಈ ಪರಿಗ್ರಹವು ದರಿದ್ರ ಮನುಷ್ಯನಿಗೆ ದ್ವೇಷಕ್ಕೆ ಕಾರಣವು ಆಗುತ್ತದೆ. ದುಃಖಕ್ಕೆ ಕಾರಣವೂ ಆಗುತ್ತದೆ. ಬಡ ಜನರು ತಮ್ಮ ಶ್ರಮದಿಂದ ಹಣ ವನ್ನು ಗಳಿಸಿ ಅದರಲ್ಲಿ ತಮ್ಮ ಬಾಳಿಕೆ ಮಾಡಿ ಸಂತೋಷ ಬಡುತ್ತಾರೆ. ಅವರು ಪರಿಗ್ರಹದ ಆಶೆಗೆ ಬಿದ್ದರೆ, ಮನಸ್ಸಿನಲ್ಲಿ ಶ್ರೀಮಂತಿಕೆಯ ಭಾವನೆ ಬಂದು ಅನೇಕ ದುಷ್ಕೃತ್ಯಗಳನ್ನು ಮಾಡಿ ಪುನಃ ಇಹಪರಲೋಕದಲ್ಲಿ ಮನೆಯಿಲ್ಲದೆ ದುಃಖಕ್ಕೆ ಕಾರಣರಾಗಿ ಸ್ವಧರ್ಮದ ಮರ್ಮವನ್ನು ತಿಳಿಯದೆ ಅನಂತ ಭವಗಳ ದುಃಖವನ್ನು ಭೋಗಿಸುವವರಾಗುತ್ತಾರೆ.

ಶ್ರೀಮಂತರು ಕಷ್ಟಪಡದೇ ಕೇವಲ ದುಡ್ಡಿನ ಬಲದಿಂದ ಏಳೆಂಟು ಮಜ ಲಿನ ಮನೆಯಲ್ಲಿ ಮೋಜು ಅಥವಾ ಚೈನಿಯನ್ನು ಮಾಡುತ್ತಾರೆ. ಮೋಟಾರ ಅಥವಾ ಕಾರದಲ್ಲಿ ಕೂತು ಬೇಕಾದಲ್ಲಿ ತಿರುಗಾಡುತ್ತಾರೆ. ಮಿಷ್ಟಾನ್ನ

ಭೋಜನ ಮಾಡುತ್ತಾರೆ. ಅನೇಕ ಪ್ರಕಾರದ ರೇಶಿಮೆ ಮೊದಲಾದ ವಸ್ತ್ರಗಳನ್ನು ಧರಿಸುತ್ತಾರೆ. ಈ ರೀತಿ ಪರಿಗ್ರಹದ ಸಂಚಯದಿಂದ ಅನೇಕ ವಿಷಯ ವಾಸನೆಗಳನ್ನು ವೃದ್ಧಿಗೊಳಿಸಿ ನಿಜವಾಗಿ ಸತ್ಯಧರ್ಮದ ಮಾರ್ಗವನ್ನು ಅರಿಯದೆ ಆಕುಲ ವ್ಯಾಕುಲ ಚಿತ್ತರಾಗಿ ಪರಿಣಾಮದಲ್ಲಿ ಪುನಃ ಸಂಸಾರದಲ್ಲಿ ಪಾಪಸಂಚಯದಿಂದ ಸುತ್ತುತ್ತಲಿರುತ್ತಾರೆ.

ಜಗತ್ತಿನಲ್ಲಿ ಅಪರಿಗ್ರಹವೇ ಸುಖ ಮತ್ತು ಶಾಂತಿಯನ್ನು ಕೊಡುವದಾಗಿದೆ.; ಮತ್ತು ಅಂತ್ಯಕಾಲದಲ್ಲಿ ಮೋಕ್ಷವನ್ನೂ ಸಹ ಕೊಡುವದಾಗಿದೆ. ಅಪರಿಗ್ರಹವಿಲ್ಲದೆ ಆತ್ಮನ ಶುದ್ಧಿಯಾಗುವದಿಲ್ಲ; ಅನಾದಿಕಾಲದಿಂದ ಈ ಆತ್ಮನು ಪರವಸ್ತುಗಳ ಸಂಯೋಗದಿಂದಲೇ ಮಲೀನನಾಗಿರುತ್ತಾನೆ. ಈ ಹೊರಗಿನ ಮಲೀನತೆಯು ಎಷ್ಟರವರೆಗೆ ತನ್ನ ನಿಜ ಭಾವದಲ್ಲಿ ಹೋಗುವದಿಲ್ಲವೋ ಅಷ್ಟರವರೆಗೆ ಜಗತ್ತಿನಲ್ಲಿ ಪೂಜ್ಯನಾಗುವದಿಲ್ಲ. ಆತ್ಮನ ಸ್ವರೂಪವು ಯಾವತ್ತೂ ದಿಗಂಬರ (ನಿರ್ವಿಕಾರ) ಸ್ವರೂಪವಾಗಿದೆ. ತನ್ನ ಸ್ವ ಸ್ವಭಾವವನ್ನೂ ಬಿಟ್ಟು ವಿಜಾತಿ ಸ್ವಭಾವವುಳ್ಳವನಾಗಿರುವದರಿಂದ ಈತನು ಪರಬುದ್ಧಿಗೆ ಬಲಿಯಾಗಿ ಪರವಸ್ತುವೇ ತಾನೆಂದು ಭಾವಿಸಿಕೊಂಡು ಪರಪರಿಣತಿಯುಳ್ಳವನಾಗಿದ್ದಾನೆ. ಸಂಸೃತಿಯಲ್ಲಿ ತನ್ನನ್ನೇ ತಾನು ತಿಳಿಯುವುದೆ ಉತ್ತಮ ಆಕಿಂಚನ್ಯ ಧರ್ಮವು.

ಈ ಆಕಿಂಚ್ಯನ್ಯ ಧರ್ಮವು ಜಗತ್ ಪೂಜ್ಯವಾಗಿದೆ. ಸಂಸಾರದಲ್ಲಿ ಎಷ್ಟೋ ಮಂದ ಮತಿಗಳು ದಿಗಂಬರ ಸಾಧುಗಳನ್ನು ನೋಡಿ ಅಪಹಾಸ್ಯವನ್ನು ಮಾಡುತ್ತಿರುತ್ತಾರೆ. ಆದರೆ ಅವರು ತಮ್ಮಲ್ಲಿಯೇ ನಿಜವಾಗಿ ವಿಚಾರಿಸಿ ನೋಡಿಲ್ಲ. ತಾವು ತಾಯಿಯ ಗರ್ಭದಿಂದ ಜನ್ಮ ತಾಳುವಾಗ ದಿಗಂಬರ ಸ್ವರೂಪದಿಂದಲೇ ಬಂದದ್ದು, ಮತ್ತು ಹೋಗುವಾಗಲೂ ದಿಗಂಬರ ವೇಷದಿಂದಲೇ ಹೋಗಬೇಕಾದುದು ಗೊತ್ತಿರುವದಿಲ್ಲ. ನಾವು ಪ್ರಾಪ್ತಮಾಡಿಕೊಂಡ ಶರೀರವೂ ಕೂಡಾ ಒಂದು ದೊಡ್ಡ ಪರಿಗ್ರಹವಾಗಿದೆ. ಶರೀರವೂ ತನ್ನ ಮರ್ಯಾದೆಯನ್ನು ಪಡೆದು ಬಂದಿರುತ್ತದೆ. ಮರ್ಯಾದೆಯು ತೀರಿದ ಮೇಲೆ ಒಂದು ಕ್ಷಣವೂ ಸಹ ಆತ್ಮನ ಜೊತೆಯಲ್ಲಿ ಹಿಡಿದು ಕಟ್ಟಿದರೂ ಕೂಡಾ ನಿಲ್ಲಲು ಸಾಧ್ಯವಿಲ್ಲ. ಇದರ ಸಾರಾಂಶ ವೇನೆಂದರೆ, ಆಕಿಂಚ್ಯನ್ಯವೇ ಆತ್ಮನ ನಿಜ ಸ್ವರೂಪವಾಗಿದೆ. ಆಕಿಂಚ್ಯನವನ್ನು ನಾವು ಪ್ರಾಪ್ತಮಾಡಿ ಸುಖ ಸಂತೋಷದಲ್ಲಿ ಇರಬೇಕೆಂಬ ಇಚ್ಛೆಯುಳ್ಳವರಾದರೆ ಪರಿಗ್ರಹದ ಆಶೆಯನ್ನು ತೊರೆಯುವ ಅಭ್ಯಾಸಿಗಳಾಗಬೇಕು. ದಿಗಂಬರ (ನಗ್ನ) ಅವಸ್ಥೆಯು ಯಾವ ಅವಸ್ಥೆಗಳಿಗಿಂತಲೂ ಶ್ರೇಷ್ಠವಾಗಿರು

ತ್ತದೆ. ಯಾಕಂದರೆ ಜಗತ್ತಿನಲ್ಲಿ ನಾವು ವಿಚಾರಿಸಿದರೆ ಜಗತ್ತೂ ಕೂಡ ದಿಗಂಬರ ಸ್ವರೂಪದಲ್ಲಿರುತ್ತದೆ. ಜಗತ್ತಿನಲ್ಲಿ ಉತ್ಪನ್ನವಾಗುವ ಪದಾರ್ಥಗಳೂ ಕೂಡ ದಿಗಂಬರ ಸ್ವರೂಪ ಉಳ್ಳವುಗಳಾಗಿರುತ್ತವೆ. ನಾವು ಯಾವಾಗಲೂ ವಸ್ತುಗಳನ್ನು ತಿನ್ನಬೇಕಾದರೆ ದಿಗಂಬರ ಸ್ವರೂಪದಿಂದಲೇ ತಿನ್ನಬೇಕಾಗುತ್ತದೆ. ಬಾಳೆ ಹಣ್ಣನ್ನು ಸುಲಿದು ತಿನ್ನಬೇಕಾಗುತ್ತದೆ. ಅಕ್ಕಿಯನ್ನು ತಿನ್ನಬೇಕಾದರೆ ಮೇಲಿನ ಆವರಣವನ್ನು ದೂರ ಮಾಡಿ (ಕುಟ್ಟಿ) ತಿನ್ನಬೇಕಾಗುತ್ತದೆ. ಜಗತ್ತಿನಲ್ಲಿ ನಾವು ನೋಡುವ ವಸ್ತುಗಳೆಲ್ಲ ದಿಗಂಬರ ಸ್ವರೂಪವುಳ್ಳವುಗಳಾಗಿರುತ್ತವೆ. ನಾವು ಸ್ನಾನಮಾಡಬೇಕಾದರೂ ಕೂಡ ದಿಗಂಬರ ರೂಪದಲ್ಲಿಯೇ ಸ್ನಾನ ಮಾಡಬೇಕಾಗುತ್ತದೆ. ಈ ಪ್ರಕಾರ ದಿಗಂಬರ ಸ್ವರೂಪದಲ್ಲಿಯೇ ಜಗತ್ತಿನ ವಸ್ತುಗಳು ಇದ್ದದ್ದು ಕಂಡುಬರುತ್ತದೆ. ಆದರೆ ನಾವು ನಮ್ಮ ವಿಕಾರ ಆತ್ಮನ ಸ್ವರೂಪವನ್ನು ನಿರ್ವಿಕಾರ ದೃಷ್ಟಿಯಿಂದ ನೋಡದೆ ಹೊರಗಿನ ವಿಕಾರಮಯವಾದ ದೃಷ್ಟಿಗಳು ನಮ್ಮಲ್ಲಿ ಇರುವದರಿಂದ ನಮಗೆ ಈ ದಿಗಂಬರತ್ವವೂ ಮತ್ತು ಹೊರಗಿನ ನಗ್ನವೇಷವೂ ಅಸಹ್ಯವಾಗಿ ಕಾಣುತ್ತದೆ. ಹೊರಗಿನ ವಿಕಾರಮಯ ದೃಷ್ಟಿಯೇ ಇದಕ್ಕೆ ಕಾರಣವು.

ನೋಡಿರಿ ಯಾವ ಸಮಯದಲ್ಲಿ ತಮ್ಮಲ್ಲಿ ಆಕಿಂಚನ್ಯಧರ್ಮವು ಬರುವದೋ ಆಗ್ಗೆ ನಮ್ಮಲ್ಲಿ ಹೊರಗಿನ ವಿಕಾರಮಯ ಭಾವಗಳಾಗುವದಿಲ್ಲ. ಎಷ್ಟೋ ಜನರು ನಗ್ನದಿಗಂಬರ ಗುರುಗಳನ್ನು ನೋಡಿ ಪರಿಣಾಮದಲ್ಲಿ ವಿಕಾರ ಭಾವದ ಶಂಕೆಯನ್ನು ತಂದುಕೊಳ್ಳುತ್ತಾರೆ. ಮತ್ತು ದಿಗಂಬರ ಸಾಧುಗಳ ನಿಂದೆಯನ್ನು ಮಾಡುತ್ತಾರೆ. ಮತ್ತು ಅವರ ನಗ್ನತ್ವವನ್ನು ನೋಡಿ ಉಪೇಕ್ಷೆ ಮಾಡುತ್ತಾರೆ. ದಿಗಂಬರ ಸಾಧುಗಳನ್ನು ನೋಡಿ ವಿಕಾರಭಾವ ಮಾಡಿಕೊಳ್ಳುವದು ಇದು ವಿಸಂಗತವಾಗಿದೆ. ಯಾಕಂದರೆ ನಿಜವಾಗಿ ದಿಗಂಬರತ್ವದ ಬಗ್ಗೆ ಬುದ್ಧಿಯಿಂದ ವಿಚಾರಿಸದೆ ದಿಗಂಬರತ್ವವು ಅಸಹ್ಯವೆಂದು ಭಾವಿಸುವದು ತಪ್ಪು. ಈ ದಿಗಂಬರತ್ವವು ಅಸಹ್ಯವೆಂದು ನಾವು ಭಾವಿಸಿದ ಮೇಲೆ ಚಿಕ್ಕ ಚಿಕ್ಕ ಬಾಲ ಬಾಲಿಕೆಯರು ಜನ್ಮದಿಂದಲೇ ನಗ್ನರೂಪದಿಂದ ಜನಿಸಿಬರುತ್ತಾರೆ. ಅವರು ನಗ್ನರೂಪಲ್ಲಿ ಚರಿಸುತ್ತಿರುತ್ತಾರೆ. ಆದರೆ ಅವರಲ್ಲಿ ವಿಕಾರಭಾವವು ಆಗುವದಿಲ್ಲವೇಕೆ ? ತಾಯಿಯು ತನ್ನ ಮಗುವಿಗೆ ಸ್ನಾನ ಹಾಕುತ್ತಾಳೆ. ಇದೇ ರೀತಿ ತಂದೆಯು ತನ್ನ ಮಗಳನ್ನು ತನ್ನ ಚಿಕ್ಕ ತಂಗಿಯನ್ನು ಸ್ನಾನ ಹಾಕುವಾಗ ಮಲ ಮೂತ್ರಗಳನ್ನು ತೊಳೆಯುವಾ

ಗಲೂ ಅವರಿಗೆ ವಿಕಾರಭಾವವಾಗಬೇಕಾಗಿತ್ತು. ಆದರೆ ಇದರಂತೆ ನಮ್ಮ ಭಾರತದಲ್ಲಿ ೭-೮ ವರ್ಷಗಳವರೆಗೆ ಬಾಲಕರು ನಗ್ನಾವಸ್ಥೆಯಲ್ಲಿಯೇ ವಿಹರಿಸುತ್ತಿರುತ್ತಾರೆ. ಆದರೆ ಅವರನ್ನು ನೋಡಿ ಯಾರಿಗಾದರೂ ವಿಕಾರಭಾವವು ಉತ್ಪನ್ನವಾಗುವದೆ? ಹಾಗೆ ಇನ್ನೂವರೆಗೆ ಎಲ್ಲಿಯೂ ಕಂಡುಬಂದಿಲ್ಲ. ಯಾಕಂದರೆ ಬಾಲ ಬಾಲಕರಲ್ಲಿ ವಿಕಾರ ಭಾವದಕಲ್ಪನೆಯು ಆಗುವದಿಲ್ಲ.

ಇದೇ ರೀತಿ ನಗ್ನದಿಗಂಬರ ಸಾಧುಗಳಲ್ಲಿಯೂ ಅವರ ಸಂಸಾರ ವಿಷಯ ವಾಸನೆಯು ನಷ್ಟವಾಗಿ ಪರವಸ್ತುವಿನಿಂದ ಭಿನ್ನವಾದ ತನ್ನ ಶುದ್ಧ ಆತ್ಮ ವಸ್ತುವಿನಲ್ಲಿಯೇ ವಿಚಾರಿಸುವದರಿಂದ ಅನೇಕಪ್ರಕಾರದ ಸಂಸಾರದಲ್ಲಿ ವಿಹರಿಸುತ್ತಿದ್ದರೂ ಸಂಸಾರ ಸಂಬಂಧದ ವಿಷಯವಾಸನೆಗಳನ್ನು ಉತ್ಪನ್ನಮಾಡುವ ವಿಕಾರಿ ವಸ್ತುಗಳು ಅವರ ದೃಷ್ಟಿಯಮುಂದೆ ನಿಂತಿದ್ದರೂ ಕೂಡ ಆ ವಿಕಾರಿ ವಸ್ತುಗಳನ್ನು ಸಂಸಾರಕ್ಕೆ ಕಾರಣವಾಗಿರುವವೆಂದು ಅವುಗಳನ್ನು ನೋಡಿ ಹೇಸಿ ಬಿಟ್ಟಿರುವದರಿಂದ ಅವು ಅವರ ಮನಸ್ಸಿನಲ್ಲಿ ನಟ್ಟಿರುವದಿಲ್ಲ. ಯಾಕಂದರೆ ಅವರು ವಿಷಯವಾಸನೆಯನ್ನು ನಷ್ಟ ಮಾಡಿರುವದರಿಂದ ನಾನು ದಿಗಂಬರ ನಿರುವೆನೆಂದು ಅವರ ಕಲ್ಪನೆಯಲ್ಲಿಯೂ ಸಹ ಬರುವದಿಲ್ಲ. ಆದ್ದರಿಂದ ಈ ದಿಗಂಬರ ಅವಸ್ಥೆಗೇ ಜಾತರೂಪವೆಂದು ವಿಶೇಷಣ ಕೊಟ್ಟಿದ್ದಾರೆ. ಇದರಂತೆ ಹುಟ್ಟಿದ ಮಕ್ಕಳೂ ಕೂಡ ಜಾತರೂಪವಿರುವದರಿಂದ ಆ ಮಕ್ಕಳಲ್ಲಿ ನಾವು ನಗ್ನರೂಪದಲ್ಲಿರುವೆವೆಂದು ಕಲ್ಪನೆಯು ಅವರಲ್ಲಿ ಬರುವದಿಲ್ಲ. ಇದರಂತೆ ಈ ದಿಗಂಬರ ಸಾಧುಗಳಲ್ಲಿ ಸ್ವಪರ ಜ್ಞಾನವಾಗುವದರಿಂದ ಅವರು ಕೇವಲ ನಿರ್ವಿಕಾರರೂಪ ಅಕಿಂಚನ್ಯ ಸ್ವರೂಪದ ವಿಚಾರದಲ್ಲಿಯೇ ವಿಹರಿಸುತ್ತಿರುವರು. ಆದ್ದರಿಂದ ಈ ಸಂಸಾರವು ಪರಿಗ್ರಹ ರೂಪವಾಗಿ ಈ ಆಕಿಂಚನ್ಯ ರೂಪವಾದ ಆತ್ಮನನ್ನೇ ಸಂಸಾರದಲ್ಲಿ ಪರಿಭ್ರಮಣ ಮಾಡುವದಕ್ಕೆ ಕಾರಣವಾಗಿದೆ. ಆದ್ದರಿಂದ ಅಪರಿಗ್ರಹ ರೂಪವಾದ ಆತ್ಮನ ಸ್ವರೂಪದಲ್ಲಿ ಮಗ್ನವಾಗಿ ಆತ್ಮನಲ್ಲಿ ಸುಖಶಾಂತಿಯನ್ನು ಮಾಡಿಕೊಳ್ಳುವದೇ ಆಕಿಂಚನ್ಯಧರ್ಮವಾಗಿದೆ. ಕಿಂಚಿತ್ ಮಾತ್ರ ಪರಿಗ್ರಹ ಲಾಲಸೆಯಾದಲ್ಲಿ ನಿಜವಾದ ಆತ್ಮ ಸ್ವರೂಪವು ಪ್ರಾಪ್ತವಾಗುವದಿಲ್ಲವೆಂದು ತಿಳಿದು ಈ ಸಂಸಾರಸಮುದ್ರದಿಂದ ಪಾರಾಗಬೇಕೆಂಬ ಇಚ್ಛೆಯುಳ್ಳ ಭವ್ಯಜೀವಗಳು ಅಪರಿಗ್ರಹ ಪರಿಣಾಮವನ್ನು ಮಾಡಿಕೊಳ್ಳಬೇಕೆಂದು ಭಾವವು.

-: ಇತಿ ಓಂ ಹ್ರೀಂ ಆಕಿಂಚನ್ಯ ಧರ್ಮಾಂಗಾಯನಮಃ :-

೧೦ ಉತ್ತಮ ಬ್ರಹ್ಮಚರ್ಯ ಧರ್ಮ.

ಐಶ್ವರ್ಯಶ್ಚ ವಿಭೂಷಣಂ । ಸುಜನತಾ ಶೌರ್ಯಶ್ಯ ವಾಕ್ ಸಂಯಮೊ ॥
ಜ್ಞಾನಸ್ಯೋಪಶಮಃ ಶ್ರುತಶ್ಯವಿನಯೋ ವಿತ್ತಸ್ಯ ಪಾತ್ರೆಗ್ನಯಃ ॥
ಅಕ್ರೋಧಸ್ಥವಸಾಃ ಕ್ಷಮಾಃ ಪ್ರಭವಿತುರ್ । ಧರ್ಮಶ್ಯ ನಿರ್ವಾಗತಾ॥
ಸರ್ವೇಶಾಮಪಿ ಸರ್ವಕಾರಣ ಮಿದಂ । ಶೀಲಂಪರಂ ಭೂಷಣಂ ॥

ಅರ್ಥಃ—ಐಶ್ವಯ, ಆಭರಣ, ಸಜ್ಜನತೆ, ಶೂರ, ವೀರ, ವಾಕ್ ಸಂಯಮವು, ಜ್ಞಾನಕ್ಕೆ ಶಾಂತಭಾವ, ಶಾಸ್ತ್ರಕ್ಕೆ ವಿನಯ, ಸಂಪತ್ತಿಯ ಪಾತ್ರದಾನ, ತಪಕ್ಕೆ ಭೂಷಣವು ಶಾಂತಿಗೆ ಕ್ರೋಧವಿಲ್ಲದೆ ಇರುವದು, ಸಾಮರ್ಥ್ಯವಾನರಿಗೆ ಕ್ಷಮೆ, ಧರ್ಮದ ಭೂಷಣ, ನಿಷ್ಕಪಟ, ಸುಶೀಲ ಇವೆಲ್ಲ ಪ್ರಾಪ್ತ ಮಾಡಿಕೊಳ್ಳಬೇಕಾದರೆ ಸರ್ವೋತ್ತಮವಾದದ್ದು ಭೂಷಣವಾದದ್ದು ಶೀಲವಾಗಿರುತ್ತದೆ.

ಬ್ರಹ್ಮಚರ್ಯವು ಆತ್ಮನ ಸ್ವಭಾವವಾಗಿದೆ. ಬ್ರಹ್ಮಚರ್ಯವೆಂದರೆ ಆತ್ಮನಲ್ಲಿಯೇ ಅಥವಾ ಜ್ಞಾನದಲ್ಲಿಯೇ ಚರಿಸುವದು, ಅಥವಾ ರತವಾಗುವದು ಸೇವಿಸುವದೂ, ಅನುಭವಿಸುವದೂ ಇದಕ್ಕೆ ಬ್ರಹ್ಮಚರ್ಯ ವೆನ್ನುತಾರೆ. ಬ್ರಹ್ಮಣೀ--ಚರಿತಿ–ಇತಿ–ಬ್ರಹ್ಮಚರ್ಯಾ, ಅರ್ಥಾತ್ ಆತ್ಮನಲ್ಲಿ ರಮಣ ಮಾಡುವದು ಅಥವಾ ಚರಿಸುವದು ಇದು ಬ್ರಹ್ಮಚರ್ಯವಾಗಿದೆ.

ಈ ಬ್ರಹ್ಮಚರ್ಯವು ಆತ್ಮನ ಸ್ವಭಾವವಾಗಿದೆಹೇಗಂದರೆ ಈ ಬ್ರಹ್ಮವೆಂಬ ಆತ್ಮನ ಸ್ವಭಾವವು ಎಷ್ಟುರವರೆಗೆ ವಿಭಾವ ಭಾವಗಳನ್ನು ತೊರೆಯುವದಿಲ್ಲವೊ ಅಥವಾ ತನ್ನ ಸ್ವರೂಪದಲ್ಲಿ ರತವಾಗುವದಿಲ್ಲವೋ ಅಷ್ಟುರವರೆಗೆ ಈ ಶುದ್ಧಾತ್ಮನ ಪ್ರಾಪ್ತಿಯಾಗುವದಿಲ್ಲ. ಯಾವ ಸಮಯದಲ್ಲಿ ವಿಭಾವ ಪರಣತಿಯನ್ನು ತೊರೆದು ತನ್ನ ಸ್ವಭಾವದಕಡೆಗೆ ತಿರುಗಿ ತನ್ನ ಸ್ವರೂಪದಲ್ಲಿಯೇ ರತವಾಗುವನೊ ಆವಾಗ್ಗೆ ತನ್ನ ಸ್ವರೂಪದ ಜ್ಞಾನವಾಗಿ ಆನಂದವಾಗಿ ಅದರಲ್ಲಿಯೇ ರತವಾದಾಗ ಸ್ವರೂಪದ ಅರಿಕೆಯು ಪರಿಪೂರ್ಣವಾಗಿ ಆಗುತ್ತದೆ. ಇದಕ್ಕೇನೇ ಸ್ವಬ್ರಹ್ಮಚರಿತವೆಂದು ಹೇಳುವರು. ಆದ್ದರಿಂದ ಇದಕ್ಕೆ ಉತ್ತಮ ಬ್ರಹ್ಮಚರ್ಯವೆಂದು ಹೇಳುವರು. ಆದ್ದರಿಂದ ಬ್ರಹ್ಮಚರ್ಯಕ್ಕೆ ಧರ್ಮವೆಂದು ಹೇಳುತ್ತಾರೆ. ಯಾಕಂದರೆ ಈ ಧರ್ಮವು ಆತ್ಮವಸ್ತು ಸ್ವರೂಪವಾಗಿದೆ. ಆದ್ದರಿಂದ ವಸ್ತುಸ್ವರೂಪೋಧರ್ಮಃ ಎಂದು ಆಚಾರ್ಯರು ಹೇಳುತ್ತಾರೆ.

ಇನ್ನು ವ್ಯವಹಾರ ಬ್ರಹ್ಮಚರ್ಯ ಹೇಳುತ್ತಾರೆಃ—

ಸ್ತ್ರೀಯರನ್ನು ತೊರೆದು ಜ್ಞಾನ ಸಾಧನೆಗೋಸ್ಕರ ತನ್ನ ಉಪಯೋಗವನ್ನು ಮಾಡುವದು ತನ್ನ ಆತ್ಮನ ಚರಿಸುವದು ಅಥವಾ ಸ್ತ್ರೀಸಂಬಂಧವಾದ ಮೈಥುನ ವನ್ನು ತೊರೆಯುವದು ಬ್ರಹ್ಮಚರ್ಯವು. ಈ ಬ್ರಹ್ಮಚರ್ಯವನ್ನು ಪಾಲಿಸ ಬೇಕಾದರೆ ಸಂಸಾರದಲ್ಲಿರುವ ಸ್ತ್ರೀಯರಾಗಲೀ ಅಥವಾ ಪುರುಷರಾಗಲಿ ಪಶು, ದೇವ, ಮನುಷ್ಯ ಮೊದಲಾದ ಮತ್ತು ಕಾಷ್ಟ ಪಾಷಾಣ ಮುಂತಾದ ಚಿತ್ರ ದಲ್ಲಿ ಬರೆದಿರುವ ಸ್ತ್ರೀಯರ ಚಿತ್ರಗಳನ್ನು ಸಹ ತೊರೆಯುವದು ಮತ್ತು ಅವು ಗಳನ್ನು ರಾಗಭಾವದಿಂದ ನೋಡದೆ ಇರುವದೂ ಬ್ರಹ್ಮಚರ್ಯವಿದೆ.

ಸ್ತ್ರೀಯರ ಬ್ರಹ್ಮಚರ್ಯದ ದೋಷಗಳು:—

ಪರ ಪುರುಷರ ಸಂಬಂಧವಾಗಿ ಹೆಚ್ಚಿಗೆ ಪರಿಚಯ ಮಾಡುವದೂ ಮಾತನಾಡುವದೂ, ಹಾಸ್ಯ ಮಾಡುವದೂ, ಅಥವಾ ನಾಟಕ ಸಿನೇಮಾ ಮೊದಲಾದ ಭೋಗಸಂಬಂಧವಾದ ಪುರುಷರ ಚಿತ್ರಗಳನ್ನು ನೋಡುವದೂ ಅಂಥ ಕಾಮುಕ ಜನರ ಸಹವಾಸ ಮಾಡುವದೂ, ಸ್ತ್ರೀ ಸ್ತ್ರೀಯರೂ ಕೂಡಿ ಅನಂತ ಕ್ರೀಡೆಯನ್ನು ಮಾಡುವದು, ಅರ್ಥಾತ್ ಸ್ತ್ರೀ ಸ್ತ್ರೀಯರು ಕೂಡಿ ಭೋಗ ಭಾವನೆಯಿಂದ ಮಾತಾಡುವದೂ ಇವೆಲ್ಲ ಬ್ರಹ್ಮಚರ್ಯದ ಹಾನಿಗೆ ಕಾರಣವೆಂದರಿದು ಮೋಕ್ಷ ಸುಖದ ಇಚ್ಛೆಯುಳ್ಳ ಸ್ತ್ರೀ–ಪುರುಷರು ಒಬ್ಬರನ್ನೊ ಬ್ಬರು ತೊರೆಯುವದು ವ್ಯವಹಾರ ಬ್ರಹ್ಮಚರ್ಯವಿದೆ. ಇಲ್ಲಿ ಮುಖ್ಯವಾಗಿ ಸ್ಪರ್ಶನೇಂದ್ರಿಯ ವಿಷಯಕ್ಕೇನೇ ಅಬ್ರಹ್ಮವೆಂದು ಹೇಳುತ್ತಾರೆ. ಇದರ ಕಾರಣ ವೇನಂದರೆ ಇಂದ್ರಿಯ ವಿಷಯಗಳಲ್ಲಿ ಸ್ಪರ್ಶನೇಂದ್ರಿಯವು ಎಲ್ಲಕ್ಕಿಂತ ಬಲ ವಾಗಿರುವದು ಕಂಡು ಬರುತ್ತದೆ. ಅನ್ಯ ಇಂದ್ರಿಯಗಳ ವಿಷಯವು ಇಷ್ಟು ಬಲವಾನ ವಾಗಿರುವದಿಲ್ಲ. ಇವುಗಳ ಸೇವನೆ ಮಾಡುವದರಲ್ಲಿ ಜನ ಸಾಧಾ ರಣ ದೃಷ್ಟಿಯಿಂದ ಇವುಗಳಿಂದ ಉಳಿಯುವ ಪ್ರಯತ್ನವನ್ನು ಮಾಡಿದರೆ ಇಷ್ಟು ಹೆಚ್ಚಾಗಿ ಪರಿಗ್ರಹದ ಬಗ್ಗೆ ಚಿಂತೆಯು ಆಗುವಂತಿಲ್ಲ. ಎಷ್ಟೆಷ್ಟು ಇಂದ್ರಿಯಗಳ ವಿಷಯವು ಹೆಚ್ಚುತ್ತ ಹೋಗುತ್ತದೆಯೋ ಅಷ್ಟಷ್ಟು ಪರಿ ಗ್ರಹವು ಬೆಳೆಯುತ್ತ ಹೋಗುತ್ತದೆ. ಬ್ರಹ್ಮಚರ್ಯವುಳ್ಳ ಸ್ತ್ರೀ-ಪುರುಷರಿಗೆ ಅಂಜನ, ಮಂಜನ, ಶೃಂಗಾರ, ನೋಟಕ್ಕೆ ಮಾಟ, ಕಂಣಿನಲ್ಲಿ ಕಜ್ಜಲ, ಸುಂದರ ವಾದ ವಸ್ತ್ರಾಭೂಷಣ, ಇಂದ್ರಿಯಗಳಿಗೆ ಉತ್ತೇಜಕವಾದ ಪೌಷ್ಟಿಕವಾದ ಆಹಾರ, ರಾಗರಂಗ ಮೊದಲಾದವುಗಳನ್ನು ತೊರೆಯಬೇಕು. ಯಾಕಂದರೆ

ಇವುಗಳೆಲ್ಲ ಇಂದ್ರಿಯ ಉತ್ತೇಜನಕ್ಕೆ ಕಾರಣಗಳಾಗಿರುತ್ತವೆ. ಈ ಬ್ರಹ್ಮಚರ್ಯವು ಸಾಮಾನ್ಯವಾಗಿ, ಸಹಜವಾಗಿ, ಸಾಧಾರಣವಾಗಿ ಮಾನವರಿಗೆ ಆಗುವದು ಶಕ್ಯವಿಲ್ಲ. ಬ್ರಹ್ಮಚರ್ಯವನ್ನು ಪಾಲಿಸುವವರಿಗೆ ಬ್ರಾಹ್ಮಣ ಎಂದು ಹೆಸರು ಬಿದ್ದಿದೆ.

ಸತ್ಯಂಬ್ರಹ್ಮಂ ತಪೋ ಬ್ರಹ್ಮಾ । ಬ್ರಹ್ಮಂ ಚೇಂದ್ರಿಯನಿಗ್ರಹಂ ।
ಸರ್ವೇ ಭೂತದಯಾ ಬ್ರಹ್ಮಾ । ಏತತ್ ಬ್ರಾಹ್ಮಣ ಲಕ್ಷಣಮ್

ಸತ್ಯ ಮಾತಾಡುವದೂ, ತಪಶ್ಚರ್ಯ ಮಾಡುವದೂ, ಇಂದ್ರಿಯ ನಿಗ್ರಹ ಮಾಡುವದೂ, ಎಲ್ಲ ಪ್ರಾಣಿಗಳ ಮೇಲೆ ದಯಾ ಭಾವದಿಂದ ರಕ್ಷಿಸುವದೂ, ಇವೆಲ್ಲ ಬ್ರಹ್ಮಚರ್ಯ ಅಥವಾ ಬ್ರಾಹ್ಮಣ ಲಕ್ಷಣಗಳಿವೆ. ಬ್ರಹ್ಮಚರ್ಯದಿಂದಲಾಭ, ಮತ್ತು ಬ್ರಹ್ಮಚರ್ಯ ನಾಶದಿಂದ ಅದರ ಹಾನಿ. ಬ್ರಹ್ಮಚರ್ಯ ರಕ್ಷಣದಿಂದ ಶರೀರದಲ್ಲಿ ತೇಜ-ಉತ್ಸಾಹ ಬಲ ಧೈರ್ಯ ಮೊದಲಾದವುಗಳು ವೃದ್ಧಿಯಾಗುತ್ತವೆ. ಮತ್ತು ಶೀತ ಉಷ್ಣ ಮೊದಲಾದ ಪೀಡೆಗಳನ್ನು ಸಹನಮಾಡುವ ಶಕ್ತಿ ಉಂಟಾಗುತ್ತದೆ. ಅಧಿಕ ಪರಿಷಹವನ್ನು ಮಾಡಿದರೂ ಕೂಡಾ ಅವರಿಗೆ ಅದರ ಕಲ್ಪನೆ ಇರುವದಿಲ್ಲ. ಮತ್ತು ಪ್ರಾಣವಾಯುವನ್ನು ಸ್ಥಿರ ಮಾಡುವ ಶಕ್ತಿಯೂ ಬರುತ್ತದೆ. ಶರೀರದಲ್ಲಿ ಸ್ಫೂರ್ತಿ ಅಥವಾ ಚೈತನ್ಯದಲ್ಲಿ ಸ್ಫೂರ್ತಿ ಉಂಟಾಗುವದು. ಆಲಸ್ಯವು ನಷ್ಟವಾಗುತ್ತದೆ. ರೋಗಗಳು ಆಕ್ರಮಣ ಮಾಡುವದಿಲ್ಲ. ಮನಸ್ಸು ಪ್ರಸನ್ನವಾಗಿರುತ್ತದೆ. ಕೆಲಸ ಮಾಡುವದರಲ್ಲಿ ಸ್ಫೂರ್ತಿಯುಂಟಾಗುತ್ತದೆ. ಇನ್ನೊಬ್ಬರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವೂ ಆಗುತ್ತದೆ. ಇಂದ್ರಿಯ ಸಂಯಮನದಿಂದ ಬಲವಾನ ಸಂತಾನಗಳ ಉತ್ಪತ್ತಿಯಾಗುತ್ತದೆ. ಶರೀರದ ಅಂಗ ಪ್ರತ್ಯಂಗಗಳಲ್ಲಿ ದೃಢತೆಯೂ ಉತ್ಪನ್ನವಾಗುತ್ತದೆ. ಬೇಗನೆ ವೃದ್ಧಾವಸ್ಥೆಯು ಬರುವದಿಲ್ಲಾ. ಶರೀರ ಸ್ವಾಸ್ಥ್ಯವು ಯಾವಾಗಲೂ ನಿರೋಗಿಯಾಗಿರುತ್ತದೆ. ಬುದ್ಧಿಯು ತೀವ್ರವಾಗುತ್ತದೆ. ಸ್ಮರಣಶಕ್ತಿಯನ್ನೂ ವೃದ್ಧಿಗೊಳಿಸುತ್ತದೆ. ದೊಡ್ಡ ದೊಡ್ಡ ಸಂಕಟಗಳು ಒದಗಿದರೂ ಸಹನ ಮಾಡುವಂಥ ಶಕ್ತಿಯು ಬರುತ್ತದೆ. ದೊಡ್ಡ ದೊಡ್ಡ ವೀರ ಪುರುಷರ ಸನ್ಮುಖವಾಗುವ ಶಕ್ತಿಯು ಉಂಟಾಗುತ್ತದೆ. ಇನ್ನೊಬ್ಬರನ್ನು ನೋಯಿಸುವದು ಮನಸ್ಸಿನಲ್ಲಿ ಪರಿಣಾಮವಾಗುವದಿಲ್ಲ, ಧರ್ಮದಲ್ಲಿ ದೃಢತೆಯುಂಟಾಗುತ್ತದೆ. ಕ್ರೋಧ ಮುಂತಾದ ಕಷಾಯಗಳು ಮಂದತರವಾಗುತ್ತವೆ. ಇನ್ನೊಬ್ಬರ ಪ್ರತಿಷ್ಠಿತ ಗುಣಗಳಲ್ಲಿ ಸಹಿಷ್ಣುತೆಯ ಭಾವವೂ ವುಂಟಾಗುತ್ತದೆ. ಇನ್ನೊಬ್ಬರ

ದುಃಖಗಳನ್ನು ದೂರ ಮಾಡುವ ಕಳಕಳಿ ಭಾವ ಉಂಟಾಗುತ್ತದೆ. ದುಃಖಿಗಳ ಸೇವೆಯನ್ನು ಮಾಡುವ ಭಾವ ಉಂಟಾಗುತ್ತದೆ. ವೀರ್ಯದಲ್ಲಿ ಕಠಿಣತೆ ಉಂಟಾಗುತ್ತದೆ. ನಾಸ್ತಿಕ ಭಾವವೂ ನಷ್ಟವಾಗುತ್ತದೆ. ಪರಸ್ತ್ರೀಯರಲ್ಲಿ ಮಾತೃ (ತಾಯಿಯ) ಭಾವನೆಯುಂಟಾಗುತ್ತದೆ. ಈ ಮಹತ್ವವಾದ ಗುಣಗಳು ಬ್ರಹ್ಮಚರ್ಯದಿಂದಲೇ ಉತ್ಪನ್ನವಾಗುತ್ತವೆ.

ಬ್ರಹ್ಮಚರ್ಯದ ನಾಶದಿಂದ ಆಗುವ ಹಾನಿ:—

ಬ್ರಹ್ಮಚರ್ಯದ ಹಾನಿಯಿಂದ ಅನೇಕ ಪ್ರಕಾರದ ರೋಗಗಳು ಶರೀರದಲ್ಲಿ ಉತ್ಪನ್ನವಾಗುವವು. ಶರೀರವು ಜೊಳ್ಳು ಆಗುತ್ತದೆ. ಸ್ವಲ್ಪ ಪರಿಶ್ರಮ ಮಾಡಿದರೂ ಅತ್ಯಂತ ಕಷ್ಟವಾಗುತ್ತದೆ. ಶೀತ ಉಷ್ಣ ಮೊದಲಾದ ಬಾಧೆಗಳು ಸಹಿಸಲಾಗುವದಿಲ್ಲ. ಬ್ರಹ್ಮಚರ್ಯದ ನಾಶದಿಂದ ಸ್ಮರಣಶಕ್ತಿಯು ನಾಶವಾಗುತ್ತದೆ. ಸಂತಾನ ಉತ್ಪತ್ತಿ ಮಾಡುವ ಶಕ್ತಿಯೂ ನಷ್ಟವಾಗುತ್ತದೆ. ಒಂದು ವೇಳೆ ಸಂತಾನಗಳ ಉತ್ಪತ್ತಿಯಾದರೂ ಕೂಡಾ ದುರ್ಬಲ ಮತ್ತು ರೋಗ ಪ್ರಕೃತಿ ಅಥವಾ ಅಲ್ಪಾಯುಷ್ಯ ಉಳ್ಳವುಗಳಾಗುತ್ತವೆ. ಸ್ವಭಾವದಲ್ಲಿ ಚಿಡವಟಿಯು ಉತ್ಪನ್ನವಾಗಿ ಯಾರು ಏನನ್ನಾದರೂ ಅಂದಿದ್ದರೆ ಸಹನವಾಗುವದಿಲ್ಲ ಆತ್ಮವಿಶ್ವಾಸವು ಕಡಿಮೆಯಾಗುತ್ತದೆ. ಕೆಲಸ ಮಾಡುವದರಲ್ಲಿ ಉತ್ಸುಕತೆ ಇರುವದಿಲ್ಲ ಶರೀರದಲ್ಲಿ ಆಲಸ್ಯ ಹರಡುತ್ತದೆ. ಚಿತ್ತವು ಯಾವತ್ತಲೂ ಸಂಶಯದಿಂದ ಕೂಡಿಕೊಂಡದ್ದಾಗಿರುತ್ತದೆ. ಮನಸ್ಸಿನಲ್ಲಿ ವಿಷಾದವು ಹರಡುತ್ತದೆ. ಯಾವದೊಂದು ಕೆಲಸ ಮಾಡುವದರಲ್ಲಿ ಉತ್ಸಾಹ ಇರುವದಿಲ್ಲ. ಮಾನಸಿಕ ಪರಿಶ್ರಮದಿಂದ ಮಸ್ತಕದಲ್ಲಿ ಅಶಕ್ತತೆ ಉಂಟಾಗುತ್ತವೆ. ಬುದ್ಧಿಯು ಮಂದವಾಗುತ್ತದೆ. ಹೆಚ್ಚಾಗಿ ವಿಚಾರ ಮಾಡುವ ಶಕ್ತಿಯು ಉಂಟಾಗುವದಿಲ್ಲ. ಅಸಂಯಮದಲ್ಲಿ ವೃದ್ಧಾವಸ್ಥೆಯು ಬೇಗನೆ ಬಂದು ಹರಡುತ್ತದೆ. ಅಕಾಲಮೃತ್ಯು ಬಂದು ಒದಗುತ್ತದೆ. ಧರ್ಮದಲ್ಲಿ ಬುದ್ಧಿಯು ಆಗುವದಿಲ್ಲ. ಇಂದ್ರಿಯಗಳು ಸಿಥಿಲವಾಗುವದರಿಂದ ಧರ್ಮ ಬುದ್ಧಿಯಲ್ಲಿ ಭಾವನೆಯು ಉಂಟಾಗುವದಿಲ್ಲ. ಸಂಯಮಧಾರಣೆ ಮಾಡುವದರಲ್ಲಿ ಹೆದರಿಕೆ ಉತ್ಪನ್ನವಾಗುತ್ತದೆ. ಆದ್ದರಿಂದ ಈ ಉತ್ತಮವಾದ ಮಾನವ ಜನ್ಮವನ್ನು ತಾಳಿದ ಮಾನವರು ಮಾನವ ರತ್ನವನ್ನು ರಕ್ಷಿಸಿ ಸ್ವರ್ಗ–ಮೋಕ್ಷಗಳ ಇಚ್ಛೆಯುಳ್ಳವರಾಗಿ ವೀರ್ಯ ರಕ್ಷಣೆಯನ್ನು ಮಾಡಬೇಕು. ವೀರ್ಯ ರಕ್ಷಣೆಯಿಂದಲೇ **ಜೀವನ ಜೀವನವಿದೆ** ವೀರ್ಯ ನಾಶದಿಂದಲೇ **ಮೃತ್ಯು**ವೆಂದು ಅರಿದು ಈ ಮಾತನ್ನು

ಎಲ್ಲರೂ ಜ್ಞಾಪಕದಲ್ಲಿ ಇಟ್ಟುಕೊಂಡು ಗ್ರಹಸ್ಥಾಶ್ರಮದಲ್ಲಿದ್ದರೂ ಕೂಡಾ ತಾನು ಕೇವಲ ಸಂತಾನದ ಉದ್ದೇಶದಿಂದಲೇ ಋತು ಕಾಲದಲ್ಲಿ ಅಥವಾ ಎರಡು ತಿಂಗಳಲ್ಲಿ ಒಮ್ಮೆ ಸ್ತ್ರೀ ಸಂಬಂಧವನ್ನು ಮಾಡಬೇಕು.

ವ್ಯವಹಾರ ಶೀಲವು ಎರಡುವಿಧವಾಗಿದೆ. ಒಂದು ಗ್ರಹಸ್ಥರು ಇನ್ನೊಂದು ಸಾಧುಗಳು- ಗ್ರಹಸ್ಥರ ಶೀಲವು ಸ್ವದಾರ ಸಂತೋಷ ವೃತ್ತಿಯಾಗಿದೆ. ಮತ್ತು ಸಾಧುಗಳ ಶೀಲವು ಮನ-ವಚನ-ಕಾಯದಿಂದ ಸರ್ವಥಾ ತ್ಯಾಗ ವಿರುತ್ತದೆ. ಶೀಲಕ್ಕೂ ಬ್ರಹ್ಮಚರ್ಯವೆಂದು ಹೇಳುವರು. ಬ್ರಹ್ಮಚರ್ಯವೇ ಇಹಲೋಕ ಮತ್ತು ಪರಲೋಕದ ಸುಖದ ಸಾಧನವಾಗಿದೆ. ನಮ್ಮ ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದ ಇದೇ ಪರಿಪಾಟಿಯೇ ನಡೆದು ಬಂದಿದೆ. ಅಂದರೆ ಬಾಲ-ಬಾಲಿಕೆಯರು ಎಷ್ಟು ಕಾಲದವರೆಗೆ ವಿದ್ಯಾಧ್ಯಯನ ಮಾಡುವರೋ ಅಷ್ಟರ ವರೆಗೆ ಬ್ರಹ್ಮಚರ್ಯವನ್ನು ಪಾಲಿಸಬೇಕೆಂದು ನಿಯಮವಾಗಿದೆ. ಈ ಬ್ರಹ್ಮಚರ್ಯವನ್ನು ಪಾಲಿಸುವ ಚಿನ್ಹವೇ ಯಜ್ಞೋಪವೀತವಾಗಿದೆ. ಅದಕ್ಕೆ ಬ್ರಹ್ಮಸೂತ್ರವೆಂತಲೂ ಹೇಳುತ್ತಾರೆ. ದ್ವಿಜಪುತ್ರನಿಗೆ ಎಂಟು ವರ್ಷದ ಅವಸ್ಥೆಯಲ್ಲಿ ಯಜ್ಞೋಪವೀತ ಅಥವಾ ಉಪನಯನ ಸಂಸ್ಕಾರವನ್ನು ಮಾಡುತ್ತಾರೆ. ಬ್ರಹ್ಮಚರ್ಯ ನಿರ್ದೋಷ ಪಾಲನಗೋಸ್ಕರ ಇದರ ವಿರೋಧಿಯಾದ ಕಾಮೋತ್ತೇಜಕ ಕಾರಣವಾಗುವಂಥ ಅಂಜನ (ಕಜ್ಜಲ) ಮಂಜನ ಹಚ್ಚುವದೂ ಕೇಶ ಬಿಡುವದೂ ಕ್ರಾಫ್ ಬಿಡುವದೂ ಗುಲಾಬ ಮುಂತಾದವುಗಳ ಲೇಪನ ಮಾಡುವದೂ ಸುಂಧರ ಸುಂದರವಾದ ವಸ್ತ್ರಾಭೂಷಣ ಮಾಡುವದೂ ವಿಲಾಸಿಯರಾದ ಹೆಂಣು ಮಕ್ಕಳ ಸಂಗತಿಯಲ್ಲಿರುವದೂ ಕಾಮವರ್ಧಕ ಕಥೆಗಳನ್ನು ಕೇಳುವದೂ ಸ್ವಾದಿಷ್ಟ ರುಚಿಕರವಾದ ಭೋಜನ ಮಾಡುವದೂ, ಇಂಥ ಪದಾರ್ಥಗಳನ್ನು ತೊರೆಯಬೇಕೆಂಬ ಭಾವವು ವಿದ್ಯಾರ್ಥಿಗಳಿಗೆ ವಿದ್ಯಾಧ್ಯಯನ ಪೂರ್ಣವಾಗುವವರೆಗೆ ಗುರುಗಳ ಮನೆಯಲ್ಲಿ (ಹತ್ತರ) ಇರಬೇಕೆಂದು ವಿಧಾನವದೆ. ಈ ಕಲಿಕಾಲ ಪ್ರಭಾವದಿಂದ ಗುರು ಕುಲವಲ್ಲಿ ವ್ಯತ್ಯಾಸವಾಗಿರುತ್ತದೆ. ಈ ವ್ಯತ್ಯಾಸವು ಕುಲಕಾಲದ ಪ್ರಭಾವದಿಂದಲೇ ಬದಲಾವಣೆಯಾಗಿರುತ್ತದೆ. ಆದರೂ ಪಾಠಶಾಲೆಯಲ್ಲಿ ಅಥವಾ ಗುರುಕುಲ ಬ್ರಹ್ಮಚಾರ್ಯಾಶ್ರಮ ಮುಂತಾದವುಗಳಲ್ಲಿ ನಿಂತು ತಮ್ಮ ಬ್ರಹ್ಮಚರ್ಯವನ್ನು ರಕ್ಷಿಸುತ್ತಾರೆ. ಈ ರೀತಿ ಬ್ರಹ್ಮಚರ್ಯಪೂರ್ವಕ ವಿದ್ಯಾಧ್ಯಯನ ಮಾಡಿ ದೇಶದ ಉಪಾರ್ಥ

ವನ್ನೂ ಧರ್ಮದ ವೃದ್ಧಿಯನ್ನೂ ಮಾಡಿದವರ ಇತಿಹಾಸಗಳು ನಮ್ಮ ಭಾರತ ವರ್ಷದಲ್ಲಿ ಈಗಲೂ ಬೆಳಗುತ್ತಲೇ ಇರುತ್ತವೆ.

ಈ ಭಾರತದಲ್ಲಿ ಶ್ರೀ ಅಕಲಂಕ ಮತ್ತು ನಿಷ್ಕಲಂಕರಂಥ ಮಹಾ ಪುರುಷರು ಆಗಿ ಹೋಗಿದ್ದಾರೆ ಮತ್ತು ಧರ್ಮದ ಧ್ವಜವನ್ನು ಮೆರೆಸುತ್ತ ಧರ್ಮ ವನ್ನು ಬೀರಿದ್ದಾರೆ. ಆದರೆ ಯಾವಾಗ ಈ ವಿದ್ಯಾರ್ಥಿಗಳ ನಿಯಮಗಳು ಬಿಟ್ಟು ಹೋಗಿವೆಯೋ ಆಗ ವಿದ್ಯಾರ್ಥಿಗಳಲ್ಲಿಇಂದ್ರಿಯ ಸಂಯಮನವು ಬಿಟ್ಟು ಹೋದುದರಿಂದ ನೈತಿಕ ಮತ್ತು ಧಾರ್ಮಿಕ ಪರಂಪರೆಯು ಬಿಟ್ಟು ವಿದ್ಯಾರ್ಥಿ ಗಳು ಇಂದ್ರಿಯ ಮತ್ತು ವಿಷಯ ಕಷಾಯಗಳ ಆಧೀನರಾಗಿ ಮತ್ತು ತಾಯಿ-ತಂದೆಗಳ ನೈತಿಕ ಮತ್ತು ಧಾರ್ಮಿಕ ಪ್ರಥಗಳು ಬಿಟ್ಟು ಹೋದುದರಿಂದ ಅಲ್ಪ ವಯಸ್ಸಿನಲ್ಲಿಯೇ ಪಾಣಿಗ್ರಹಣವನ್ನು ಮಾಡಲಾರಂಭಿಸಿದರು. ಆದ್ದರಿಂದ ವಿದ್ಯಾಧ್ಯಯನ ಮಾಡುವದರಲ್ಲಿ ದೊಡ್ಡ ವಿಘ್ನ ಉಂಟಾಯಿತು. ಈ ಕಾರಣ ದಿಂದ ವಿದ್ಯಾರ್ಥಿಗಳು ಸ್ವಲ್ಪ ಕಷ್ಟಕ್ಕೆ ಭಯ ಪಡುವವರಾಗುತ್ತಾರೆ ಅವರಿಗೆ ಕಾಮಿನಿಆಯಿಲ್, ಬರ್ಫ, ಹಾಲು, ಬದಾಮು, ಸಕ್ಕರೆಮಿಶ್ರಿತ ಹಾಲು, ಅರ್ಕ, ಗುಲಾಬ, ಕೇತಕಿ, ಎಣ್ಣೆ, ಖಸಖಸಿ, ಹಟಿ (ವಾಳಾದ ಚಾಪಿ) ಪಂಖ ಮೋಜಾದುಂಬಂಥ, ಫ್ಲೇಟರ, ಕೊಡೆ, ಮತ್ತು ಕಾಲಮರಿ ಮೊದಲಾದ ಸಾಮಾನುಗಳ ಅವಶ್ಯಕತೆಯು ಹೆಚ್ಚಾಗಹತ್ತಿದೆ ಆದಕಾರಣದಿಂದ ಸದ್ಯಕ್ಕೆ ಈಗಿನ ವಿದ್ಯಾರ್ಥಿಗಳಲ್ಲಿ ಆರಾಮು ದೃಷ್ಟಿ ಬೆಳೆದು ಕಷ್ಟಕ್ಕೆ ಭಯಪಡುವವರಾಗಿ ಅವರಲ್ಲಿ ನಿರ್ಬಲತೆಯು ಹೆಚ್ಚಾಗಹತ್ತಿದೆ. ಈಗ ಮೇಲೆ ಹೇಳಿದ ಪದಾರ್ಥಗಳು ವಿದ್ಯಾರ್ಥಿಗಳನ್ನು ನಿರ್ಬಲ ಮಾಡುವ ಕಾರಣಗಳಾಗಿವೆ. ಈಗಿನ ವಿದ್ಯಾರ್ಥಿ ಗಳಲ್ಲಿ ಮತ್ತು ಪ್ರಾಚೀನ ವಿದ್ಯಾರ್ಥಿಗಳಲ್ಲಿ ಅಸಮಾನ್ಯ ಅಂತರವಿದೆ. ಹಿಂದಿನ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕೆಲಸಗಳನ್ನು ಮಾಡುತ್ತಿದ್ದರು. ಪ್ರಾಚೀನ ಕಾಲದ ವಿದ್ಯಾರ್ಥಿಗಳು ಉಷ್ಣ ಶೀತ ಮೊದಲಾದ ಬಾಧೆಗಳಿಗೆ ಹೆದರದೆ, ಎಂಥ ಕಷ್ಟಗಳು ಬಂದರೂ ಅವನ್ನು ಸಹಜವಾಗಿ ಸಹಿಸುತ್ತಿದ್ದರು.

ಇದರ ಕಾರಣವು ಬ್ರಹ್ಮಚರ್ಯವೇ ಮುಖ್ಯವಾಗಿದೆ. ಈ ಕಾಲದ ವಿದ್ಯಾರ್ಥಿಗಳಲ್ಲಿ ನಿರ್ಬಲತೆಯು ಹೆಚ್ಚಾಗಿರುವದರಿಂದ ಅಲ್ಪವಯಸ್ಸಿನಲ್ಲಿಯೇ ವೀರ್ಯ ಕ್ಷಯವಾಗುತ್ತಿರುವದು. ವಿದ್ಯಾ ಉಪಾರ್ಜನೆಗೆ ಬ್ರಹ್ಮಚರ್ಯವು ಅತ್ಯಂತ ಅವಶ್ಯಕವಾಗಿದೆ. ಈ ಬ್ರಹ್ಮಚರ್ಯದ ಸಾಮರ್ಥ್ಯದಿಂದ ನಿರ್ಭಯ ರಾಗಿ ಭಯಂಕರವಾಗಿ ಗುಡ್ಡ—ಕಾಡುಗಳಲ್ಲಿ ಹಿಂದಿನ ಕಾಲದಲ್ಲಿ ಚರಿಸುತ್ತಿ

ದ್ದರು. ವಿದ್ಯಾಉಪಾರ್ಜನೆ ಪೂರೈಸಿದ ನಂತರ ಗ್ರಹಸ್ಥಾವಸ್ಥೆಯಲ್ಲಿ ಲಗ್ನವಾಗಿ ತನ್ನ ಜೀವನದಲ್ಲಿಒಂದೇ ಸಾರೆ ಕಾಮ ಸೇವನೆಯಿಂದ ವಿಷಯವನ್ನು ಭೋಗಿಸಿ ಬಲಿಷ್ಟರಾದ ಪುತ್ರರತ್ನಗಳಿಗೆ ಜನ್ಮಕೊಡುತ್ತಿದ್ದರು. ಇಂಥ ಸ್ತ್ರೀರತ್ನಗಳೂ ಇರುತ್ತಿದ್ದರು. ಬ್ರಹ್ಮಚರ್ಯವನ್ನು ನಷ್ಟಮಾಡಿ ಈಗಿನ ಎಷ್ಟೋ ಜನರು ತಮ್ಮ ಜೀವನದಲ್ಲಿ ಸಂತಾನ ಮುಖವನ್ನು ನೋಡುವ ಆತುರತೆಯುಳ್ಳವರಾಗಿ ಕಡೆಯಲ್ಲಿ ಪ್ರಾಣಬಿಡುವವರಾಗುವರು. ಒಂದು ವೇಳೆ ಸಂತಾನವಾಗಿದ್ದರೂ ಕೂಡಾ ಅಲ್ಪಾಯುಗಳಾಗಿರುತ್ತಾರೆ. ಒಂದು ವೇಳೆ ಜೀವಿಸಿದ್ದರೂ ಶರೀರವು ರೋಗದಿಂದ ನಿರ್ಬಲವಾಗಿ ಯಾವತ್ತೂ ವೈದ್ಯ ಡಾಕ್ಟರರ ಮನೆಗೆ ಹಾಜರಿ ಕೊಡುವವರಾಗುವರು. ನಿರಂತರವಾಗಿ ರೋಗಿಗಳಾಗಿರುವದರಿಂದ ಪ್ರತಿ ದಿವಸ ಔಷಧವನ್ನು ಸೇವಿಸದೆ ಗತ್ಯಂತರವಿಲ್ಲದವರಾಗುತ್ತಾರೆ. ಅನೇಕ ಔಷಧಗಳ ಸೇವನೆಗಳಿಂದಲೇ ರೋಗಗಳು ಹೆಚ್ಚಾಗುತ್ತವೆ. ಅಂಥ ಸಂತಾನ ಗಳು ಸ್ವಪರ-ಕಲ್ಯಾಣವನ್ನು ಮಾಡುವ ಸಾಮರ್ಥ್ಯವಾನರಾಗುವದಿಲ್ಲ. ಅವರು ಕೇವಲ ಆಯುಷ್ಯದ ದಿನಗಳನ್ನೆ ಉರುಳಿಸುತ್ತ ಇರುತ್ತಾರೆ. ಮತ್ತು ಅವರ ಜೀವನವೇ ಅವರಿಗೆ ಭಾರವಾಗುತ್ತದೆ. ಇಷ್ಟಾದರೂ ಕೂಡಾ ಅವರು ಅಜ್ಞಾನದಿಂದ ಅತಿ ವಾಸನೆಯಿಂದ ತನ್ನ ಹೆಂಡತಿ ತನ್ನ ಇನ್ನೊಬ್ಬ ಸ್ತ್ರೀಯುಳ ಕೂಡಾ ವಿಷಯ ಮಗ್ನವಾಗಿರ ಬಯಸುತ್ತಾನೆ. ಇಷ್ಟರಮೇಲೆ ಇರದೆ ಇಚ್ಛೆಯ ಪೂರ್ತಿಗೆ ಅನೇಕ ವೇಶ್ಯೆಯರಲ್ಲಿ ರತರಾಗುತ್ತಾರೆ. ಇದರಂತೆ ಶೀಲದ ಮರ್ಯಾದೆ ಯಿಲ್ಲದ ಸ್ತ್ರೀಯರೂ ಸಹ ತಮ್ಮ ಪತಿಯ ಹೊರ್ತು ವ್ಯಭಿಚ್ಯಾರೀ ಸ್ತ್ರೀ ಮತ್ತು ಪುರುಷರ ಜೊತೆಯಿಂದ ತಮ್ಮ ಮರ್ಯಾದೆ, ಶೀಲ ಮತ್ತು ಬಲ ವೀರ್ಯಗಳನ್ನು ನಾಶ ಮಾಡಿಕೊಳ್ಳುತ್ತಾರೆ. ಇದರಂತೆ ಮಾಡುವದರಿಂದ ಅವರ ಶರೀರದ ಹಾನಿಯಾಗಿ ಲೋಕನಿಂದೆಗೆ ಪಾತ್ರರಾಗುತ್ತಾರೆ. ಇದಲ್ಲದೆ ರಾಜದಂಡ, ಪಂಚದಂಡ ಮುಂತಾದ ದಂಡನೆಗೆ ಪಾತ್ರರಾಗಬೇಕಾಗುತ್ತದೆ. ಈ ಬ್ರಹ್ಮ ಚರ್ಯದ ಹಾನಿಯಿಂದ ಅನಿವಾರ್ಯಚ ಭಗಂದರ, ಪ್ರಮೆಯ, ಕ್ಯಾನ್ಸರ್, ಕ್ಷಯ, ಇದಲ್ಲದೆ ಇನ್ನೂ ಅನೇಕ ಭಿನ್ನಭಿನ್ನವಾದ ರೋಗಗಳು ಉತ್ಪನ್ನವಾಗಿ ಶರೀರವು ನಿರ್ಜೀವವಾಗುತ್ತದೆ. ಅಂಗಭಂಗವನ್ನು ಮಾಡಬೇಕಾಗುತ್ತದೆ. ಇದಲ್ಲದೆ ಸಂಸಾರವನ್ನು ಇದರಲ್ಲಿಯೇ ಕಳೆದುಕೊಳ್ಳಬೇಕಾಗುತ್ತದೆ. ಅಲ್ಲದೆ ದೀನದರಿದ್ರರಾಗಿ ಎರಡನೆಯವರ ಅನ್ನಕ್ಕೆ ಪ್ರಿಯವಾಗಬೇಕಾಗುತ್ತದೆ. ಈ ಜೀವನದಲ್ಲಿ ಅವನು ಕಾಮೀ ಆಗಿರುವದರಿಂದ ಜನರ ನಿಂದೆಗೆ ಪಾತ್ರನಾಗ

ಬೇಕಾಗುತ್ತದೆ. ಕಾಮೀ ಪುರುಷನು ಸ್ತ್ರೀ, ತಾಯಿ, ತಂಗಿ, ಮಗಳು ಎಂಬ ಆಪ್ತತ್ವವನ್ನು ಲಕ್ಷಿಸುವದಿಲ್ಲ. ಈ ಪ್ರಕಾರಾ ಬ್ರಹ್ಮಚರ್ಯದ ಹಾನಿಯಿಂದ ಅಥವಾ ವೀರ್ಯಹಾನಿಯಿಂದ ರೋಗಿಯಾಗಿ ಅನೇಕ ದುಃಖದಿಂದ ಪೀಡಿತನಾಗಿ ಆರ್ಥ ಮತ್ತು ಕ್ರೋಧ ಧ್ಯಾನಗಳಿಂದ ಕೂಡಿ ಮುಂದೆ ದುಃಖಕ್ಕೆ ಪಾತ್ರನಾಗಿ ಅನೇಕ ನಿಂದ್ಯದಿಂದ ದೀರ್ಘ ಸಂಸಾರಕ್ಕೆ ತುತ್ತಾಗುತ್ತಾನೆ. ಆದ್ದರಿಂದ ಯಾರಿಗೆ ಮೋಕ್ಷ ಇಚ್ಛೆಯನ್ನು ಮಾಡಿಕೊಳ್ಳುವದಿದೆಯೋ ಅವರು ತಮ್ಮ ಜೀವನವನ್ನು ಬ್ರಹ್ಮಚರ್ಯ ಅಥವಾ ಶೀಲದ ಮರ್ಯಾದೆಯನು ಮಾಡಿಕೊಂಡು ಅಥವಾ ಸ್ವದಾರ ಸಂತೋಷಯುಕ್ತರಾಗಿ ಸ್ವದಾರಸಂತೋಷ ಅಥವಾ ಬ್ರಹ್ಮಚರ್ಯವನ್ನು ಪಾಲನಮಾಡಿ ತಕ್ಕಮಟ್ಟಿಗೆ ಸಂಯಮುವನ್ನು ಸಾಧಿಸಿ ಇಹ—ಪರಲೋಕ ಸುಖವನ್ನು ಸಾಧಿಸಿಕೊಳ್ಳಬೇಕೆಂದು ಭಾವವು.

ಇತಿ ಓಂ ಹ್ರೀಂ ಉತ್ತಮ ಬ್ರಹ್ಮಚರ್ಯ ಧರ್ಮಾಂಗಾಯನಮಃ

ಸಮಾಪ್ತ